ಸೋಮವಾರ, ಸೆಪ್ಟೆಂಬರ್ 11, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 253 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ ಜೀವಾನ್ವೇಷಣೆಯಲ್ಲಿ ಅಣಬೆಗಳ ಲೋಕ

ಆಳ-ಅಗಲ
ತೊಗರಿ ಬೇಳೆ ಗಗನಮುಖಿ ಬೆಲೆ

'ಒಬಿಸಿ ಪಟ್ಟಿಗೆ ಉಪ ಜಾತಿ ಸೇರಿಸಲು ಆಗ್ರಹ' 6

ಆದಿತ್ಯ ಎಲ್1 ಕಕ್ಷೆ ಬದಲಾವಣೆ 6

ರಾಜ್ಯ ಸರ್ಕಾರಕ್ಕೆ ವಿವಿಧ ಮಠಾಧೀಶರ ಆಗ್ರಹ

'ಗೋಹತ್ಯೆ, ಮತಾಂತರ ನಿಷೇಧ ಕಾಯ್ದೆ ಹಿಂಪಡೆಯದಿರಿ' 5

ಮಹತ್ವಾಕಾಂಕ್ಷೆಯ ಜಿ20 ಶೃಂಗಸಭೆಗೆ ತೆರೆ • ಗುಂಪಿನ ನಾಯಕತ್ವ ಬ್ರೆಜಿಲ್‌ಗೆ ಹಸ್ತಾಂತರ

ಭದ್ರತಾ ಮಂಡಳಿ ಸ್ಥಾನಕ್ಕೆ ಆಗ್ರಹ

• ಮಂಜುನಾಥ ಹೆಬ್ಬಾರ್

ನವದೆಹಲಿ: ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ವಿಸ್ತರಣೆ, ಎಲ್ಲ ಜಾಗತಿಕ ಸಂಸ್ಥೆಗಳ ಸುಧಾರಣೆಗೆ ಬಲವಾದ ಸಂದೇಶ ರವಾನಿಸಿರುವ ಪ್ರಧಾನಿ ನರೇಂದ್ರ ಮೋದಿ, ಈ ಸಂಸ್ಥೆಗಳು ಜಗತ್ತಿನ ಹೊಸ ವಾಸ್ತವವನ್ನು ಪ್ರತಿಬಿಂಬಿಸಬೇಕು ಎಂದು ಕಿವಿಮಾತು ಹೇಳಿದ್ದಾರೆ. ಈ ಮೂಲಕ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವ ದೊರೆಯಬೇಕು ಎಂಬ ಆಗ್ರಹವನ್ನು ಭಾರತವು ಪರೋಕ್ಷವಾಗಿ ಪುನರುಚ್ಚರಿಸಿದೆ.

ಕೃತಕ ಬುದ್ಧಿಮತ್ತೆಯ ಜವಾಬ್ದಾರಿಯುತ ಮಾನವ ಕೇಂದ್ರಿತ ನಿರ್ವಹಣೆಗಾಗಿ ರೂಪುರೇಷೆ ತಯಾರಿಸಲು ಅಂತರ ಸರ್ಕಾರಿ ಒಕ್ಕೂಟ ರಚಿಸಲು ಮೋದಿ ಸಲಹೆ ನೀಡಿದ್ದಾರೆ. 'ಸಮಯದೊಂದಿಗೆ ಬದಲಾಗದವರು ಪ್ರಸ್ತುತತೆ ಕಳೆದುಕೊಳ್ಳುತ್ತಾರೆ ಎಂಬುದು ನೈಸರ್ಗಿಕ ನಿಯಮ' ಎಂದೂ ಅವರು ಎಚ್ಚರಿಸಿದ್ದಾರೆ.

ಭಾರತದ ಅಧ್ಯಕ್ಷತೆಯಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ಎರಡು ದಿನ ನಡೆದ 18ನೇ ಜಿ–20 ಶೃಂಗಸಭೆಯು ಭಾನುವಾರ ತೆರೆ ಕಂಡಿತು. ವಿಶ್ವ ನಾಯಕರ ಶೃಂಗಸಭೆಯ ನಿರ್ಣಯಗಳು ಹಾಗೂ ಸಲಹೆಗಳನ್ನು ಪರಿಶೀಲಿಸಲು ನವೆಂಬರ್ ಅಂತ್ಯದಲ್ಲಿ ಒಂದು ವರ್ಚುವಲ್ ಸಮ್ಮೇಳನ ನಡೆಸುವ ಪ್ರಸ್ತಾವನೆಯನ್ನು ಮೋದಿ ಮುಂದಿಟ್ಟಿದ್ದಾರೆ.

ಮುಂದಿನ ಜಿ20 ಶೃಂಗಸಭೆ ಬ್ರೆಜಿಲ್‌ನಲ್ಲಿ ನಡೆಯಲಿದೆ. ಬ್ರೆಜಿಲ್ ಈ ವರ್ಷದ ಡಿಸೆಂಬರ್ 1ರಂದು ಜಿ20 ಗುಂಪಿನ ಅಧ್ಯಕ್ಷ ಸ್ಥಾನವನ್ನು ಅಧಿಕೃತವಾಗಿ ವಹಿಸಿಕೊಳ್ಳಲಿದೆ.

11ನೇ ಪುಟ ನೋಡಿ

ಪ್ರಧಾನಿ ನರೇಂದ್ರ ಮೋದಿ, ಅಮೆರಿಕ ಅಧ್ಯಕ್ಷ ಜೋ ಬೈಡನ್, ಬ್ರಿಟನ್ ಪ್ರಧಾನಿ ರಿಷಿ ಸುನಕ್ ಹಾಗೂ ಹಲವು ದೇಶಗಳ ನಾಯಕರು ನವದೆಹಲಿಯ ರಾಜ್‌ಘಾಟ್‌ನಲ್ಲಿರುವ ಮಹಾತ್ಮ ಗಾಂಧಿ ಸ್ಮಾರಕಕ್ಕೆ ಭೇಟಿದರು –ಪಿಟಿಐ ಚಿತ್ರ

'ನವದೆಹಲಿ ಘೋಷಣೆ' ಹಿಂದಿನ ಪರಿಶ್ರಮ

ಜಿ–20 ಶೃಂಗಸಭೆಯಲ್ಲಿ ಮೊದಲನೇ ದಿನವೇ ಒಪ್ಪಿಗೆ ಮುದ್ರೆ ಸಿಕ್ಕ 'ನವದೆಹಲಿ ಘೋಷಣೆ'ಯು 200 ಗಂಟೆಗಳ ನಿರಂತರ ಮಾತುಕತೆಗಳು, 300 ದ್ವಿಪಕ್ಷೀಯ ಸಭೆಗಳು ಹಾಗೂ 15 ಕರಡುಗಳ ಫಲಿತಾಂಶವಾಗಿದೆ.

ಈ ವಿಷಯವನ್ನು ಬಹಿರಂಗಪಡಿಸಿದವರು ಭಾರತೀಯ ಶೆರ್ಪಾ ಅಮಿತಾಭ್ ಕಾಂತ್ ಅವರು. ಭಾನುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು 'ನವದೆಹಲಿ ಘೋಷಣೆ' ಹಿಂದೆ ಭಾರತೀಯ ತಂಡ ಪಟ್ಟ ಶ್ರಮವನ್ನು ಬಿಚ್ಚಿಟ್ಟರು. ಭಾರತದ ಯುವ ರಾಜತಾಂತ್ರಿಕ ಶ್ರಮದ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡಿದರು. ಜಿ20 ರಾಷ್ಟ್ರಗಳ ಶೆರ್ಪಾಗಳು ನಿದ್ದೆಯಿಲ್ಲದ ರಾತ್ರಿಗಳನ್ನು ಕಳೆಯುವಂತೆ ಮಾಡಿದರು ಎಂದೂ ಹೇಳಿದರು.

11ನೇ ಪುಟ ನೋಡಿ

'ಮೋದಿ, ಎಚ್‌ಡಿಕೆಯಿಂದ ಸೀಟು ಹಂಚಿಕೆ ನಿರ್ಧಾರ'

ಜೆಡಿಎಸ್ ಸಮಾವೇಶದಲ್ಲಿ ಎಚ್‌.ಡಿ. ದೇವೇಗೌಡ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಕುರಿತು ಚರ್ಚೆ ನಡೆದಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಸೀಟು ಹಂಚಿಕೆಯನ್ನು ತೀರ್ಮಾನಿಸುತ್ತಾರೆ' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಹೇಳಿದರು.

ನಗರದ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, 'ಬಿಜೆಪಿ– ಜೆಡಿಎಸ್ ಮೈತ್ರಿ ಬಗ್ಗೆ ವಾರದಿಂದ ಏನೇನೋ ಸುದ್ದಿಗಳು ಬರುತ್ತಿವೆ. ಮೋದಿ ಅವರ ಜತೆ ಮಾತುಕತೆ ನಡೆದಿರುವುದು ನಿಜ. ಆದರೆ, ಸೀಟು ಹಂಚಿಕೆ ಕುರಿತು ಯಾವ ತೀರ್ಮಾನವೂ ಆಗಿಲ್ಲ' ಎಂದರು.

'ಅವರ ಕಡೆಯಿಂದಲೇ ಮಾತುಕತೆಯ ಪ್ರಸ್ತಾವ ಬಂತು. ಆ ಬಳಿಕ ಚರ್ಚೆ ನಡೆದಿದೆ. ದಶಕಗಳಿಂದ ಜೆಡಿಎಸ್ ಪಕ್ಷವನ್ನು ಉಳಿಸಿಕೊಂಡು ಬರಲಾಗಿದೆ. ಈಗ ಕೂಡ ಪಕ್ಷವನ್ನು ಉಳಿಸುವುದು ಮುಖ್ಯ. ವಿಜಯಪುರ, ಬೀದರ್, ರಾಯಚೂರು ಸೇರಿದಂತೆ ಕೆಲವು ಕ್ಷೇತ್ರಗಳಲ್ಲಿ ಜೆಡಿಎಸ್ ಬೆಂಬಲ ನೀಡಿದರೆ ಬಿಜೆಪಿ ಗೆಲ್ಲಲಿದೆ' ಎಂದರು.

'ಈಗ ನನಗೆ ಪಕ್ಷದ ಉಳಿವು ಮುಖ್ಯ. ಸೀಟು ಹಂಚಿಕೆ ಬಳಿಕ ನಮ್ಮ ಪಕ್ಷದ ಸ್ಪರ್ಧೆ ಎಲ್ಲಿ ಎಂಬುದು ತಿಳಿಯುತ್ತದೆ. ಗಾಲಿ ಕುರ್ಚಿಯಲ್ಲೇ ಕುಳಿತು ಎಲ್ಲ ಕ್ಷೇತ್ರಗಳಿಗೂ ಹೋಗಿ ಪ್ರಚಾರ ನಡೆಸುತ್ತೇನೆ' ಎಂದರು.

'ಹಿಂದೆ ಸಮ್ಮಿಶ್ರ ಸರ್ಕಾರ ಪತನವಾಗುವ ಮುನ್ನ ಮೋದಿಯವರು ಕುಮಾರಸ್ವಾಮಿ ಅವರನ್ನು ಕರೆದು ಆಹ್ವಾನ ನೀಡಿದ್ದರು. ದೀರ್ಘಕಾಲ ಮುಖ್ಯಮಂತ್ರಿ ಹುದ್ದೆ ಕೊಡುವ ಭರವಸೆ ನೀಡಿದ್ದರು. ಆದರೆ, ತಮ್ಮ ಸಹಮತ ಇಲ್ಲ ಎಂಬ ಕಾರಣಕ್ಕಾಗಿ ಕುಮಾರಸ್ವಾಮಿ ನಿರಾಕರಿಸಿದ್ದರು' ಎಂದು ಹೇಳಿದರು.

ಇನ್ನೊಂದು ಸುದ್ದಿ 5

ಹೊಸ ಅಧ್ಯಾಯ ಆರಂಭ

'2006ರಲ್ಲಿ ತಂದೆಯ ಇಚ್ಛೆಗೆ ವಿರುದ್ಧವಾಗಿ ಬಿಜೆಪಿ ಜತೆ ಸೇರಿ ಸರ್ಕಾರ ರಚಿಸಿದ್ದೆ. ಆಗಲೂ ನಾನು ಪಕ್ಷ ಉಳಿಸುವುದಕ್ಕಾಗಿಯೇ ಆ ನಿರ್ಧಾರ ಕೈಗೊಂಡಿದ್ದೆ. ಈಗ ತಂದೆಯವರ ಸಹಮತದೊಂದಿಗೇ ಹೊಸ ಅಧ್ಯಾಯ ಆರಂಭಿಸುತ್ತಿದ್ದೇನೆ' ಎಂದು ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

'ಇದು ಕೇವಲ ಚುನಾವಣಾ ಹೊಂದಾಣಿಕೆ ಅಲ್ಲ. ರಾಜ್ಯಕ್ಕೆ ಆಗುವ ಅನ್ಯಾಯದ ವಿರುದ್ಧ ಧ್ವನಿ ಎತ್ತುವುದಕ್ಕೂ ಅವಕಾಶ ದೊರಕಬೇಕು. ನಾಡಿನ ಸಂಪತ್ತಿನ ರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಒಂದಾಗಬೇಕಾಗಿದೆ' ಎಂದು ಹೇಳಿದರು.

ಬಿಜೆಪಿ ಜತೆಗಿನ ಮೈತ್ರಿ ಕುರಿತು ದೇವೇಗೌಡ, ಕುಮಾರಸ್ವಾಮಿ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಮತ್ತು ಪಕ್ಷದ ರಾಜ್ಯ ಪ್ರಮುಖರ ಸಮಿತಿ (ಕೋರ್ ಕಮಿಟಿ) ಅಧ್ಯಕ್ಷ ಜಿ.ಟಿ. ದೇವೇಗೌಡ ಅವರನ್ನೊಳಗೊಂಡ ತಂಡ ಅಂತಿಮ ನಿರ್ಧಾರಕ್ಕೆ ಬರಬಹುದು ಎಂದು ಸಭೆಯಲ್ಲಿ ಮಾತನಾಡಿದ ಎಲ್ಲ ಮುಖಂಡರು ಸಹಮತ ವ್ಯಕ್ತಪಡಿಸಿದರು.

8 ತಿಂಗಳಲ್ಲೇ 1 ಲಕ್ಷ ಇವಿ ನೋಂದಣಿ

ಪ್ರಜಾವಾಣಿ ವಾರ್ತೆ

ರಾಜ್ಯದಲ್ಲಿ ಈ ವರ್ಷದ ಮೊದಲ ಎಂಟು ತಿಂಗಳಲ್ಲಿ 1 ಲಕ್ಷಕ್ಕೂ ಹೆಚ್ಚು ವಿದ್ಯುತ್ ಚಾಲಿತ ವಾಹನಗಳು (ಇವಿ) ನೋಂದಣಿಯಾಗಿವೆ. 2022ರ ಇಡೀ ವರ್ಷದಲ್ಲಿ ರಾಜ್ಯದಾದ್ಯಂತ ನೋಂದಣಿಯಾಗಿದ್ದ ಇವಿಗಳ ಸಂಖ್ಯೆ 95 ಸಾವಿರದಷ್ಟಿತ್ತು. ಈ ವರ್ಷ ಎಂಟು ತಿಂಗಳಲ್ಲೇ 1 ಲಕ್ಷಕ್ಕಿಂತ ಹೆಚ್ಚು ಇವಿಗಳ ನೋಂದಣಿಯಾಗಿದೆ. ಆದರೆ, ಇವಿಗಳ ಸಂಖ್ಯೆ ಹೆಚ್ಚಾಗುತ್ತಿರುವ ಪ್ರಮಾಣದಲ್ಲೇ ರಾಜ್ಯದಲ್ಲಿ ಸಾರ್ವಜನಿಕ ಚಾರ್ಜಿಂಗ್ ಘಟಕಗಳು ಸ್ಥಾಪನೆಯಾಗುತ್ತಿಲ್ಲ

95,929
2022ರಲ್ಲಿ ರಾಜ್ಯದಾದ್ಯಂತ ನೋಂದಣಿಯಾದ ಇವಿಗಳ ಸಂಖ್ಯೆ

1.02 ಲಕ್ಷ
2023ರ ಜನವರಿ 1ರಿಂದ ಸೆಪ್ಟೆಂಬರ್ 7ರವರೆಗೆ ರಾಜ್ಯದಾದ್ಯಂತ ನೋಂದಣಿಯಾದ ಇವಿಗಳ ಸಂಖ್ಯೆ

584
ರಾಜ್ಯದಲ್ಲಿರುವ ಸಾರ್ವಜನಿಕ ಚಾರ್ಜಿಂಗ್ ಘಟಕಗಳ ಸಂಖ್ಯೆ

300
ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಚಾರ್ಜಿಂಗ್ ಘಟಕಗಳ ಸಂಖ್ಯೆ

265
ವಿವಿಧ ಎಸ್ಕಾಂಗಳು ಸ್ಥಾಪಿಸಿರುವ ಚಾರ್ಜಿಂಗ್ ಘಟಕಗಳ ಸಂಖ್ಯೆ

19
ಸರ್ಕಾರದ ವಿವಿಧ ಇಲಾಖೆಗಳ ಚಾರ್ಜಿಂಗ್ ಘಟಕಗಳ ಸಂಖ್ಯೆ

ಸಾರ್ವಜನಿಕ ಚಾರ್ಜಿಂಗ್ ಘಟಕಗಳು

ರಾಜ್ಯದಲ್ಲಿ ಇವಿ ಸಾರ್ವಜನಿಕ ಚಾರ್ಜಿಂಜ್ ಘಟಕಗಳನ್ನು ಸ್ಥಾಪಿಸಲು 2018ರಲ್ಲಿ ಚಾಲನೆ ನೀಡಲಾಗಿತ್ತು. ಆದರೆ, ನಿರೀಕ್ಷಿತ ಸಂಖ್ಯೆಯಲ್ಲಿ ಘಟಕಗಳನ್ನು ಸ್ಥಾಪಿಸಲು ಸಾಧ್ಯವಾಗಿಲ್ಲ. 2023ರ ಸೆಪ್ಟೆಂಬರ್‌ವರೆಗೆ ರಾಜ್ಯದ ವಿವಿಧೆಡೆ ಸ್ಥಾಪಿಸಲಾದ ಚಾರ್ಜಿಂಗ್ ಘಟಕಗಳ ಸಂಖ್ಯೆ 584 ಮಾತ್ರ. 2023ರಲ್ಲಿ ಹೊಸದಾಗಿ 1,270 ಚಾರ್ಜಿಂಗ್ ಘಟಕಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ ಎಂದು ಇಂಧನ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಇವಿಗಳ ತಂತ್ರಜ್ಞಾನ ಮತ್ತು ಕಾರ್ಯಕ್ಷಮತೆ ಗಣನೀಯ ಪ್ರಮಾಣದಲ್ಲಿ ಸುಧಾರಿಸಿದೆ. ಅವುಗಳ ಬಗೆಗೆ ಜನರ ವಿಶ್ವಾಸ ಹೆಚ್ಚಾಗಿದೆ. ಇವಿಗಳಿಂದಾಗುವ ಉಳಿತಾಯವೂ, ಅವುಗಳ ಖರೀದಿಯಲ್ಲಿ ಆಗಿರುವ ಏರಿಕೆಗೆ ಪ್ರಮುಖ ಕಾರಣ. ಆದರೆ, ಅದೇ ಮಟ್ಟದಲ್ಲಿ ಚಾರ್ಜಿಂಗ್ ಘಟಕಗಳು ಸ್ಥಾಪನೆಯಾಗುತ್ತಿಲ್ಲ. ಬಸ್ಸು, ಲಾರಿ ಮತ್ತು ಕಾರುಗಳಿಗೆ ಸಾರ್ವಜನಿಕ ಚಾರ್ಜಿಂಗ್ ಘಟಕಗಳ ಅವಶ್ಯಕತೆ ಇದೆ. ಜತೆಗೆ ದ್ವಿಚಕ್ರ ವಾಹನಗಳಿಗಾಗಿ ಅಪಾರ್ಟ್‌ಮೆಂಟ್‌ಗಳಲ್ಲಿ ಚಾರ್ಜಿಂಗ್ ಘಟಕ ಆರಂಭಿಸುವುದನ್ನು ಉತ್ತೇಜಿಸಬೇಕು

ಪವನ್ ಮುಳುಕುಟ್ಲ, ವರ್ಲ್ಡ್ ರಿಸೋರ್ಸ್ ಇನ್‌ಸ್ಟಿಟ್ಯೂಟ್ ನಿರ್ದೇಶಕ

ಬೆಂಗಳೂರಿನಲ್ಲಿ ಮುಷ್ಕರ: ಬಿಎಂಟಿಸಿಯಿಂದ ಹೆಚ್ಚುವರಿ ಬಸ್

ಇಂದು ಖಾಸಗಿ ಸಾರಿಗೆ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಕ್ತಿ' ಯೋಜನೆಯನ್ನು ಖಾಸಗಿ ಬಸ್‌ಗಳಿಗೂ ವಿಸ್ತರಿಸಬೇಕು ಅಥವಾ ರಸ್ತೆ ತೆರಿಗೆ ರದ್ದು ಮಾಡಬೇಕು. ರ್‍ಯಾಪಿಡೊ ಬೈಕ್ ಟ್ಯಾಕ್ಸಿ ನಿಷೇಧಿಸಬೇಕು ಎಂಬುದೂ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ಸೋಮವಾರ ಬೆಂಗಳೂರಿನಲ್ಲಿ ಖಾಸಗಿ ಸಾರಿಗೆ ಬಂದ್ ನಡೆಸಲಿದೆ.

ಭಾನುವಾರ ರಾತ್ರಿ 12ರಿಂದ ಸೋಮವಾರ ರಾತ್ರಿ 12ರವರೆಗೆ ನಡೆಯಲಿರುವ ಈ ಖಾಸಗಿ ಸಾರಿಗೆ ಬಂದ್‌ನಿಂದಾಗಿ ಸಾರ್ವಜನಿಕರಿಗೆ ನಗರದಲ್ಲಿ ಓಡಾಟ ನಡೆಸಲು ತೊಂದರೆ ಆಗಲಿದೆ.

ರ್‍ಯಾಪಿಡೊ, ಓಲಾ, ಉಬರ್, ಇನ್ನಿತರ ಆನ್‌ಲೈನ್ ಕಂಪನಿಗಳಿಗೆ ಇ–ರಿಕ್ಷಾಗಳ ನೇರ ನೋಂದಣಿ ಮಾಡುವುದನ್ನು ನಿಷೇಧಿಸಬೇಕು. ಬಿಳಿ ಫಲಕ ಹೊಂದಿರುವ ವಾಹನಗಳಲ್ಲಿ ಬಾಡಿಗೆ ಮಾಡುವವರ ಮೇಲೆ ಕ್ರಮ ಕೈಗೊಳ್ಳಬೇಕು. ಓಲಾ, ಉಬರ್, ರೆಡ್‌ಬಸ್‌ನಂತಹ ಆನ್‌ಲೈನ್ ಕಂಪನಿಗಳು ನಿಗದಿಯಾಗಿರುವ ಶೇ 5ಕ್ಕಿಂತ ಹೆಚ್ಚು ಕಮಿಷನ್ ಪಡೆಯುವುದನ್ನು ನಿರ್ಬಂಧಿಸಬೇಕು. ವಿಮಾನ ನಿಲ್ದಾಣಕ್ಕೆ ಏಕರೂಪ ದರ ನಿರ್ಧರಿಸಬೇಕು. ವಾಹನಗಳಿಗೆ ಜೀವಿತಾವಧಿ ತೆರಿಗೆ ವಿಧಿಸುವುದನ್ನು ಕೈಬಿಡಬೇಕು. ಚಾಲಕರಿಗೆ ₹10 ಸಾವಿರ ಮಾಸಿಕ ಪರಿಹಾರ ಧನಸಹಾಯ ನೀಡಬೇಕು. ಸರ್ಕಾರಿ ವಾಹನಗಳಲ್ಲಿ ನಿಗದಿತ ಪ್ರಮಾಣಕ್ಕಿಂತ ಅಧಿಕ ಪ್ರಯಾಣಿಕರನ್ನು ಒಯ್ಯಬಾರದು ಎಂಬುದು ಸೇರಿ ಒಟ್ಟು 30 ಬೇಡಿಕೆಗಳನ್ನು ಒಕ್ಕೂಟ ಮುಂದಿಟ್ಟುಕೊಂಡು ಮುಷ್ಕರ ನಡೆಸುತ್ತಿದೆ.

ಬೆಂಗಳೂರಿನ ಆಟೊ, ಟ್ಯಾಕ್ಸಿ, ಏರ್‌ಪೋರ್ಟ್ ಟ್ಯಾಕ್ಸಿ, ಮ್ಯಾಕ್ಸಿಕ್ಯಾಬ್, ಕಾರ್ಪೊರೇಟ್ ವಾಹನಗಳು, ಸ್ಕೂಲ್ ಬಸ್, ಕೈಗಾರಿಕಾ ಬಸ್, ಸ್ಟೇಜ್ ಕ್ಯಾರೇಜ್ ಬಸ್ ಚಾಲಕರ ಸಂಘ ಸೇರಿ ಒಟ್ಟು 32 ಸಂಘಟನೆಗಳು ಈ ಬಂದ್ ನಡೆಸಲಿವೆ ಎಂದು ಒಕ್ಕೂಟದ ಅಧ್ಯಕ್ಷ ಎಸ್‌. ನಟರಾಜ್ ಶರ್ಮ ತಿಳಿಸಿದ್ದಾರೆ.

ಬಿಎಂಟಿಸಿ ವ್ಯವಸ್ಥೆ: ಬಂದ್ ಸಂದರ್ಭದಲ್ಲಿ ಬೆಂಗಳೂರು ನಗರ ಹಾಗೂ ಹೊರವಲಯದ ಪ್ರಯಾಣಿಕರ ಅನುಕೂಲಕ್ಕಾಗಿ ಬಿಎಂಟಿಸಿ ಬಸ್‌ಗಳು ಹೆಚ್ಚುವರಿಯಾಗಿ 4,000 ಟ್ರಿಪ್ ಸಂಚರಿಸಲಿವೆ.

ಕೆಂಪೇಗೌಡ ಬಸ್ ನಿಲ್ದಾಣ, ಕೆ.ಆರ್. ಮಾರುಕಟ್ಟೆ ಹಾಗೂ ಶಿವಾಜಿನಗರ ಬಸ್ ನಿಲ್ದಾಣಗಳಿಂದ ಕಾಡುಗೋಡಿ, ಸರ್ಜಾಪುರ, ಅತ್ತಿಬೆಲೆ, ಆನೇಕಲ್, ಬನ್ನೇರುಘಟ್ಟ–ಜಿಗಣಿ, ಹಾರೋಹಳ್ಳಿ, ಬಿಡದಿ, ತಾವರೆಕೆರೆ, ನೆಲಮಂಗಲ, ಹೆಸರಘಟ್ಟ, ದೊಡ್ಡಬಳ್ಳಾಪುರ, ದೇವನಹಳ್ಳಿ, ಬಾಗಲೂರು, ಚನ್ನಸಂದ್ರ, ಹೊಸಕೋಟೆಗೆ ಹಾಗೂ ಹೊರ ವರ್ತುಲ, ಒಳ ವರ್ತುಲ ರಸ್ತೆಗಳಲ್ಲಿ, ನಗರದ ಪ್ರಮುಖ ಸ್ಥಳಗಳನ್ನು ಸಂಪರ್ಕಿಸುವ ಮಾರ್ಗಗಳಲ್ಲಿ ಪ್ರಯಾಣಿಕರ ದಟ್ಟಣೆಗೆ ಅನುಗುಣವಾಗಿ ಬಸ್ ಸಂಚಾರ ಹೆಚ್ಚಿಸಲು ಯೋಜನೆ ರೂಪಿಸಲಾಗಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಸ್‌ಗಳು 100 ಟ್ರಿಪ್ ಹೆಚ್ಚುವರಿಯಾಗಿ ಸಂಚರಿಸಲಿವೆ. ಅಗತ್ಯ ಬಿದ್ದರೆ ಮತ್ತಷ್ಟು ಟ್ರಿಪ್ ಹೆಚ್ಚಿಸಲಾಗುವುದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಅಗತ್ಯ ಬಿದ್ದರೆ ಮೆಟ್ರೊ ಹೆಚ್ಚಳ

'ಪ್ರಯಾಣಿಕರ ದಟ್ಟಣೆ ಅವಧಿಯಲ್ಲಿ ಮೆಟ್ರೊ ರೈಲುಗಳ ಸಂಚಾರ ಹೆಚ್ಚಳ ಮಾಡುವುದು ಈಗಲೂ ಇದೆ. ಬಂದ್ ದಿನ ಜನದಟ್ಟಣೆ ಹೆಚ್ಚಿದ್ದರೆ ಆ ಸಂದರ್ಭದಲ್ಲಿ ಟ್ರಿಪ್ ಹೆಚ್ಚಿಸಲಾಗುವುದು' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಇನ್ನೊಂದು ಸುದ್ದಿ 2

ಒಳ ಪುಟಗಳು

ಮೊರೊಕ್ಕೊ ಭೂಕಂಪನ: 2,100 ದಾಟಿದ ಸಾವಿನ ಸಂಖ್ಯೆ 10

'ವಿದೇಶಿ ಸಾಲ ₹51.92 ಲಕ್ಷ ಕೋಟಿ' 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ನಗರದಲ್ಲಿ ಇಂದು

ರಾಜ್ಯಮಟ್ಟದ ತರಬೇತಿ: ಉದ್ಘಾಟನೆ: ಡಿ. ರಂದೀಪ್, ಅತಿಥಿಗಳು: ಕೆ.ಎನ್.ಎಂ. ರಾಜು, ಲಕ್ಷ್ಮಣ ಎಸ್., ಸಿ.ಎಂ. ಲಕ್ಷ್ಮಣ, ಆಯೋಜನೆ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 2ನೇ ಭಾಗ, ಆಯೋಜನೆ ಮತ್ತು ಸ್ಥಳ: ಜನ ಸಂಖ್ಯಾ ಸಂಶೋಧನಾ ಕೇಂದ್ರ, ಗಾಂಧಿ ಸಭಾಂಗಣ, ಐಎಸ್ಇಸಿ, ಟೀಚರ್ಸ್ ಕಾಲೊನಿ ನಾಗರಬಾವಿ, ಬೆಳಿಗ್ಗೆ 9.45

ವಚನ ಶ್ರಾವಣ: ವಚನ ಗಾಯನ: ಎಸ್. ಪಿನಾಕಪಾಣಿ, ವಚನ ಚಿಂತನ: ಸುರೇಶ್ ಸೂಡಿ, ಅಧ್ಯಕ್ಷತೆ: ರಾಮಲಿಂಗೇಗೌಡ ಎಂ.ಎಲ್., ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ನ್ಯೂ ಬಾಲ್ಡ್‌ವಿನ್ ಪಬ್ಲಿಕ್ ಶಾಲೆ, ಬ್ಯಾಡರಹಳ್ಳಿ ಕಾಲೇಜು ನಿಲ್ದಾಣದ ಹತ್ತಿರ, ಮಾಗಡಿ ಮುಖ್ಯರಸ್ತೆ, ಬೆಳಿಗ್ಗೆ 10

ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ -2023: ಅತಿಥಿಗಳು: ಸಿದ್ದರಾಮಯ್ಯ, ಅಧ್ಯಕ್ಷತೆ: ಈಶ್ವರ್ ಬಿ. ಖಂಡ್ರೆ, ಆಯೋಜನೆ: ಅರಣ್ಯ ಇಲಾಖೆ, ಸ್ಥಳ: ಅರಣ್ಯ ಭವನ, ಮಲ್ಲೇಶ್ವರ, ಬೆಳಿಗ್ಗೆ 10.15

'ಸುನಂದ ಸಮರ' ಯಕ್ಷಗಾನ ಪ್ರದರ್ಶನ: ಆಯೋಜನೆ: ಮಹಾಗಣಪತಿ ಯಕ್ಷಗಾನ ಮಂಡಳಿ, ಸ್ಥಳ: ಎಡನೀರು ಮಠ, ಕೋರಮಂಗಲ, ಸಂಜೆ 6

ಈ **ಪ್ರಕಟಣೆಯ** ಮೂಲಕ ತಿಳಿಸುವುದೇನೆಂದರೆ **ನಾರಾಯಣ್ ಸೇನ್** ಎಂಬುವರ ಹೆಸರಿನಲ್ಲಿ ನೋಂದಣಿ ಆಗಿರುವ, **ಐಟಿಪಿಬಿ ರೋಡ್, ವೈಟ್‌ಫೀಲ್ಡ್, ಬೆಂಗಳೂರು** – 560048 ವಿಳಾಸದಲ್ಲಿ ನೋಂದಾಯಿತ ಕಚೇರಿ ಹೊಂದಿರುವ **ಟಾಟಾ ಇಎಲ್‌ಎಕ್ಸ್‌ಎಸ್‌ಐ ಲಿಮಿಟೆಡ್‌ನ**, ಮೆಂಬರ್ಸ್ ರಜಿಸ್ಟರ್ಡ್ ಫೋಲಿಯೊ ನಂ. **ಇಎಕ್ಸ್‌ಎನ್**0001274 ಹಾಗೂ ವಿಶಿಷ್ಟ ಸಂ. 9193411–9193510 ಹೊಂದಿರುವ 100 ಷೇರು ಪ್ರಮಾಣಪತ್ರಗಳು ಕಳೆದಿರುತ್ತವೆ; ಕಾಣೆಯಾಗಿರುತ್ತವೆ; ಕಳುವಾಗಿರುತ್ತವೆ ಮತ್ತು/ಅಥವಾ ಸಿಗದಂತಾಗಿವೆ.

ಇದೀಗ ನಾನು, ಸಂಬಂಧಿತ ಕಂಪನಿಗೆ ಮೂಲ ಪ್ರಮಾಣ ಪತ್ರಗಳಿಗೆ ಬದಲಾಗಿ ಡೂಪ್ಲಿಕೇಟ್ ಪ್ರಮಾಣಪತ್ರಗಳನ್ನು ನೀಡಬೇಕೆಂದು ಮನವಿ ಸಲ್ಲಿಸಿರುತ್ತೇನೆ. ಹೀಗೆ, ಮೂಲ ಷೇರು ಪ್ರಮಾಣಪತ್ರಗಳಿಗೆ ಬದಲಾಗಿ ಡೂಪ್ಲಿಕೇಟ್ ಷೇರು ಪ್ರಮಾಣ ಪತ್ರಗಳನ್ನು ನೀಡುವುದಕ್ಕೆ ಸಂಬಂಧಿಸಿದಂತೆ, ಯಾವುದಾದರೂ ವ್ಯಕ್ತಿಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 15 ದಿನಗಳೊಳಗೆ ಮೇಲ್ಕಂಡ ಕಂಪನಿಯ ವಿಳಾಸಕ್ಕೆ ಅಥವಾ ರಿಜಿಸ್ಟ್ರಾರ್‌ರು, **ಟಿಎಸ್‌ಆರ್ ಕನ್ಸಲ್ಟನ್ಸಿ ಪ್ರೈ. ಲಿ.**, ಸಿ–101, 247 **ಪಾರ್ಕ್, ಎಲ್‌ಬಿಎಸ್ ಮಾರ್ಗ, ವಿಖ್ರೋಲಿ (ವೆಸ್ಟ್), ಮುಂಬೈ** 400 083 ವಿಳಾಸಕ್ಕೆ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬೇಕೆಂದು ಕೋರಲಾಗಿದೆ.

ನಾರಾಯಣ್ ಸೇನ್
7, **ಜೋಧಪುರ ಪಾರ್ಕ್**
ಕೋಲ್ಕತಾ 700068

ದಿನಾಂಕ: 11.09.2023

ನಗರದಲ್ಲಿ ಬಿಗಿ ಪೊಲೀಸ್ ಭದ್ರತೆ • ವಾಹನ ಅಡ್ಡಗಟ್ಟಿದರೆ ಕಾನೂನು ಕ್ರಮ

ಖಾಸಗಿ ಸಾರಿಗೆ ಬಂದ್: ಮಾರ್ಗ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದಿಂದ ನಗರದಲ್ಲಿ ಸೋಮವಾರ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳುವ ಸಂಭವವಿದ್ದು, ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆಯಿದೆ. ನಗರದ ಹಲವೆಡೆ ವಾಹನಗಳ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ.

'ಖೋಡೆ ವೃತ್ತದಿಂದ ಸಾಗುವ ವಾಹನಗಳು, ಆರ್.ಆರ್. ಜಂಕ್ಷನ್, ಕೃಷ್ಣ ಫ್ಲೋರ್ ವೃತ್ತದ ಮೂಲಕ ಮಲ್ಲೇಶ್ವರದತ್ತ ಹೋಗಬಹುದು. ಗೂಡ್‌ಶೆಡ್ ರಸ್ತೆ ಕಡೆಯಿಂದ ಬರುವ ವಾಹನಗಳು, ಜಿ.ಟಿ. ರಸ್ತೆ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತ, ಓಕಳಿಪುರ ಮೂಲಕ ಸುಜಾತಾ ವೃತ್ತದ ಮೂಲಕ ಸಂಚರಿಸಬಹುದು' ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

'ಆನಂದರಾವ್ ವೃತ್ತ ಕಡೆಯಿಂದ ಬರುವ ವಾಹನಗಳು, ಹಳೇ ಜೆಡಿಎಸ್ ಕಚೇರಿ ರಸ್ತೆ ಕಡೆಯಿಂದ ಶೇಷಾದ್ರಿಪುರದತ್ತ ಸಾಗಬಹುದು. ಮೈಸೂರು ಬ್ಯಾಂಕ್ ವೃತ್ತದಿಂದ ಬರುವ ವಾಹನಗಳು, ಅರಮನೆ ರಸ್ತೆ ಮೂಲಕ ಬಸವೇಶ್ವರ ವೃತ್ತಕ್ಕೆ ಹೋಗಬಹುದು' ಎಂದು ಹೇಳಿದ್ದಾರೆ.

ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದ ಸದಸ್ಯರೊಬ್ಬರು ಕಾರಿನ ಹಿಂಬದಿ ಗಾಜಿಗೆ ಕರಪತ್ರ ಹಚ್ಚಿದರು – ಪ್ರಜಾವಾಣಿ ಚಿತ್ರ

ಮುಂಜಾನೆಯ ಬಸ್‌ಗಳಿಗಿಲ್ಲ ಸಮಸ್ಯೆ: 'ಬೇರೆ ಜಿಲ್ಲೆ, ಬೇರೆ ರಾಜ್ಯಗಳಿಂದ ಹೊರಟು ಸೋಮವಾರ ಮುಂಜಾನೆ ಬೆಂಗಳೂರಿಗೆ ತಲುಪುವ ಬಸ್‌ಗಳಿಗೆ ಯಾವುದೇ ಅಡ್ಡಿ ಇರುವುದಿಲ್ಲ. ಬೆಂಗಳೂರಿನಿಂದ ಬಸ್‌ಗಳು ಸೋಮವಾರ ಹೊರಡಬಾರದು ಎಂಬುದು ನಮ್ಮ ಮನವಿ' ಎಂದು ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ್ ಶರ್ಮ ತಿಳಿಸಿದ್ದಾರೆ.

ಶಾಲೆಗಳಿಗೆ ರಜೆ ಇಲ್ಲ: ಶಾಲಾ ವಾಹನಗಳ ಮಾಲೀಕರ ಸಂಘವೂ ಬೆಂಬಲ ನೀಡಿರುವುದರಿಂದ ವಿದ್ಯಾರ್ಥಿಗಳಿಗೂ ತೊಂದರೆಯಾಗಲಿದೆ. ಆದರೆ, ಸರ್ಕಾರಿ ಶಾಲೆಗಳಿಗೆ ರಜೆ ನೀಡಿಲ್ಲ. ಬೆರಳೆಣಿಕೆಯ ಖಾಸಗಿ ಶಾಲೆಗಳನ್ನು ಹೊರತುಪಡಿಸಿ ಉಳಿದ ಖಾಸಗಿ ಶಾಲೆಗಳಿಗೂ ರಜೆ ಘೋಷಣೆಯಾಗಿಲ್ಲ.

'ಬೆಂಗಳೂರಿನಲ್ಲಿ 6,000 ಶಾಲೆಗಳಿವೆ. ಅದರಲ್ಲಿ ಬಹುತೇಕ ಶಾಲೆಗಳು ಖಾಸಗಿ ವಲಯದ ವಾಹನಗಳನ್ನು ಅವಲಂಬಿಸಿಲ್ಲ. ದೂರದ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಕಷ್ಟವಾಗಲಿದೆ. ಕೆಲವು ಶಾಲೆಗಳ ಆಡಳಿತ ಮಂಡಳಿಯವರು ರಜೆ ನೀಡಿರಬಹುದು. ನಮ್ಮ ಒಕ್ಕೂಟ ಅಂಥ ತೀರ್ಮಾನ ಕೈಗೊಂಡಿಲ್ಲ. ಪೋಷಕರೇ ಮಕ್ಕಳನ್ನು ಶಾಲೆಗೆ ಕರೆತರಬೇಕಾಗುತ್ತದೆ. ಪ್ರತಿಭಟನೆಗೆ ನಮ್ಮ ನೈತಿಕ ಬೆಂಬಲ ಇದೆ' ಎಂದು ಕರ್ನಾಟಕ ಅಸೋಸಿಯೇಟೆಡ್ ಮ್ಯಾನೇಜ್‌ಮೆಂಟ್ ಆಫ್ ಇಂಗ್ಲಿಷ್ ಮೀಡಿಯಂ ಸ್ಕೂಲ್ಸ್ (ಕಾಮ್ಸ್) ಪ್ರಧಾನ ಕಾರ್ಯದರ್ಶಿ ಶಶಿಕುಮಾರ್ ತಿಳಿಸಿದ್ದಾರೆ.

'ಬಲವಂತ ಮಾಡಿದರೆ ಕ್ರಮ'

ರಸ್ತೆಯಲ್ಲಿ ಸಂಚರಿಸುವ ವಾಹನಗಳನ್ನು ಅಡ್ಡಗಟ್ಟಿ ಬಲವಂತವಾಗಿ ಬಂದ್‌ಗೆ ಬೆಂಬಲ ನೀಡುವಂತೆ ಒತ್ತಾಯಿಸುವುದು ಕಂಡು ಬಂದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಕಮಿಷನರ್ ಬಿ.ದಯಾನಂದ್ ಎಚ್ಚರಿಕೆ ನೀಡಿದ್ದಾರೆ.

'ನಗರದೆಲ್ಲೆಡೆ ಪೊಲೀಸ್ ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ (ಸಿಬಿಡಿ) ಹೆಚ್ಚಿನ ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ. ಪ್ರತಿ ಠಾಣೆಯ ವ್ಯಾಪ್ತಿಯಲ್ಲೂ ನಿಗಾ ವಹಿಸುವಂತೆ ಸೂಚಿಸಲಾಗಿದೆ. ಸಾರ್ವಜನಿಕರ ಜೀವಕ್ಕೆ ಹಾಗೂ ಆಸ್ತಿಗೆ ಧಕ್ಕೆ ಆಗದಂತೆ ಕ್ರಮ ಕೈಗೊಳ್ಳಲು ಪೊಲೀಸರಿಗೆ ಸೂಚಿಸಿದ್ದೇನೆ' ಎಂದು ತಿಳಿಸಿದ್ದಾರೆ.

ಬಂದ್‌ನಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಹೆಚ್ಚುವರಿ ಬಿಎಂಟಿಸಿ ಬಸ್‌ಗಳನ್ನು ರಸ್ತೆಗೆ ಇಳಿಸಲಾಗುವುದು.

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಪತ್ರಕರ್ತರ ಸಹಕಾರ ಸಂಘಕ್ಕೆ 13 ನಿರ್ದೇಶಕರ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ನೂತನ ಆಡಳಿತ ಮಂಡಳಿಗೆ (2023–28) 13 ನಿರ್ದೇಶಕರು ಆಯ್ಕೆಯಾಗಿದ್ದಾರೆ.

ಭಾನುವಾರ ನಡೆದ ಚುನಾವಣೆಯಲ್ಲಿ ಆನಂದ ಪರಮೇಶ್ವರ ಬೈದನಮನೆ(269 ಮತಗಳು), ರಮೇಶ್ ಎಂ (ಪಾಳ್ಯ)(262), ಧ್ಯಾನ್ ಪೂಣಚ್ಚ (254), ಮೋಹನ್ ಕುಮಾರ್ ಬಿ.ಎನ್. (214), ಕೃಷ್ಣಕುಮಾರ್ ಪಿ.ಎಸ್. (206), ವಿನೋದ್ ಕುಮಾರ್ ಬಿ ನಾಯ್ಕ(189), ಸೋಮಶೇಖರ್ ಎಸ್ (ಸೋಮಣ್ಣ) (147) ಹಾಗೂ ಪರಮೇಶ್ ಕೆ.ವಿ. (223) ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ವಿನುತ ವಿ. ತಿಳಿಸಿದ್ದಾರೆ.

ಅವಿರೋಧ ಆಯ್ಕೆ: ಎಂ.ಎಸ್. ರಾಜೇಂದ್ರ ಕುಮಾರ್, ರಮೇಶ್ ಬಿ (ರಮೇಶ್ ಹಿರೇಜಂಬೂರು), ದೊಡ್ಡಬೊಮ್ಮಯ್ಯ, ನಯನಾ ಎಸ್., ವನಿತಾ ಎನ್. ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇದೇ 20ರಂದು ಪದಾಧಿಕಾರಿಗಳ ಆಯ್ಕೆ ನಡೆಯಲಿದೆ ಎಂದು ಸಂಘದ ಪ್ರಭಾರ ಕಾರ್ಯದರ್ಶಿ ಎಚ್.ಎಸ್. ಕೆಂಪರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ನಡೆದ ಶ್ರೀಕೃಷ್ಣ ಜನ್ಮಾಷ್ಟಮಿ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿದ ಉಷಾ ಸುನಕ್

ಕೃಷ್ಣ ಜನ್ಮಾಷ್ಟಮಿ ಸಂಭ್ರಮದಲ್ಲಿ ರಿಷಿ ಸುನಕ್ ತಾಯಿ ಉಷಾ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರ ತಾಯಿ ಉಷಾ ಸುನಕ್ ಅವರು ನಗರದಲ್ಲಿ ನಡೆದ ಶ್ರೀಕೃಷ್ಣ ಜನ್ಮಾಷ್ಟಮಿ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡು ಪೂಜೆ ನೆರವೇರಿಸಿದರು.

ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಚಿಕ್ಕಪೇಟೆ ಶಾಸಕ ಉದಯ್ ಬಿ. ಗರುಡಾಚಾರ್ ಅವರ ಜಯನಗರದ ನಿವಾಸದಲ್ಲಿ ಕೃಷ್ಣನ ವಿವಿಧ ಮೂರ್ತಿ ಪ್ರತಿಷ್ಠಾಪಿಸಲಾಗಿದೆ. ಅವರ ಮನೆಗೆ ಭೇಟಿ ನೀಡಿ ಕೃಷ್ಣನ ವೈಶಿಷ್ಟ್ಯ ಕಣ್ತುಂಬಿಕೊಂಡರು.

ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ, ಉದಯ್ ಗರುಡಾಚಾರ್, ಮೇದಿನಿ ಉದಯ್ ಗರುಡಾಚಾರ್, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಮುಖರಾದ ವಿ.ಮಂಜುನಾಥ್ ಇದ್ದರು.

ದೆಹಲಿಯಲ್ಲಿ ನಡೆಯುತ್ತಿರುವ ಜಿ 20 ಶೃಂಗಸಭೆಯಲ್ಲಿ ಭಾಗವಹಿಸಲು ರಿಷಿ ಸುನಕ್ ಬಂದಿದ್ದಾರೆ. ಅವರೊಂದಿಗೆ ಕುಟುಂಬದ ಸದಸ್ಯರೂ ದೆಹಲಿಗೆ ಬಂದಿದ್ದಾರೆ. ಅಲ್ಲಿಂದ ಉಷಾ ಅವರು ಬೆಂಗಳೂರಿನ ತಮ್ಮ ಸಂಬಂಧಿಕರ ಮನೆಗೆ ಬಂದಿದ್ದು ಶ್ರೀಕೃಷ್ಣ ಜನ್ಮಾಷ್ಟಮಿಯಲ್ಲಿ ಭಾಗವಹಿಸಿದ್ದರು.

ಭಾರತ ಮಂಟಪಂನಲ್ಲಿ ನೀರು: ವಿಡಿಯೊ ಹಂಚಿಕೊಂಡ ಕಾಂಗ್ರೆಸ್

ನವದೆಹಲಿ (ಪಿಟಿಐ): ಜಿ20 ಶೃಂಗಸಭೆಗೆ ವೇದಿಕೆಯಾಗಿದ್ದ ಭಾರತ ಮಂಟಪಂನಲ್ಲಿ ಮಳೆ ನೀರು ನಿಂತಿರುವ ವಿಡಿಯೊವನ್ನು ಭಾನುವಾರ 'ಎಕ್ಸ್'ನಲ್ಲಿ ಕಾಂಗ್ರೆಸ್ ಹಂಚಿಕೊಂಡಿದೆ. ಇದು ಮೋದಿ ಸರ್ಕಾರದ 'ಟೊಳ್ಳು ಅಭಿವೃದ್ಧಿ'ಯನ್ನು ಬಹಿರಂಗಪಡಿಸಿದೆ ಎಂದು ಟೀಕಿಸಿದೆ.

'ಭಾರತ ಮಂಟಪ ಸಿದ್ಧಪಡಿಸಲು ₹ 2,700 ಕೋಟಿ ಖರ್ಚು ಮಾಡಲಾಗಿದೆ. ಅದು ಒಂದೇ ಮಳೆಗೆ ಕೊಚ್ಚಿಹೋಗಿದೆ' ಎಂದು ಹೇಳಿದೆ.

ಪಕ್ಷದ ವಕ್ತಾರೆ ಸುಪ್ರಿಯಾ ಶ್ರಿನಾಟೆ, 'ಯಂತ್ರಗಳಿಂದ ನೀರನ್ನು ಹೊರ ಹಾಕುವ ಪ್ರಯತ್ನಗಳು ನಡೆಯುತ್ತಿವೆ. ಇಷ್ಟೊಂದು ಹಣವನ್ನು ಕದ್ದು ಕಳಪೆ ಕೆಲಸ ಮಾಡಿದ ಭ್ರಷ್ಟರು ಯಾರು' ಎಂದು ಪ್ರಶ್ನಿಸಿದ್ದಾರೆ.

ರಾಜಸ್ಥಾನದ ಟೋಂಕ್ ಜಿಲ್ಲೆಯಲ್ಲಿ ಮಾತನಾಡಿದ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವಾದ್ರಾ, 'ದೇಶದ ಜನರು ಭಯದಿಂದ ಹೇಳಲು ಸಾಧ್ಯವಾಗದಿರುವುದನ್ನು ದೇವರು ಹೇಳಿದ್ದಾನೆ. ನಿಮ್ಮ ಅಹಂ ಕಡಿಮೆ ಮಾಡಿ, ದೇಶವು ನಿಮ್ಮನ್ನು ನಾಯಕನನ್ನಾಗಿ ಮಾಡಿದೆ, ಜನರೇ ಸರ್ವೋಚ್ಚ ನಾಯಕರು ' ಎಂದು ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು.

ದೆಹಲಿಯಲ್ಲಿ ಶನಿವಾರ ಸುರಿದ ಮಳೆಯಿಂದಾಗಿ, ವಿವಿಐಪಿ ಸಂಚಾರಕ್ಕೆ ನಿಗದಿಪಡಿಸಿದ ರಸ್ತೆಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಲು ಲೋಕೋಪಯೋಗಿ ಮತ್ತು ನವದೆಹಲಿ ಮುನ್ಸಿಪಲ್ ಕೌನ್ಸಿಲ್ (ಎನ್‌ಡಿಎಂಸಿ) ತಂಡಗಳು ರಾತ್ರಿಯಿಡೀ ಕೆಲಸ ಮಾಡಿವೆ.

ನಗರದ ಅಲ್ಲಲ್ಲಿ ಮಳೆ

ಬೆಂಗಳೂರು: ನಗರದ ವಿವಿಧೆಡೆ ಭಾನುವಾರ ಮಳೆಯಾಗಿದೆ. ಮೆಜೆಸ್ಟಿಕ್, ಗಾಂಧಿನಗರ, ಚಿಕ್ಕಪೇಟೆ, ಮಲ್ಲೇಶ್ವರ, ವಿಧಾನಸೌಧ ಸುತ್ತಮುತ್ತ ರಾತ್ರಿ ಉತ್ತಮ ಮಳೆಯಾಗಿದೆ.

ಮಹಾತ್ಮ ಗಾಂಧಿ ರಸ್ತೆ, ಚರ್ಚ್ ಸ್ಟ್ರೀಟ್, ಅಶೋಕ ನಗರ, ಹಲಸೂರು ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ನಗರದಲ್ಲಿ ಇನ್ನೂ ಎರಡು ದಿನ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಸೂಚನೆ ನೀಡಿದೆ.

ನಿಧನ ವಾರ್ತೆ

ಮುರಾರಿ ಗೌತಮ

ಬೆಂಗಳೂರು: ಉಲ್ಲಾಳ ಉಪ ನಗರದ ವಿಶ್ವೇಶ್ವರಯ್ಯ ಬಡಾವಣೆ ನಿವಾಸಿ ಮುರಾರಿ ಗೌತಮ (79) ಭಾನುವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ. ಸೋಮವಾರ ಮಧ್ಯಾಹ್ನ 3 ಗಂಟೆಗೆ ಕೆಂಗೇರಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಕೆನಡಾ ವಿಮಾನದಲ್ಲಿ ತಾಂತ್ರಿಕ ದೋಷ

ನವದೆಹಲಿ (ಪಿಟಿಐ): ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಪ್ರಯಾಣಿಸಬೇಕಿದ್ದ ವಿಮಾನದಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದೆ ಮೂಲಗಳು ತಿಳಿಸಿವೆ.

ದೆಹಲಿ ವಿಮಾನ ನಿಲ್ದಾಣದಿಂದ ವಿಮಾನವು ಭಾನುವಾರ ರಾತ್ರಿ 8 ಗಂಟೆಗೆ ಹೊರಡಬೇಕಿತ್ತು. ಸಮಸ್ಯೆಯ ಕಾರಣಕ್ಕೆ ಪ್ರಧಾನಿ ನಿರ್ಗಮನ ವಿಳಂಬವಾಗಿದೆ.

ಪ್ರಧಾನಿ ಕಚೇರಿ ಹೇಳಿಕೆ ಉಲ್ಲೇಖಿಸಿರುವ ಕೆನಡಾದ ಸಿಸಿಟಿವಿ ನ್ಯೂಸ್ ಚಾನೆಲ್, ತಾಂತ್ರಿಕ ಸಮಸ್ಯೆಯನ್ನು ರಾತ್ರೋರಾತ್ರಿ ಪರಿಹರಿಸಲು ಆಗುವುದಿಲ್ಲ. ಪರ್ಯಾಯ ವ್ಯವಸ್ಥೆ ಮಾಡುವವರೆಗೆ ನಮ್ಮ ನಿಯೋಗ ಭಾರತದಲ್ಲಿಯೇ ಉಳಿಯುತ್ತದೆ' ಎಂದು ತಿಳಿಸಿದೆ.

ಟಿ2: ನಾಳೆ ವಿಮಾನ ಹಾರಾಟ

ದೇವನಹಳ್ಳಿ: ಇಲ್ಲಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2ರಿಂದ ಅಂತರರಾಷ್ಟ್ರೀಯ ವಿಮಾನಗಳು ಸೆ. 12 ರಿಂದ ಹಾರಾಟ ನಡೆಸಲಿವೆ.

ಮಂಗಳವಾರದಿಂದ ಟರ್ಮಿನಲ್-2ರಲ್ಲಿಯೇ ವಿದೇಶಗಳಿಗೆ ತೆರಳುವ ಮತ್ತು ವಿದೇಶದಿಂದ ಆಗಮಿಸುವ ವಿಮಾನಗಳ ಸಂಚಾರ ಪೂರ್ಣಪ್ರಮಾಣದಲ್ಲಿ ಆರಂಭವಾಗಲಿದೆ.

ಏರ್ ಏಷ್ಯಾ, ಏರ್ ಇಂಡಿಯಾ, ಸ್ಟಾರ್ ಏರ್ ಹಾಗೂ ವಿಸ್ತಾರ ವಿಮಾನಯಾನ ಸಂಸ್ಥೆಗಳ ದೇಶಿ ವಿಮಾನಗಳು ಇಲ್ಲಿಂದ ಕಾರ್ಯಾಚರಣೆ ನಡೆಸಲಿವೆ.

ಲಿಫ್ಟ್ ಕುಸಿದು 6 ಸಾವು

ಮುಂಬೈ: ಠಾಣೆ ನಗರದ ಬಾಲ್ಕಮ್ ಪ್ರದೇಶದಲ್ಲಿ ನಿರ್ಮಾಣ ಹಂತದ ಕಟ್ಟಡದ ಲಿಫ್ಟ್ ಕುಸಿದು ಆರು ಮಂದಿ ಕಾರ್ಮಿಕರು ಮೃತಪಟ್ಟಿದ್ದು, ಒಬ್ಬರು ಗಾಯಗೊಂಡಿದ್ದಾರೆ. 40 ಅಂತಸ್ತಿನ ಕಟ್ಟಡದ ತಳ ಅಂತಸ್ತಿನಲ್ಲಿ ಕಾರ್ಮಿಕರು ಭಾನುವಾರ ಕೆಲಸ ಮಾಡುತ್ತಿದ್ದಾಗ ಲಿಫ್ಟ್ ಕುಸಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

V.S. DENTAL COLLEGE & HOSPITAL
K.R.ROAD, V.V.PURAM, BENGALURU-04. Ph. No. 080-26618066, Fax: 08022426705
E-Mail: vsdchbangalore@gmail.com /www.vsdc.rvsangha.org

INVITATION FOR TENDER
(2 cover systems Technical Bid and Financial Bid)

Terms & Conditions of the Tender for the supply of Dental Implants

Ref: Tender notification No. VSDCH/187/23-24 — **Dated: 17/05/2023**

1. The Principal VSDCH Bengaluru hereby invite tenders from PRIMARY MANUFACTURERS or IMPORT LICENSE or AUTHORISED DEALER for the supply of Dental Implants. Tender, on Staggered supply Basis for three years. For Primary Manufacturers / import license Holders whose annual sales turnover is at least Rs.1 crore per year in previous 3 years i.e for 2020-21, 2021-22 and 2022-23 and for AUTHORIZED DEALER whose annual sales turnover is Rs. 30 lakhs every year in previous 3 year i.e for 2020-21, 2021-22 & 2022-23.
2. The Tender forms are not transferable.
3. It may be noted that, Telegraphic / Fax quotation offer will not be accepted.
4. The tender form may be purchased from VSDCH stores section on payment of Rs.2,500/- (Rupees Two Thousand five Hundred only) through a DD in favour of **The Principal, V.S.Dental College & Hospital**, "Payable at Bengaluru" (Non-refundable).
5. Sale of tender form from 15/09/2023 to 25/09/2023 during office hours.
6. Last date for submission of quoted tender documents before 09/10/2023 at 4.00 pm.
7. Tender should be quoted in hard copy duly signed on all pages in excel format and the same on non-erasable CD.
8. Tenders should be submitted only in the prescribed format issued by the VSDCH.

Store Officer VSDCH — **PRINCIPAL VSDCH** — **Chairman Governing Council VSDCH**

JOB OPPORTUNITIES

Accounts & Finance

WANTED FOR a CA firm around HRBR Layout experienced semi qualified staff well versed with IT, GST and Tally. Attractive compensation. Send your CV to admin@dbubnaassociates.com.

General

WANTED DISTRIBUTORS, PROMOTERS, Male/ Female, Marketing Staff for fast moving consumer and Pharma products all over Karnataka. Contact:- 9448041257.

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats,Converted& Agriculture Lands Call:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD ಪ್ರಜಾವಾಣಿ
Classifieds
More value, more impact
REAL ESTATE
The 1st thing to do when Selling/ Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now!
For more details contact:
+91 9886213331
+91 9845114560
080- 45557163/164

PUBLIC NOTICE
To Place your Classified Ads Contact
9731810277

‘ಜತ್ತಿ ಪ್ರತಿಮೆ ಸ್ಥಾಪನೆಗೆ ಪ್ರಯತ್ನ’

ರಾಜ್ಯಪಾಲರ ಭರವಸೆ • ಬಸವ ಸಮಿತಿಯಿಂದ ಸಂಸ್ಥಾಪಕರ ದಿನ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸೌಧದ ಎದುರು ಬಿ.ಡಿ. ಜತ್ತಿ ಅವರ ಪ್ರತಿಮೆ ಸ್ಥಾಪನೆಗೆ ಅಗತ್ಯ ಪ್ರಯತ್ನ ಮಾಡಲಾಗುವುದು’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಭರವಸೆ ನೀಡಿದರು.

ಬಸವ ಸಮಿತಿಯು ಮಾಜಿ ರಾಷ್ಟ್ರಪತಿ ಬಿ.ಡಿ. ಜತ್ತಿ ಅವರ 111ನೇ ಜನ್ಮದಿನೋತ್ಸವದ ಅಂಗವಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

ಇದಕ್ಕೂ ಮೊದಲು ಮಾತನಾಡಿದ ಕನ್ನಡ ಹೋರಾಟಗಾರ ವಾಟಾಳ್ ನಾಗರಾಜ್, ‘ವಿಧಾನಸೌಧದ ಎದುರು ಸರ್ಕಾರವು ಜತ್ತಿ ಪ್ರತಿಮೆ ಸ್ಥಾಪಿಸಬೇಕು. ಇಲ್ಲವಾದಲ್ಲಿ ಹೋರಾಟ ಮಾಡಲಾಗುವುದು. ಪ್ರತಿಮೆ ನಿರ್ಮಾಣಕ್ಕೆ ರಾಜ್ಯಪಾಲರ ಸಹಕಾರವೂ ಬೇಕು’ ಎಂದು ಆಗ್ರಹಿಸಿದರು.

ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಥಾವರಚಂದ್ ಗೆಹಲೋತ್, ‘ಬಿ.ಡಿ. ಜತ್ತಿ ಜೀವನಶೈಲಿ, ರಾಷ್ಟ್ರ ನಿರ್ಮಾಣಕ್ಕೆ ಅವರು ನೀಡಿದ ಕೊಡುಗೆ ನಮಗೆಲ್ಲ ಪ್ರೇರಣೆಯಾಗಿದೆ. ದೇಶದ ಅತ್ಯುನ್ನತ ಹುದ್ದೆಯಾದ ರಾಷ್ಟ್ರಪತಿಯಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ. 1964ರಲ್ಲಿ ಅವರು ಬಸವ ಸಮಿತಿ ಸ್ಥಾಪಿಸಿ ಬಸವ ತತ್ವಗಳನ್ನು ದೇಶದ ಪ್ರತಿಯೊಂದು ಮನೆಗೆ ತಲುಪಿಸುವ ಕೆಲಸ ಮಾಡಿದರು. ಬಸವ ಪಥ ಪತ್ರಿಕೆ ಪ್ರಾರಂಭಿಸಿ, ದೇಶದ ವಿವಿಧ ಭಾಷೆಗಳಲ್ಲಿ ಮುದ್ರಿಸಿದರು. ಅವರು ಹಾಕಿದ ಬೀಜ ವಟವೃಕ್ಷವಾಗಿ ಬೆಳೆದಿದೆ. ವಿಧಾನಸೌಧದ ಮುಂದೆ ಅವರ ಪ್ರತಿಮೆ ಸ್ಥಾಪಿಸಬೇಕೆಂಬ ಬೇಡಿಕೆಯನ್ನು ಸಾಕಾರ ಮಾಡಲು ಪ್ರಯತ್ನ ಮಾಡುತ್ತೇನೆ’ ಎಂದರು.

‘ನಮ್ಮದು ವಿಶ್ವದ ಶ್ರೇಷ್ಠ ದೇಶವಾಗಿ ಹೊರಹೊಮ್ಮುವ ಸಮಯ ಬಂದಿದೆ. ನಾವು ಇನ್ನಷ್ಟು ಪರಿಶ್ರಮದಿಂದ ಕಾರ್ಯನಿರ್ವಹಿಸಬೇಕು. ‘ವಸುಧೈವ ಕುಟುಂಬಕಂ’ ಪರಿಕಲ್ಪನೆಯಡಿ ದೇಶ ಕೆಲಸ ಮಾಡುತ್ತಿದೆ. ಪರಿಸರದ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ಹೀಗಾಗಿ ಜಲ, ವನ ಹಾಗೂ ವಾಯುವಿನ ಸಂರಕ್ಷಣೆಗೆ ನಾವೆಲ್ಲ ಕಾರ್ಯೋನ್ಮುಖರಾಗಬೇಕು’ ಎಂದು ತಿಳಿಸಿದರು.

ಇದ್ದಕ್ಕೂ ಮೊದಲು ಕನ್ನಡದಲ್ಲಿ ಮಾತುಗಳನ್ನು ಪ್ರಾರಂಭಿಸಿದ ಅವರು, ‘ನಾನು ನಿಮ್ಮೆಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸುತ್ತೇನೆ’ ಎಂದು ತಿಳಿಸಿ, ‘ಕನ್ನಡ ಕಲಿಕೆ ಬಗ್ಗೆ ಮನೆ ಪಾಠ ಪಡೆಯುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಕನ್ನಡದಲ್ಲಿ ಮಾತನಾಡಲು ಪ್ರಯತ್ನಿಸುತ್ತೇನೆ’ ಎಂದರು.

ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ, ‘ಬಸವತತ್ವಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಾಗಬೇಕು’ ಎಂದು ಹೇಳಿದರು.

ವಾರ್ಪಸ್ ಮೀಡಿಯಾ ಟೆಕ್ನಾಲಜಿಸ್ ಸಂಸ್ಥಾಪಕ ಆರ್. ನರಸಿಂಹ ಸ್ವಾಮಿ, ಸಮಾಜ ಸೇವಕಿ ವಿಜಯ ನಂದೀಶ್ವರ್, ಬಸವ ಸಮಿತಿಯ ಲೀನಾ ಕಲಬುರ್ಗಿ ಹಾಗೂ ತುಮಕೂರಿನ ಬಸವ ಕೇಂದ್ರದ ಶರಣೆ ಸಿದ್ಧಗಂಗಮ್ಮ ಸಿದ್ಧರಾಮಣ್ಣ ಅವರನ್ನು ಕಾರ್ಯಕ್ರಮದಲ್ಲಿ ಗೌರವಿಸಲಾಯಿತು. ವಿಶ್ವೇಶ ಭಟ್ ಹಾಗೂ ತಂಡವು ಸುಗಮ ಸಂಗೀತ ಕಾರ್ಯಕ್ರಮ ನೀಡಿತು.

ಬಸವ ಭವನದ ಆವರಣದಲ್ಲಿರುವ ಬಿ.ಡಿ. ಜತ್ತಿ ಅವರ ಪ್ರತಿಮೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಪುಷ್ಪ ನಮನ ಸಲ್ಲಿಸಿದರು. ಅರವಿಂದ ಜತ್ತಿ, ಬಸವ ಸಮಿತಿಯ ಪದಾಧಿಕಾರಿಗಳು ಹಾಗೂ ಬಿ.ಡಿ. ಜತ್ತಿ ಕುಟುಂಬಸ್ಥರು ಇದ್ದಾರೆ

ಸಚಿವ ಸುಧಾಕರ್ ವಜಾಕ್ಕೆ ಆಗ್ರಹ

ಬೆಂಗಳೂರು: ‘ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಚಿಂತಾಮಣಿಯಲ್ಲಿ ₹ 300 ಕೋಟಿ ಮೌಲ್ಯದ ಸರ್ಕಾರಿ ಜಮೀನು ಕಬಳಿಸಿದ್ದಾರೆ. ಅವರನ್ನು ಸಂಪುಟದಿಂದ ವಜಾಗೊಳಿಸಬೇಕು’ ಎಂದು ಚಿಂತಾಮಣಿ ಕ್ಷೇತ್ರದ ಮಾಜಿ ಶಾಸಕ ಎಂ. ಕೃಷ್ಣಾ ರೆಡ್ಡಿ ಆಗ್ರಹಿಸಿದರು.

ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಜೆಡಿಎಸ್ ಪದಾಧಿಕಾರಿಗಳು, ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ‘ಸುಧಾಕರ್ ಭೂಕಬಳಿಕೆ ಪ್ರಕರಣದ ಕಡತ ಜಿಲ್ಲಾಧಿಕಾರಿ ಎದುರು ಇದೆ. ಭ್ರಷ್ಟರಿಗೆ ರಕ್ಷಣೆ ನೀಡಬಾರದು. ಅವರ ವಿರುದ್ಧ ಕ್ರಮ ಜರುಗಿಸಬೇಕು’ ಎಂದರು.

ಸಚಿವರಿಂದ ರಾಜೀನಾಮೆ ಪಡೆಯಬೇಕು. ಇಲ್ಲವಾದರೆ ವಜಾಗೊಳಿಸುವ ಶಿಫಾರಸು ಮಾಡಬೇಕು. ಎರಡೂ ಆಗದಿದ್ದರೆ ಸಿದ್ದರಾಮಯ್ಯ ಭ್ರಷ್ಟರ ನಾಯಕ ಎಂಬ ಆರೋಪ ಹೊತ್ತುಕೊಳ್ಳಬೇಕಾಗುತ್ತದೆ ಎಂದು ಹೇಳಿದರು.

‘ಆರೋಪದಲ್ಲಿ ಹುರುಳಿಲ್ಲ’: ಈ ಬಗ್ಗೆ ಪ್ರತಿಕ್ರಿಯಿಸಿದ ಎಂ.ಸಿ. ಸುಧಾಕರ್, ‘ಕೃಷ್ಣಾ ರೆಡ್ಡಿ 15 ವರ್ಷಗಳಿಂದಲೂ ಈ ರೀತಿ ಸುಳ್ಳು ಆರೋಪ ಮಾಡುತ್ತಿದ್ದಾರೆ. ನ್ಯಾಯಾಲಯಗಳಲ್ಲೂ ಸುಳ್ಳು ಮೊಕದ್ದಮೆ ಹೂಡಿದ್ದರು. 1905ರಲ್ಲಿ ನಮ್ಮ ತಾತ ನಿಗೆ ಮಂಜೂರಾದ ಜಮೀನನ್ನು ಕಬ ಳಿಕೆ ಎಂದು ಸುಳ್ಳು ಹೇಳುತ್ತಿದ್ದಾರೆ’ ಎಂದರು.

‘ಚುನಾವಣೆಯಲ್ಲಿ ಸೋತ ಬಳಿಕ ಕೃಷ್ಣಾ ರೆಡ್ಡಿ ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ. ರಿಯಲ್ ಎಸ್ಟೇಟ್ ಉದ್ಯಮಿಯಾದ ಅವರೇ ಕೆರೆ ಅಂಗಳದಲ್ಲಿ ಅಕ್ರಮವಾಗಿ ಮನೆ ನಿರ್ಮಿಸಿದ್ದಾರೆ’ ಎಂದು ದೂರಿದರು.

ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಹೇಳಿಕೆ

ಹೋರಾಟದ ಕಿಚ್ಚುಹಚ್ಚಿದ್ದ ರಾಮಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಖಂಡ ಕರ್ನಾಟಕ ಸ್ಥಾಪನೆಯು ಹಾರನಹಳ್ಳಿ ರಾಮಸ್ವಾಮಿ ಅವರ ಕಲ್ಪನೆಯ ಕೂಸಾಗಿತ್ತು. ಅವರು ಕರ್ನಾಟಕ ಏಕೀಕರಣ ಪರಿಕಲ್ಪನೆಯನ್ನು ಹೊತ್ತು ಅದಕ್ಕೆ ಮಾನ್ಯತೆ ಸಿಗುವಂತೆ ರಾಜ್ಯದಾದ್ಯಂತ ಹೋರಾಟದ ಕಿಚ್ಚುಹಚ್ಚಿದ್ದರು’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಭಾನುವಾರ ಇಲ್ಲಿ ಹೇಳಿದರು.

ಭಾರತೀಯ ವಿದ್ಯಾಭವನ, ಲೋಕ ಶಿಕ್ಷಣ ಟ್ರಸ್ಟ್ ಆಶ್ರಯದಲ್ಲಿ ಆಯೋಜಿಸಿದ್ದ ಹಾರನಹಳ್ಳಿ ರಾಮಸ್ವಾಮಿ ಸ್ಮಾರಕ ದತ್ತಿ ಉಪನ್ಯಾಸದಲ್ಲಿ ಮಾತನಾಡಿದ ಅವರು, ‘ರಾಜಕಾರಣಿಗಳ ಕಿವಿಗಳು ಎಂದೂ ತೆರೆದಿರಬೇಕು ಎಂಬ ಎಚ್ಚರಿಕೆ ಗಂಟೆಯನ್ನು ರಾಮಸ್ವಾಮಿ ಅವರು ಧ್ವನಿಸುತ್ತಲೇ ಇದ್ದರು. ಸಮಾಜದ ಕಷ್ಟಸುಖಗಳನ್ನು ಕಣ್ತೆರೆದು ನೋಡಿ ಒಳಗಣ್ಣಿನಿಂದ ನಿಲುವು ರೂಪಿಸಿಕೊಳ್ಳಬೇಕು ಎಂಬುದು ಅವರ ಉಪದೇಶ ಮಾತ್ರ ಆಗಿರಲಿಲ್ಲ. ನುಡಿದಂತೆ ನಡೆದ ಸಜ್ಜನ ರಾಜಕಾರಣಿ ಅವರಾಗಿದ್ದರು’ ಎಂದು ಹೇಳಿದರು.

‘ರಾಮಸ್ವಾಮಿ ಎಂದ ಕೂಡಲೇ ಲೋಕ ಶಿಕ್ಷಣ ಟ್ರಸ್ಟ್ ನೆನಪಾಗುತ್ತದೆ. ಶಾಸಕರಾಗಿ, ಸಚಿವರಾಗಿ ಉತ್ತಮ ಕೆಲಸ ಮಾಡಿದ್ದರು. ಮುಂದಿನ ತಲೆಮಾರಿಗೂ ಅವರ ಆದರ್ಶಗಳು ಪ್ರಭಾವ ಬೀರುತ್ತವೆ’ ಎಂದರು.

ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ ಮಾತನಾಡಿ, ‘ಬಾಯಿಚಪಲ ಹಾಗೂ ಪ್ರಚಾರಕ್ಕಾಗಿ ಮಹನೀಯರನ್ನು ಕೆಲವರು ಟೀಕಿಸುತ್ತಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಲೋಕ ಶಿಕ್ಷಣ ಟ್ರಸ್ಟ್ ಧರ್ಮದರ್ಶಿ ಅಶೋಕ ಹಾರನಹಳ್ಳಿ ಮಾತನಾಡಿದರು.

ಶಿಕ್ಷಣ ತಜ್ಞ ಗುರುರಾಜ ಕರಜಗಿ ಅವರು ‘ವರ್ತಮಾನದಲ್ಲಿ ಮಹಾತ್ಮ ಗಾಂಧಿ ಜೀವನ ಹಾಗೂ ವೈಚಾರಿಕತೆಯ ಪ್ರಸ್ತುತತೆ’ ಕುರಿತು ಉಪನ್ಯಾಸ ನೀಡಿದರು. ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್.ಸುರೇಶ್, ಶಾಸಕ ಸಿ.ಕೆ.ರಾಮಮೂರ್ತಿ ಇದ್ದರು.

ಶಿಕ್ಷಣ ತಜ್ಞ ಗುರುರಾಜ ಕರಜಗಿ ಅವರು ಮಹಾತ್ಮ ಗಾಂಧಿ ಹಾಗೂ ಹಾರನಹಳ್ಳಿ ರಾಮಸ್ವಾಮಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. (ಎಡದಿಂದ) ಸಚಿವ ಎಚ್.ಕೆ.ಪಾಟೀಲ, ಬಿ.ಎಸ್. ಯಡಿಯೂರಪ್ಪ, ಅಶೋಕ ಹಾರನಹಳ್ಳಿ, ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್, ವೂಡೇ ಪಿ. ಕೃಷ್ಣ ಇದ್ದರು. ಪ್ರಜಾವಾಣಿ ಚಿತ್ರ

Muthoot Homefin

ಸಾರ್ವಜನಿಕ ಸೂಚನೆ



ಈ ಸೂಚನೆಯ ಮೂಲಕ, ರಾಜೀವ್ ಕೃಷ್ಣ, ಕೊನೆಯದಾಗಿ ತಿಳಿದಿರುವ ವಿಳಾಸ ಫ್ಲ್ಯಾಟ್ ನಂ. 3409, 2ನೇ ಮಹಡಿ, ಕಾರ್ತಿಕ್ಯ ಅಪಾರ್ಟ್‌ಮೆಂಟ್, 2ನೇ ಅಡ್ಡ ರಸ್ತೆ, 4ನೇ ಮುಖ್ಯ ರಸ್ತೆ, ಬೆಂಗಳೂರು, ಕರ್ನಾಟಕ – 560085 ದಲ್ಲಿ ವಾಸವಾಗಿದ್ದು, ಇವರು ಮುತ್ತೂಟ್ ಹೋಮ್‌ಫಿನ್ ಇಂಡಿಯಾ ಲಿಮಿಟೆಡ್ (ಎಮ್‌ಎಚ್‌ಐಎಲ್) ನ ಬೆಂಗಳೂರಿನ ಶಾಖೆಯಲ್ಲಿ ಉದ್ಯೋಗಿಯಾಗಿದ್ದರು ಮತ್ತು ಅವರ ಸೇವೆಯನ್ನು ಮುಕ್ತಾಯಗೊಳಿಸಲಾಗಿದೆ ಎಂದು ಸಂಬಂಧ ಪಟ್ಟವರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲು ಇಚ್ಛಿಸುತ್ತೇವೆ.

ಈಗ ಅವರು ಯಾವುದೇ ವ್ಯವಹಾರವನ್ನು ನಡೆಸಲು ಅಥವಾ ಎಮ್‌ಎಚ್‌ಐಎಲ್ ಪರವಾಗಿ ಯಾವುದೇ ಹಣವನ್ನು ಸ್ವೀಕರಿಸಲು ಯಾವುದೇ ವಿಧದ ಅಧಿಕಾರವನ್ನು ಹೊಂದಿಲ್ಲ ಎಂದು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಸಲಾಗಿದೆ. ಈ ಮೂಲಕ ಎಮ್‌ಎಚ್‌ಐಎಲ್ ಪರವಾಗಿ ರವಿ ಕೃಷ್ಣ ಅವರೊಂದಿಗೆ ಯಾವುದೇ ವಹಿವಾಟು ನಡೆಸದಂತೆ ಸಾರ್ವಜನಿಕರಿಗೆ ಎಚ್ಚರಿಕೆ ನೀಡಲಾಗಿದೆ. ಅವರೊಂದಿಗೆ ವ್ಯವಹರಿಸುವ ಯಾವುದೇ ವ್ಯಕ್ತಿ/ಸಂಸ್ಥೆಯು ತಮ್ಮ ಸ್ವಂತ ಅಪಾಯ ಮತ್ತು ಜವಾಬ್ದಾರಿಯೊಂದಿಗೆ ಹಾಗೆ ಮಾಡಬೇಕು. ಯಾವುದೇ ರೀತಿಯಲ್ಲಿ ರವಿ ಕೃಷ್ಣ ಅವರ ಮೇಲಿನ ಯಾವುದೇ ಅನಧಿಕೃತ ಮತ್ತು ಕಾನೂನುಬಾಹಿರ ವಹಿವಾಟಿಗೆ ಎಮ್‌ಎಚ್‌ಐಎಲ್ ಜವಾಬ್ದಾರರಾಗಿರುವುದಿಲ್ಲ.

ಮುತ್ತೂಟ್ ಹೋಮ್‌ಫಿನ್ ಇಂಡಿಯಾ ಲಿಮಿಟೆಡ್

ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ಅಂಧರ ಕ್ರಿಕೆಟ್ ಟೂರ್ನಿಯಲ್ಲಿ ಗೆಲುವು ಸಾಧಿಸಿದ್ದ ಭಾರತ ತಂಡದ ನಾಯಕಿ ಹಿರಿಯೂರಿನ ವರ್ಷಾ ಉಮಾಪತಿ ಅವರನ್ನು ಆದಿಜಾಂಬವ ಮಠದ ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ ಬೆಂಗಳೂರಿನಲ್ಲಿ ಸನ್ಮಾನಿಸಿದರು.

ಅಂಧರ ಕ್ರಿಕೆಟ್ ತಂಡದ ನಾಯಕಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ಅಂಧರ ಕ್ರಿಕೆಟ್ ಟೂರ್ನಿಯಲ್ಲಿ ಗೆಲುವು ಸಾಧಿಸಿದ್ದ ಭಾರತ ತಂಡದ ನಾಯಕಿ, ಹಿರಿಯೂರಿನ ವರ್ಷಾ ಉಮಾಪತಿ ಅವರನ್ನು ಆದಿಜಾಂಬವ ಮಠದ ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ ಬೆಂಗಳೂರಿನಲ್ಲಿ ಸನ್ಮಾನಿಸಿದರು.

‘ಬೆಂಗಳೂರಿನ ಸಮರ್ಥನಂ ಸಂಸ್ಥೆಯ ಪ್ರೋತ್ಸಾಹದಿಂದ ಮಹಿಳಾ ಅಂಧರ ಕ್ರಿಕೆಟ್ ತಂಡವು ಭಾಗವಹಿಸಿ ಆಸ್ಟ್ರೇಲಿಯಾ ತಂಡವನ್ನೇ ಸೋಲಿಸಿರುವುದು ಹೆಮ್ಮೆಯ ವಿಚಾರ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರೀಡೆಗೆ ಮತ್ತು ಕ್ರೀಡಾಪಟುಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು’ ಎಂದು ಸ್ವಾಮೀಜಿ ಒತ್ತಾಯಿಸಿದರು.

‘ಗೆಲುವು ಸಾಧಿಸಿ ತಂಡವು ಭಾರತಕ್ಕೆ ಬಂದಾಗ ಆಯಾ ರಾಜ್ಯಗಳ ಆಟಗಾರರನ್ನು ರಾಜ್ಯ ಸರ್ಕಾರಗಳು ನಗದು ಪುರಸ್ಕಾರ ನೀಡಿ ಗೌರವಿಸಿತ್ತು. ಆದರೆ, ಕರ್ನಾಟಕದಲ್ಲಿ ಇಂಥ ಪ್ರೋತ್ಸಾಹ ಕಾರ್ಯವಾಗಿಲ್ಲ ಎಂದು ಕ್ರೀಡಾಪಟುಗಳು ಬೇಸರದಿಂದ ಹೇಳಿಕೊಂಡಿದ್ದಾರೆ. ಈ ಕ್ರೀಡಾಪಟುಗಳನ್ನು ರಾಜ್ಯ ಸರ್ಕಾರ ಈಗಲಾದರೂ ಗುರುತಿಸಬೇಕು. ಕರ್ನಾಟಕದ ಮಹಿಳಾ ಅಂಧ ಕ್ರೀಡಾಪಟುಗಳಾದ ಚಿತ್ರದುರ್ಗದ ವರ್ಷಾ ಉಮಾಪತಿ, ಹಾವೇರಿಯ ಗಂಗವ್ವ ಹರಿಜನ, ತುಮಕೂರಿನ ದೀಪಿಕಾ ಅವರಿಗೆ ವಿದ್ಯಾರ್ಹತೆಯ ಅನುಸಾರ ಉದ್ಯೋಗ ನೀಡಬೇಕು. ತಲಾ ₹ 25 ಲಕ್ಷ ನಗದು ಪುರಸ್ಕಾರ ನೀಡಬೇಕು. ಬೆಂಗಳೂರಿನಲ್ಲಿ ಉಚಿತ ವಸತಿ ಸೌಲಭ್ಯ ಕಲ್ಪಿಸಬೇಕು’ ಎಂದು ಆಗ್ರಹಿಸಿದರು.

‘ಗಿಳಿಯು ಬಾರದೇ ಇರದು’ ಕೃತಿಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಭಾನುವಾರ ಬಿಡುಗಡೆ ಮಾಡಿದರು. ಪತ್ರಕರ್ತೆ ಮೇರಿ ಜೋಸೆಫ್, ಚಂದ್ರಶೇಖರ ಕಂಬಾರ, ಪಿ.ಎಸ್. ಶ್ರೀಧರನ್ ಪಿಳ್ಳೆ, ವಿಜಯ ಕರ್ನಾಟಕ ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ ಇದ್ದಾರೆ – ಪ್ರಜಾವಾಣಿ ಚಿತ್ರ

‘ಅನುವಾದಕರಿಗೆ ಕಲಾತ್ಮಕ ಸಾಮರ್ಥ್ಯ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅನುವಾದ ಮಾಡುವವರಿಗೆ ಕಲಾತ್ಮಕ ಸಾಮರ್ಥ್ಯವೂ ಇರಬೇಕು. ಆಗ ಅನುವಾದ ಯಶಸ್ವಿಯಾಗುತ್ತದೆ’ ಎಂದು ಗೋವಾ ರಾಜ್ಯಪಾಲ ಪಿ.ಎಸ್.ಶ್ರೀಧರನ್ ಪಿಳ್ಳೆ ಹೇಳಿದರು.

ವೀರಲೋಕ ಪ್ರಕಾಶನ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಪತ್ರಕರ್ತೆ ಮೇರಿ ಜೋಸೆಫ್ ಅನುವಾದಿಸಿರುವ ‘ಗಿಳಿಯು ಬಾರದೇ ಇರದು’ ಕೃತಿ ಬಿಡುಗಡೆಯಾಯಿತು. ಇದು ಪಿ.ಎಸ್.ಶ್ರೀಧರನ್ ಪಿಳ್ಳೆ ಅವರ ‘ತತ್ತ ವರಾತಿರಿಕ್ಕಿಲ್ಲ’ ಕೃತಿಯ ಅನುವಾದವಾಗಿದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್, ‘ಶ್ರೀಧರನ್ ಪಿಳ್ಳೆ ಅವರ ‘ತತ್ತ ವರಾತಿರಿಕ್ಕಿಲ್ಲ’ ಕೃತಿಯು ಸರ್ವೋತ್ತಮ ಕೃತಿಯಾಗಿದೆ. ಇದು ಗ್ರಾಮೀಣ ಬದುಕಿನ ವಿಧಾನ, ಜೀವನ ಮತ್ತು ಮಾನವೀಯ ಮೌಲ್ಯಗಳನ್ನು ಒಳಗೊಂಡಿದೆ. ಈ ಕೃತಿ ಕನ್ನಡಕ್ಕೆ ಅನುವಾದಗೊಂಡಿರುವುದು ಖುಷಿಯ ವಿಚಾರ’ ಎಂದು ಹೇಳಿದರು.

ಸಾಹಿತಿ ಚಂದ್ರಶೇಖರ ಕಂಬಾರ, ‘ಶ್ರೀಧರನ್ ಪಿಳ್ಳೆ ಅವರು ಬಹಳ ಒಳ್ಳೆಯ ಕಥೆಗಾರ. ಅವರ ಕಥೆಗಳ ಬಗ್ಗೆ ನಡೆದ ಚರ್ಚೆಗಳಲ್ಲಿ ನಾನೂ ಭಾಗವಹಿಸಿದ್ದೇನೆ. ಕಥೆಗಳಲ್ಲಿ ಜನಪದ ಶೈಲಿ ಮತ್ತು ಲಕ್ಷಣಗಳಿದ್ದು, ಎಂತಹ ದೊಡ್ಡ ಕಥೆಗಳ ಧ್ವನಿಯನ್ನು ಅವರು ಧ್ವನಿಸಬಲ್ಲರು. ಅವರ ಕಥೆಗಳು ಮಹಾಕಾವ್ಯದ ಅಂಶಗಳನ್ನು ಸಿಂಪಡಿಸಿದ ಹಾಗೆ ಇರುತ್ತದೆ’ ಎಂದರು.

The new Seltos is here to take you on an exhilarating drive experience. With an unstoppable attitude, the redesigned Seltos is the new benchmark of badass traits – distinctive design language, connected technology, premium cabin space, and a powerful driving experience. Discover the new Seltos that is here to awaken the badass in you.

Technology. Reborn. Badass 2.0 redefines the segment, yet again

Dual Screen Panoramic Display — Segment Best — 26.03 cm (10.25") HD Touchscreen Navigation + Full Digital Cluster with 26.04 cm (10.25") Color LCD MID give you an immersive and futuristic drive experience.

Most Powerful Turbo Petrol Engine with 160 ps power — Segment Best — offers best-in-class performance and fuel efficiency.

Intelligent Dual Zone Fully Automatic Air Conditioner — Segment First — ensures a comfortable drive for both, the driver and the co-driver.

Voice Activated Dual Pane Panoramic Sunroof — Segment Leading — gives you a mesmerising view of the world above.

BOSE Premium Sound System with 8 Speakers — Segment Leading — lets you enjoy an elevated audio experience.

Kia Connect# Skill with Amazon Alexa — Segment Leading — lets you control your Kia from the comfort of your home.

Host of other Badass Features: Electric Parking Brake with Auto Hold | Smart 20.32 cm (8") Head-up Display | Front Ventilated Seats with 8-Way Power Driver's Seat | Dual Sports Exhaust (1.5 TGDi Only) | Star Map LED Connected Tail Lamps | Sequential LED Turn Indicators | R18 (46.20 cm) Crystal Cut Glossy Black Alloy Wheels | Ambient Mood Lights with LED Sound Mood Lamps | GT Line & X-Line Differentiated Body Kit | Smart Pure Air Purifier with Virus and Bacteria Protection | Star Map Sweeping LED Light Guide | Exclusive Matte Graphite Exterior Color | Premium Sliding Cup Holder Cover

Safety. Reborn. Badass 2.0 with 17 Autonomous ADAS Level 2 Features~ + Robust 15 Standard Safety Features across variants

Smart Cruise Control with Stop and Go lets you set and maintain any cruising speed for an effortless drive.
Lane Keep Assist and Departure Warning proactively supports in keeping the car within its lane.
Front Collision Warning and Avoidance Assist scans the road to detect any impeding collison and stops the vehicle.
Blind Spot Collision Warning looks out for hard-to-spot traffic at the rear of the vehicle.
Leading Vehicle Departure Alert detects and alerts when the vehicle in front begins to move.
Safe Exit Warning alerts in case of an approaching object to ensure you safely exit from the car.

Kia Service Connected · Adaptive · Responsive · Engage | 3 Years Unlimited kms Warranty | Extended Warranty Up to 5 Years | My Convenience Plus Best in Class Cost of Ownership^^ | Scratch Care Program^ | IoT Based Smart Services## | 24x7 | 3 Years Nationwide RSA**

BOOK NOW Call 1800 108 5000 | 093195 91407 | Visit www.kia.com/in | Book Kia Seltos | kiacare@kiaindia.net | Look for "Kia India" @

Scan to know more

Terms & Conditions Apply. *Ex-showroom price all India. The product & feature images shown in this ad is for representation purpose only. Features and specifications as shown may not be part of standard fitment and may vary. The colors shown are subject to availability and may not be available across all variants and may differ slightly from those shown in this ad. ^Assured festive delivery applicable on select variants only. Assured deliveries to be completed by 13th Nov, 2023.Segment is defined as Mid SUV whose length lies between 4 220 - 4 390 mm and width between 1 760 - 1 810 mm. ~Advanced Driver Assistance System (ADAS) is not a substitute for human eye and driver vigilance. It is an assistance feature that enhances driving experience and safety. Effectiveness of ADAS may vary based on actual situation and all objects around vehicle may not be detected. The driver shall remain responsible for safe, vigilant, and attentive driving. #Kia Connect comes with 3-year free subscription. Amazon Alexa device is not a standard car accessory & the customer needs to purchase from a third party. Kia Connect skill features may vary depending on the variant, device compatibility, software, and network availability both in the vehicle and Alexa device. Kia Connect skill is only available in India and can be interacted with in English and Hindi. **RSA coverage across India except Andaman & Nicobar Islands and Lakshadweep. ##IoT based workshops for live vehicle tracking for digital experience. ^^Computed cumulatively with all benefits from comprehensive coverage. ^Program coverage includes repair of 1 scratch free cost in an ownership period of 12 months from the date of sale, applicable for all new Seltos retailed up to 31st Dec, 2023. The specifications and features may vary depending on models/ variants. Kia India Pvt. Ltd. (Formerly known as Kia Motors India Private Limited) reserves the right to make any changes with respect to the trims, colors, specifications, Kia Connect features and other details of any model as mentioned in this ad or to discontinue any model without prior notice. For more details visit your local Kia dealership. Kia India Pvt. Ltd. (Formerly known as Kia Motors India Private Limited) urges you to follow traffic rules, these are meant to keep you safe on roads.

FOR INFORMATION CONTACT: BENGALURU: VST KIA, PALACE ROAD, PH: 9606988123, YESHWANTHPUR, PH: 9606988124, ADVAITH KIA, LALBAGH MAIN ROAD, PH: 9611006006, EPITOME KIA, WHITEFIELD: PH: 9606970216, YELAHANKA, PH: 7406343339, JSP KIA, HOSUR ROAD, PH: 9606011244, BELLANDUR, PH: 9071077717, NAARA KIA, J.P NAGAR, PH: 7406528200, PPS KIA, MYSORE ROAD, PH: 6309990010, TAAPASI KIA, KALYAN NAGAR, PH: 8095537777, BELGAUM: MIRACULUM KIA, PH: 08312439111, BELLARY: ATHENA KIA, PH: 6364922832, BIJAPUR: KUMAR KIA, PH: 080 45849192, DAVANGERE: JANSI KIA, PH: 9538018155, GULBARGA: KUMAR KIA, PH: 080 45849191, HASSAN: AADARSH KIA, PH: 9606034050, HOSPET: BHADRA KIA, PH: 7760888885, HUBLI: NAGSHANTI KIA, PH: 9148432469, KUSHALNAGAR: ARM KIA, PH: 9606055314, KOLAR: EPITOME KIA, PH: 8951903224, MANGALORE: ARM KIA, PH: 9606013152, MANDYA: AADARSH KIA, PH: 9606034070, MYSORE: AADARSH KIA, PH: 9606034060, SHIMOGA: JANSI KIA, PH: 9538416666, TUMKUR: PPS KIA, PH: 6303622210, UDUPI: ARM KIA, PH: 9606055296

INNOCEAN-066/23

'ಮಹಾಸಂಗ್ರಾಮಿ' ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ನಿವೃತ್ತ ಅಧಿಕಾರಿ ಚಿರಂಜೀವಿ ಸಿಂಘ್

'ಹಿರೇಮಠ ಹೋರಾಟ: ದೇಶವ್ಯಾಪಿ ಪ್ರಭಾವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಸ್.ಆರ್. ಹಿರೇಮಠ ಅವರ ಹೋರಾಟದ ಪ್ರಭಾವ ಕರ್ನಾಟಕಕ್ಕೆ ಸೀಮಿತವಾಗಿಲ್ಲ. ದೇಶವ್ಯಾಪಿ ವಿಸ್ತರಿಸಿದೆ' ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್ ಅಭಿಪ್ರಾಯಪಟ್ಟರು.

ರೂಪ ಹಾಸನ ರಚಿಸಿರುವ ಎಸ್.ಆರ್. ಹಿರೇಮಠ ಅವರ ರಚನಾತ್ಮಕ ಪ್ರಯೋಗಗಳ ಬಾಳ್ಕಥನ 'ಮಹಾಸಂಗ್ರಾಮಿ' ಕೃತಿಯನ್ನು ಭಾನುವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ನಿರಂತರ ಹೋರಾಟ ಮಾಡಿಕೊಂಡು ಬಂದಿರುವ ಹಿರೇಮಠ ಅವರ ಜೀವನ ಚರಿತ್ರೆ ಈ ಮೊದಲೇ ಬರಬೇಕಿತ್ತು. ಈ ಬಾಳ್ಕಥನ ರಚಿಸಲು ಅವರ ಮಾತುಗಳನ್ನು 120 ತಾಸು ರೆಕಾರ್ಡ್ ಮಾಡಿಕೊಂಡಿರುವುದು ಉತ್ತಮ ಸಂಗ್ರಹವಾಗಲಿದೆ' ಎಂದು ತಿಳಿಸಿದರು.

ರಾಜಕೀಯ ವಿಶ್ಲೇಷಕ ಸುಗತ ಶ್ರೀನಿವಾಸ್‌ರಾಜು ಮಾತನಾಡಿ, 'ಒಳಿತಿಗಿಂತ ಕೆಡುಕಿನ ಬಗ್ಗೆ ಮಾತನಾಡುವುದೇ ಹೆಚ್ಚು. ಹಿರೇಮಠ ಅವರು ಒಳಿತಿನ ಹರಿವನ್ನು ಹಿಗ್ಗಿಸಲು ಪ್ರಯತ್ನಿಸಿದವರು. ಅವರ ಹೋರಾಟದ ಭಾಷೆಯು ಕಾವ್ಯಾತ್ಮಕವಾದುದು ಅಲ್ಲ. ಸಂವಿಧಾನಾತ್ಮಕವಾದುದು, ರಾಜಕೀಯವಾದುದು' ಎಂದು ವಿಶ್ಲೇಷಿಸಿದರು.

'ಕಡಿಮೆ ಸ್ವಾರ್ಥ ಇರುವವರಷ್ಟೇ ಹೋರಾಟ ನಡೆಸಲು ಸಾಧ್ಯ. ಸಂಗ್ರಾಮ ಮತ್ತು ನಿರ್ಮಾಣ ಎರಡನ್ನು ಒಟ್ಟೊಟ್ಟಿಗೆ ಮಾಡಿದ ಹಿರೇಮಠ ಅವರಿಗೆ ಕೇಡು ಯಾವುದು ಎಂಬ ಸ್ಪಷ್ಟ ಅರಿವಿದೆ' ಎಂದು ಸಾಹಿತಿ ನಟರಾಜ್ ಹುಳಿಯಾರ್ ಹೇಳಿದರು.

ನಗರದ ಚಿತ್ರಕಲಾ ಪರಿಷತ್ತಿನಲ್ಲಿ ಭಾನುವಾರ 'ಮಹಾಸಂಗ್ರಾಮಿ' ಪುಸ್ತಕವನ್ನು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್ ಲೋಕಾರ್ಪಣೆ ಮಾಡಿದರು. ರಾಜಕೀಯ ವಿಶ್ಲೇಷಕ ಸುಗತ ಶ್ರೀನಿವಾಸ್ ರಾಜು, ಹೋರಾಟಗಾರ ಎಸ್.ಆರ್. ಹಿರೇಮಠ, ಸಾಹಿತಿ ನಟರಾಜ್ ಹುಳಿಯಾರ್, ಲೇಖಕಿ ಪಿ.ಭಾರತಿ ದೇವಿ, ಕೃತಿಕಾರರಾದ ರೂಪ ಹಾಸನ ಇದ್ದರು. –ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಕೃತಿ ಹೆಸರು: ಮಹಾಸಂಗ್ರಾಮಿ
ಲೇಖಕಿ: ರೂಪ ಹಾಸನ
ಪುಟಗಳು: 464
ದರ: ₹ 600

ಲೇಖಕಿ ಪಿ. ಭಾರತೀದೇವಿ ಮಾತನಾಡಿ, 'ತುರ್ತು ಪರಿಸ್ಥಿತಿ, ಐಡಿಯಾಸ್ ಸಂಸ್ಥೆ ಬಗ್ಗೆ ಈ ಕೃತಿಯಲ್ಲಿ ಬಹಳ ವಿವರಗಳಿವೆ. ಆದರೆ, ಗಣಿ-ದೊರೆಗಳನ್ನೇ ಎದುರು ಹಾಕಿಕೊಂಡು ಅವರು ನಡೆಸಿದ ಹೋರಾಟದ ಬಗ್ಗೆ ಅಷ್ಟು ವಿವರಗಳು ಇಲ್ಲ. ಒಬ್ಬ ವ್ಯಕ್ತಿಗೆ ಇಂಥ ಶಕ್ತಿ ಎಲ್ಲಿಂದ ಬಂತು ಎಂಬ ಅಚ್ಚರಿ ನಮ್ಮದು' ಎಂದರು.

ಸಮಾಜ ಪರಿವರ್ತನಾ ಸಮುದಾಯ, ಜನಾಂದೋಲನ ಮಹಾಮೈತ್ರಿ, ಜನಸಂಗ್ರಾಮ ಪರಿಷತ್, ಅಭಿರುಚಿ ಪ್ರಕಾಶನ ವತಿಯಿಂದ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮ-ದಲ್ಲಿ ಹೋರಾಟಗಾರ ಎಸ್.ಆರ್. ಹಿರೇಮಠ, ಕೃತಿಕಾರರಾದ ರೂಪ ಹಾಸನ, ಪ್ರಕಾಶಕ ಅಭಿರುಚಿ ಗಣೇಶ್, ಜನಸಂಗ್ರಾಮ ಪರಿಷತ್ತಿನ ರಾಘವೇಂದ್ರ ಕುಷ್ಟಗಿ ಇದ್ದರು.

ಸುದ್ದಿ 2 ನಿಮಿಷ

ಪ್ರೀತಿಸುವಂತೆ ದುಂಬಾಲು ಆ್ಯಸಿಡ್ ಎರಚುವ ಬೆದರಿಕೆ

ಬೆಂಗಳೂರು: 'ತನ್ನನ್ನು ಪ್ರೀತಿಸುವಂತೆ ದುಂಬಾಲು ಬಿದ್ದಿರುವ ಶ್ರೀನಿವಾಸ್ ಎಂಬಾತ, ಒಪ್ಪದಿದ್ದದ್ದರೆ ಆ್ಯಸಿಡ್ ಎರಚುವುದಾಗಿ ಬೆದರಿಸು-ತ್ತಿದ್ದಾನೆ' ಎಂದು ಆರೋಪಿಸಿ ಮಹಿಳೆಯೊಬ್ಬರು ಬ್ಯಾಟರಾಯನ-ಪುರ ಠಾಣೆಗೆ ದೂರು ನೀಡಿದ್ದಾರೆ.

'37 ವರ್ಷ ವಯಸ್ಸಿನ ಮಹಿಳೆ ಇತ್ತೀಚೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪತಿಯಿಂದ ದೂರವಾಗಿರುವ ಮಹಿಳೆ, ಪ್ರತ್ಯೇಕವಾಗಿ ವಾಸವಿದ್ದಾರೆ. ಕೆಲ ವರ್ಷಗಳ ಹಿಂದೆ ಅವರಿಗೆ ಆರೋಪಿ ಶ್ರೀನಿವಾಸ್ ಪರಿಚಯವಾಗಿತ್ತು. ನಂತರ, ಇಬ್ಬರು ಪರಸ್ಪರ ಪ್ರೀತಿ-ಸಲಾರಂಭಿಸಿದ್ದರು. ಸಲುಗೆಯೇ ಏರ್ಪಟ್ಟಿತ್ತು.'

'ತಮ್ಮನ್ನು ಮದುವೆಯಾಗುವಂತೆ ಮಹಿಳೆ ಒತ್ತಾಯಿ-ಸಿದ್ದರು. ಅದು ಸಾಧ್ಯವಿಲ್ಲವೆಂದು ಹೇಳಿದ್ದ ಆರೋಪಿ, ಮಹಿಳೆ ಮೇಲೆ ಹಲ್ಲೆ ಮಾಡಿದ್ದ. ಈ ಸಂಬಂಧ ಪ್ರಕರಣ ದಾಖಲಾಗಿತ್ತು. ಆರೋಪಿ ಶ್ರೀನಿವಾಸ್‌ನನ್ನು ಬಂಧಿಸಲಾಗಿತ್ತು. ಕೆಲದಿನ ಜೈಲಿನಲ್ಲಿದ್ದ ಆರೋಪಿ, ಜಾಮೀನು ಮೇಲೆ ಇತ್ತೀಚೆಗೆ ಹೊರಗೆ ಬಂದಿದ್ದಾನೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಪುನಃ ಮಹಿಳೆ ಹಿಂದೆ ಬಿದ್ದಿರುವ ಆರೋಪಿ, ತನ್ನನ್ನು ಪ್ರೀತಿಸುವಂತೆ ಒತ್ತಾಯಿಸುತ್ತಿದ್ದಾನೆ. ಆದರೆ, ಮದುವೆಗೆ ಒಪ್ಪುತ್ತಿಲ್ಲ. ಪರಸ್ಪರ ಪ್ರೀತಿಸುತ್ತ, ಅಕ್ರಮ ಸಂಬಂಧ ಇಟ್ಟುಕೊಳ್ಳೋಣ-ವೆಂದು ಹೇಳುತ್ತಿದ್ದಾನೆ. ಇದನ್ನು ಪ್ರಶ್ನಿಸಿದ್ದಕ್ಕೆ ಮಹಿಳೆ ಮೇಲೆ ಆ್ಯಸಿಡ್ ಎರಚುವುದಾಗಿ ಹಾಗೂ ಕೊಲೆ ಮಾಡುವುದಾಗಿ ಬೆದರಿಕೆ ಯೊಡ್ಡಿದ್ದಾನೆ. ಈ ಸಂಗತಿ ದೂರಿನಲ್ಲಿದೆ' ಎಂದು ಮೂಲಗಳು ಹೇಳಿವೆ.

ಅಪಹರಿಸಿ ₹ 50 ಲಕ್ಷಕ್ಕೆ ಬೇಡಿಕೆ: ರೌಡಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಕ್ತಿಯೊಬ್ಬರನ್ನು ಅಪಹರಿಸಿ ತಮಿಳುನಾಡಿನಲ್ಲಿ ಅಕ್ರಮ ಬಂಧನದಲ್ಲಿಟ್ಟು ₹ 50 ಲಕ್ಷಕ್ಕೆ ಬೇಡಿಕೆ ಇರಿಸಿದ್ದ ರೌಡಿ ಸೇರಿ ಮೂವರು ಆರೋಪಿಗಳನ್ನು ಚನ್ನಮ್ಮನ ಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರೌಡಿ ಅರುಣ್‌ಕುಮಾರ್ ಅಲಿಯಾಸ್ ಸುನಾಮಿ, ಸೋಮಶೇಖರ್ ಹಾಗೂ ಕಿರಣ್‌ಕುಮಾರ್ ಬಂಧಿತರು. ಮೂವರೂ ಅಪರಾಧ ಹಿನ್ನೆಲೆಯುಳ್ಳವರು. ತಮ್ಮ ಮೇಲಿನ ಅಪರಾಧ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅಗತ್ಯವಿದ್ದ ಹಣಕ್ಕಾಗಿ ಕೃತ್ಯ ಎಸಗಿದ್ದರು' ಎಂದು ಪೊಲೀಸರು ಹೇಳಿದರು.

'ಸ್ಥಳೀಯ ನಿವಾಸಿ ಸಂದೀಪ್‌ಕುಮಾರ್ ಅವರಿಗೆ ಆಗಸ್ಟ್ 30ರಂದು ಕರೆ ಮಾಡಿದ್ದ ಸ್ನೇಹಿತ ಅನಿಲ್‌ಕುಮಾರ್, ಮನೆಯಿಂದ ಹೊರಗೆ ಬರುವಂತೆ ಹೇಳಿದ್ದ. ನಂತರ, ಊಟಕ್ಕೆ ಹೋಗೋಣವೆಂದು ತಿಳಿಸಿದ್ದ. ಇದೇ ಸಂದರ್ಭದಲ್ಲಿ ಇನ್ನೋವಾ ಕಾರಿನಲ್ಲಿ ಬಂದಿದ್ದ ಆರೋಪಿಗಳು, ಮನೆ ಬಳಿ ನಿಂತಿದ್ದ ಸಂದೀಪ್‌ಕುಮಾರ್ ಅವರನ್ನು ಅಪಹರಣ ಮಾಡಿದ್ದರು' ಎಂದು ತಿಳಿಸಿದರು.

'ಕಾರಿನಲ್ಲಿ ಸಂದೀಪ್ ಮೇಲೆ ಹಲ್ಲೆ ಮಾಡಿದ್ದ ಆರೋಪಿಗಳು, ₹ 50 ಲಕ್ಷ ನೀಡುವಂತೆ ಬೇಡಿಕೆ ಇರಿಸಿದ್ದರು. ಅಷ್ಟು ಹಣವಿಲ್ಲವೆಂದು ದೂರುದಾರ ಹೇಳಿದ್ದರು. ನಂತರ, ದೂರುದಾರರನ್ನು ತಮಿಳುನಾಡಿನ ಫಾರ್ಮ್‌ಹೌಸ್‌ವೊಂ-ದಕ್ಕೆ ಕರೆದೊಯ್ದು ಅಕ್ರಮ ಬಂಧನದ-ಲ್ಲಿಟ್ಟಿದ್ದರು.'

'ಸ್ನೇಹಿತರು ಹಾಗೂ ಸಂಬಂಧಿಕರಿಗೆ ಕರೆ ಮಾಡಿ ₹ 20 ಲಕ್ಷ ತರಿಸುವಂತೆ ದೂರುದಾರರಿಗೆ ಪುನಃ ಬೇಡಿಕೆ ಇರಿಸಿದ್ದರು. ಹಣವಿಲ್ಲವೆಂದು ಹೇಳಿದ್ದಕ್ಕೆ ದೊಣ್ಣೆಯಿಂದ ಹೊಡೆದು ಚಿತ್ರಹಿಂಸೆ ನೀಡಿದ್ದರು. ಆರೋಪಿಗಳಿಂದ ತಪ್ಪಿಸಿ-ಕೊಂಡಿದ್ದ ದೂರುದಾರ, ಸೆ. 5ರಂದು ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸರು ವಿವರಿಸಿದರು.

ಡಾಬಾದಲ್ಲಿ ಬಂಧನ: 'ದೂರುದಾರ ತಪ್ಪಿಸಿಕೊಂಡ ಬಳಿಕ ಬಂಧನ ಭೀತಿಯಲ್ಲಿದ್ದ ಆರೋಪಿಗಳು, ಮಂಡ್ಯ ಜಿಲ್ಲೆಯ ಡಾಬಾವೊಂದರಲ್ಲಿ ಉಳಿದುಕೊಂಡಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಮೂವರನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಸಂದೀಪ್ ಅವರ ಸ್ನೇಹಿತ ಅನಿಲ್‌ಕುಮಾರ್ ಸಹ ಕೃತ್ಯದಲ್ಲಿ ಭಾಗಿಯಾಗಿದ್ದ. ಸದ್ಯ ಈತ ತಲೆಮರೆಸಿ-ಕೊಂಡಿದ್ದಾನೆ' ಎಂದು ತಿಳಿಸಿದರು.

ಡಿಎಂಕೆ ಮಂಡಲ ಅಧ್ಯಕ್ಷ ಕೊಲೆ ಯತ್ನ: ಆರೋಪಿ ಬಂಧನ

ಬೆಂಗಳೂರು: ತಮಿಳುನಾಡಿನ ಡಿಎಂಕೆ ಪಕ್ಷದ ಮಧುರೈ ಮಂಡಲ ಅಧ್ಯಕ್ಷ ವಿ.ಕೆ. ಗುರುಸ್ವಾಮಿ ಕೊಲೆ ಯತ್ನ ಪ್ರಕರಣದ ಆರೋಪಿ ಪ್ರಸನ್ನನನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ಠಾಣೆಯೊಂದರ ರೌಡಿಪಟ್ಟಿಯಲ್ಲಿ ಗುರುಸ್ವಾಮಿ ಹೆಸರಿತ್ತು. ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದ ಗುರುಸ್ವಾಮಿ, ಏಜೆಂಟರನ್ನು ಭೇಟಿಯಾಗಲು ಸೆ. 11ರಂದು ಬೆಂಗಳೂರಿನ ಕಮ್ಮನ-ಹಳ್ಳಿಯ ಸುಖಸಾಗರ್ ಹೋಟೆಲ್‌ಗೆ ಬಂದಿದ್ದಾಗ ಕೊಲೆಗೆ ಯತ್ನ ನಡೆದಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಳೇ ವೈಷಮ್ಯದಿಂದಾಗಿ ಎದುರಾಳಿ ತಂಡದವರು ಕೃತ್ಯ ಎಸಗಿರುವ ಅನುಮಾನವಿತ್ತು. ತಮಿಳುನಾಡಿಗೆ ಹೋಗಿದ್ದ ವಿಶೇಷ ತಂಡ, ಆರೋಪಿ ಮಧುರೈನ ಪ್ರಸನ್ನ-ನನ್ನು ಬಂಧಿಸಿ ನಗರಕ್ಕೆ ಕರೆತಂದಿದೆ' ಎಂದು ತಿಳಿಸಿವೆ.

'ಗುರುಸ್ವಾಮಿ ಮೇಲೆ ದಾಳಿ ನಡೆದಿದ್ದ ಸಂದರ್ಭದಲ್ಲಿ ಪ್ರಸನ್ನ ಸ್ಥಳ-ದಲ್ಲಿದ್ದ. ಆರೋಪಿಗಳ ಜೊತೆ ಈತನೂ ಪರಾರಿಯಾಗಿದ್ದ. ಈತನ ವಿರುದ್ಧ ಈ ಹಿಂದೆ ಎರಡು ಪ್ರಕರಣಗಳು ದಾಖಲಾಗಿದ್ದವು.'

'ಪ್ರಸನ್ನನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ. ಪ್ರಮುಖ ಆರೋಪಿಗಳ ಪತ್ತೆ ಕೆಲಸ ಮುಂದುವರಿದಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಐಫೋನ್‌ಗಾಗಿ ಮನೆ ತೊರೆದಿದ್ದ ಬಾಲಕರು: ಗೋವಾದಲ್ಲಿ ಪತ್ತೆ

ಬೆಂಗಳೂರು: ಐಫೋನ್ ಕೊಡಿಸಲಿಲ್ಲವೆಂಬ ಕಾರಣಕ್ಕೆ ಮನೆ ತೊರೆದಿದ್ದ ಇಬ್ಬರು ಬಾಲಕರು ಗೋವಾದಲ್ಲಿ ಪತ್ತೆಯಾಗಿದ್ದು, ಅವರಿಬ್ಬ-ರನ್ನು ಪೊಲೀಸರು ಪೋಷಕರ ಸುಪರ್ದಿಗೆ ಒಪ್ಪಿಸಿದ್ದಾರೆ.

'ನಾಗಶೆಟ್ಟಿಯಲ್ಲಿ ವಾಸವಿದ್ದ ಬಾಲಕರು ನಾಪತ್ತೆಯಾಗಿದ್ದ ಬಗ್ಗೆ ಪೋಷಕರು ದೂರು ನೀಡಿದ್ದರು. ತನಿಖೆ ಕೈಗೊಂಡು ಬಾಲಕರನ್ನು ಪತ್ತೆ ಮಾಡಲಾಗಿದೆ' ಎಂದು ಸಂಜಯನಗರ ಠಾಣೆ ಪೊಲೀಸ್ ಮೂಲಗಳು ಹೇಳಿವೆ. 'ಆನ್‌ಲೈನ್ ತರಗತಿಗೆ ಹಾಜರಾಗಲೆಂದು ಬಾಲಕರಿಗೆ ಪೋಷಕರು ಸ್ಮಾರ್ಟ್‌ಫೋನ್ ಕೊಡಿಸಿದ್ದರು. ಆದರೆ, ಐಫೋನ್ ಬೇಕೆಂದು ಬಾಲಕರು ಪಟ್ಟು ಹಿಡಿದಿದ್ದರು. ಹಣವಿಲ್ಲವೆಂದು ಪೋಷಕರು ಹೇಳಿದ್ದರು. ಅದರಿಂದ ಸಿಟ್ಟಾದ ಬಾಲಕರು, ಸೆ. 1ರಂದು ಮನೆ ಬಿಟ್ಟು ಹೋಗಿದ್ದರು.'

'ಪೋಷಕರು ಎಷ್ಟೇ ಹುಡುಕಿದರೂ ಬಾಲಕರ ಸುಳಿವು ಸಿಕ್ಕಿರಲಿಲ್ಲ. ಬಳಿಕವೇ ಠಾಣೆಗೆ ದೂರು ನೀಡಿದ್ದರು. ಇದರ ನಡುವೆಯೇ ಬಾಲಕರು, ಗೋವಾಗೆ ಹೋಗಿದ್ದರು. ಅಲ್ಲಿಯ ಪೊಲೀಸರು ಬಾಲಕರನ್ನು ವಿಚಾರಿಸಿದಾಗ ವಿಷಯ ಗೊತ್ತಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಮುಟ್ಟಿನ ಕಪ್ ವಿತರಣೆಗೆ ಚಾಲನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯು ಶುಚಿ ಯೋಜನೆಯಡಿ ಪ್ರಾಯೋಗಿಕವಾಗಿ ಕೈಗೆತ್ತಿಕೊಂಡಿರುವ 'ನನ್ನ ಮೈತ್ರಿ' ಮುಟ್ಟಿನ ಕಪ್ ವಿತರಿಸುವ ಯೋಜನೆಗೆ ಮಂಗಳೂರಿನ ನೆಹರು ಮೈದಾನದಲ್ಲಿ ಸೋಮವಾರ ಬೆಳಿಗ್ಗೆ 9.30 ಕ್ಕೆ ಚಾಲನೆ ದೊರೆಯಲಿದೆ.

ಇಲಾಖೆಯು ದಕ್ಷಿಣಕನ್ನಡ ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿ ಮಾಡುತ್ತಿದ್ದು, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಲಿದ್ದಾರೆ. ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್, ಧರ್ಮಸ್ಥಳದ ಧರ್ಮಾಧಿಕಾರಿ ವಿರೇಂದ್ರ ಹೆಗ್ಗಡೆ ಹಾಗೂ ನಟಿ ಸಪ್ತಮಿ ಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

'ಸ್ಯಾನಿಟರಿ ನ್ಯಾಪ್ಕಿನ್‌ಗೆ ಪರ್ಯಾಯವಾಗಿ ಪರಿಸರ ಸ್ನೇಹಿ ಮುಟ್ಟಿನ ಕಪ್‌ಗಳನ್ನು ವಿದ್ಯಾರ್ಥಿನಿಯರಿಗೆ ಉಚಿತವಾಗಿ ವಿತರಿಸಲು ನಿರ್ಧರಿಸಲಾಗಿದೆ. ಹೆಣ್ಣು ಮಕ್ಕಳಲ್ಲಿ ಮುಟ್ಟಿನ ನಿರ್ವಹಣೆಗೆ ಸೂಕ್ತ ಸಾಧನವಾಗಿರುವ, ಮರುಬಳಕೆ ಮಾಡಬಹುದಾದ ಈ ಮುಟ್ಟಿನ ಕಪ್‌ಗಳ ಬಗ್ಗೆ ಮಾಹಿತಿ ನೀಡಿ, ಇವುಗಳ ಬಳಕೆಯನ್ನು ಪ್ರೋತ್ಸಾಹಿಸಲು ಉದ್ದೇಶಿ-ಸಲಾಗಿದೆ' ಎಂದು ಇಲಾಖೆ ತಿಳಿಸಿದೆ.

ಮಣ್ಣಿನ ಗಣೇಶ: ಕಾರ್ಯಾಗಾರ

ಬೆಂಗಳೂರು: ಹಲಸೂರು ಕೆರೆ ಬಳಿ 'ಬಿ.ಪ್ಯಾಕ್' ಹಾಗೂ 'ಬಿ.ಕ್ಲಿಪ್' ಅಲುಮ್ನಿ ಅಸೋಸಿಯೇಷನ್‌ನಿಂದ ಪರಿಸರ ಸ್ನೇಹಿ ಮಣ್ಣಿನ ಗಣಪತಿ ಮೂರ್ತಿ ತಯಾರಿಕೆ ಕಾರ್ಯಾಗಾರ ಆಯೋಜಿಸಲಾಗಿತ್ತು.

ಶಾಲಾ– ಕಾಲೇಜುಗಳ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಸ್ಥಳೀಯರು, ರೆಸಿಡೆನ್ಸ್ ವೆಲ್ಫೇರ್ ಅಸೋಸಿಯೇಷನ್ಸ್ ಸದಸ್ಯರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ನಗರದಲ್ಲಿ ಪಿಒಪಿ ಗಣಪತಿ ಮೂರ್ತಿಗಳಿಂದ ಆಗುತ್ತಿರುವ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ಕಾರ್ಯಾಗಾರ ಆಯೋಜಿಸಲಾಗಿದೆ. ಇನ್ನೂ 100 ವಾರ್ಡ್‌ಗಳಲ್ಲಿ ಕಾರ್ಯಾಗಾರ ನಡೆಸಲಾಗುವುದು ಎಂದು ಬಿ. ಕ್ಲಿಪ್‌ನ ಸಂಪತ್ ಹೇಳಿದರು.

ಶಾಸಕ ರಿಜ್ವಾನ್ ಅರ್ಷದ್ ಮಾತನಾಡಿ, 'ಪಿಒಪಿ ಗಣಪತಿ ಮೂರ್ತಿಗಳಿಂದ ಜಲಮೂಲಗಳು ಕಲುಷಿತಗೊಳ್ಳುತ್ತಿವೆ. ಪಿಒಪಿ ಗಣಪತಿ ಮೂರ್ತಿಗಳ ಬದಲಿಗೆ ಮಣ್ಣಿನಲ್ಲಿ ಮಾಡಿದ ಗಣಪತಿ ಮೂರ್ತಿಗಳನ್ನು ಪ್ರತಿಷ್ಠಾಪಿಸಬೇಕು' ಎಂದು ಸಲಹೆ ನೀಡಿದರು. ಸಂಸದ ಪಿ.ಸಿ.ಮೋಹನ್, ರಾಜೀವ್‌ಗೌಡ, ಬಿ.ಪ್ಯಾಕ್ ಸಿಇಒ ರೇವತಿ ಅಶೋಕ್ ಇದ್ದರು.

ಪ್ರತ್ಯೇಕ ಅಪಘಾತ: ಮೂವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಲೆಕ್ಟ್ರಾನಿಕ್ ಸಿಟಿ, ಕಾಡು-ಗೊಂಡನಹಳ್ಳಿ (ಕೆ.ಜಿ. ಹಳ್ಳಿ) ಹಾಗೂ ಯಲಹಂಕ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಮೂವರು ಮೃತಪಟ್ಟಿದ್ದಾರೆ.

ನಾಗನಾಥಪುರ ನಿವಾಸಿ ನಾಗರಾಜು, ಅಟ್ಟೂರು ನಿವಾಸಿ ದೇವರಾಜ್ (21) ಹಾಗೂ ನಾಗವಾರದ ನಿವಾಸಿ ಮಹೇಂದ್ರಕುಮಾರ್ (50) ಮೃತರು.

ಸೈಕಲ್‌ಗೆ ಕಾರು ಡಿಕ್ಕಿ: 'ಗಾರ್ಮೆಂಟ್ಸ್ ಉದ್ಯೋಗಿ ನಾಗರಾಜು, ಶನಿವಾರ ರಾತ್ರಿ ಕೆಲಸ ಮುಗಿಸಿಕೊಂಡು ಸೈಕಲ್‌ನಲ್ಲಿ ಮನೆಯತ್ತ ಹೊರಟಿದ್ದರು. ಈ ವೇಳೆ ಸೈಕಲ್‌ಗೆ ಕಾರು ಡಿಕ್ಕಿ ಹೊಡೆದಿತ್ತು' ಎಂದು ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಗಾಯಗೊಂಡಿದ್ದ ನಾಗರಾಜು ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ. ಕಾರು ಚಾಲಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ತಿಳಿಸಿದರು.

ಬೈಕ್‌ಗೆ ಸಿಮೆಂಟ್ ಮಿಕ್ಸರ್ ಲಾರಿ ಡಿಕ್ಕಿ: 'ಯಾದಗಿರಿಯ ದೇವರಾಜ್ ಡೆಲಿವರಿ ಬಾಯ್ ಕೆಲಸ ಮಾಡುತ್ತಿದ್ದರು. ಅಟ್ಟೂರಿನಲ್ಲಿ ನೆಲೆಸಿದ್ದರು' ಎಂದು ಯಲಹಂಕ ಸಂಚಾರ ಠಾಣೆ ಪೊಲೀಸರು ಹೇಳಿದರು.

'ದೇವರಾಜ್ ಭಾನುವಾರ ಬೆಳಿಗ್ಗೆ ಎಂ.ಎಸ್.ಪಾಳ್ಯ ರಸ್ತೆಯಲ್ಲಿ ಬೈಕ್‌ನಲ್ಲಿ ಹೊರಟಿದ್ದರು. ಇದೇ ಮಾರ್ಗದಲ್ಲಿ ತೆರಳುತ್ತಿದ್ದ ಸಿಮೆಂಟ್ ಮಿಕ್ಸರ್ ಲಾರಿ, ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಬೈಕ್ ಸಮೇತ ಬಿದ್ದಿದ್ದ ದೇವರಾಜ್ ತೀವ್ರ ಗಾಯಗೊಂಡು ಮೃತಪಟ್ಟಿದ್ದಾರೆ. ಲಾರಿ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದರು.

ಮೆಟ್ರೊ ಕಾಮಗಾರಿ ಲಾರಿ ಜಪ್ತಿ: 'ಆಸ್ಪತ್ರೆಯೊಂದರಲ್ಲಿ ಸ್ವಚ್ಛತೆ ಕೆಲಸ ಮಾಡುತ್ತಿದ್ದ ಮಹೇಂದ್ರ ಕುಮಾರ್ ಎಂಬುವರು ಶನಿವಾರ ಸಂಜೆ ಕೆಲಸ ಮುಗಿಸಿ ಜೆಎಂಜೆ ರಸ್ತೆಯಲ್ಲಿ ನಡೆದುಕೊಂಡು ಮನೆಯತ್ತ ಹೊರಟಿದ್ದಾಗ ಅಪಘಾತ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು. 'ಮೆಟ್ರೊ ಕಾಮಗಾರಿಗೆ ಕಾಂಕ್ರಿಟ್ ಸಾಗಿಸುತ್ತಿದ್ದ ಲಾರಿ, ಮಹೇಂದ್ರ ಅವರಿಗೆ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಲಾರಿ ಜಪ್ತಿ ಮಾಡಲಾಗಿದ್ದು, ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ತಿಳಿಸಿದರು.

ಕಾನ್‌ಸ್ಟೆಬಲ್ ಪರೀಕ್ಷೆ ಅಕ್ರಮದ ಶಂಕೆ: ನಾಲ್ವರು ವಶಕ್ಕೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ರಾಜ್ಯದಲ್ಲಿ ಭಾನುವಾರ ನಡೆದ ಸಶಸ್ತ್ರ ಮೀಸಲು ಪೊಲೀಸ್ ಪಡೆಯ (ಸಿಎಆರ್/ಡಿಎಆರ್) ಪರೀಕ್ಷೆಯಲ್ಲಿ ಅಕ್ರಮ ಎಸಗಬಹುದೆಂಬ ಅನುಮಾನದ ಹಿನ್ನೆಲೆಯಲ್ಲಿ ನಾಲ್ವರನ್ನು ಸಿಸಿಬಿ ಪೊಲೀಸರು ಮುಂಜಾಗ್ರತಾ ಕ್ರಮವಾಗಿ ವಶಕ್ಕೆ ಪಡೆದಿದ್ದಾರೆ.

'ಕೊಪ್ಪಳ ಜಿಲ್ಲೆಯ ಕುಷ್ಟಗಿಯ ಬಸವರಾಜ್, ದಿಲೀಪ್, ತಿಮ್ಮೇಗೌಡ ಹಾಗೂ ಚಿಕ್ಕನಾಯಕನಹಳ್ಳಿಯ ಹರಿಪ್ರಸಾದ್‌ನನ್ನು ಮುಂಜಾಗ್ರತಾ ಕ್ರಮವಾಗಿ ವಶಕ್ಕೆ ಪಡೆದು ಕಾನೂನು ಕ್ರಮ ಜರುಗಿಸಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'2018 ರಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಪರೀಕ್ಷೆಯಲ್ಲಿ ನಡೆದಿದ್ದ ಅಕ್ರಮದಲ್ಲಿ ಇದೇ ನಾಲ್ವರು ಆರೋಪಿಗಳು ಭಾಗಿಯಾಗಿದ್ದರು. ಅದೇ ಪ್ರಕರಣದಲ್ಲಿ ನಾಲ್ವರನ್ನೂ ಬಂಧಿಸಲಾಗಿತ್ತು. ಇದೀಗ, ಸಿಎಆರ್ ಹಾಗೂ ಡಿಎಆರ್ ಪರೀಕ್ಷೆಯಲ್ಲೂ ಪುನಃ ಅಕ್ರಮ ಎಸಗಬಹುದೆಂಬ ಅನುಮಾನ ಹೆಚ್ಚಿತ್ತು. ಇದೇ ಕಾರಣಕ್ಕೆ ವಿಶೇಷ ಕಾರ್ಯಾಚರಣೆ ನಡೆಸಿ ನಾಲ್ವರನ್ನು ವಶಕ್ಕೆ ಪಡೆಯಲಾಯಿತು' ಎಂದು ತಿಳಿಸಿವೆ.

'ರಾಜ್ಯದಾದ್ಯಂತ ಪರೀಕ್ಷೆ ಸುಗಮವಾಗಿ ನಡೆದಿದೆ. ಅಕ್ರಮ ನಡೆದಿರುವ ಬಗ್ಗೆ ಸದ್ಯಕ್ಕೆ ಯಾವುದೇ ದೂರುಗಳು ಕೇಳಿಬಂದಿಲ್ಲ' ಎಂದು ಹೇಳಿವೆ.

ಪರೀಕ್ಷೆ ಆರಂಭಕ್ಕೂ ಮುನ್ನ ವಶಕ್ಕೆ: 'ಹೈದರಾಬಾದ್ ಕರ್ನಾಟಕದ ಸಶಸ್ತ್ರ ಮೀಸಲು ಪೊಲೀಸ್ ಪಡೆಯ (ಸಿಎಆರ್/ಡಿಎಆರ್) ಕಾನ್‌ಸ್ಟೆಬಲ್ ಹುದ್ದೆಗಾಗಿ ರಾಜ್ಯದಾದ್ಯಂತ ಲಿಖಿತ ಪರೀಕ್ಷೆ ಇತ್ತು. ಆರೋಪಿಗಳು, ಕೆಲ ಅಭ್ಯರ್ಥಿಗಳಿಂದ ಹಣ ಪಡೆದು ಒಂದೆಡೆ ಸೇರಿಸಿ ಪರೀಕ್ಷೆ ಬರೆಸಬಹುದೆಂಬ ಅನುಮಾನವಿತ್ತು' ಎಂದು ಕಮಿಷನರ್ ಬಿ. ದಯಾನಂದ್ 'ಪ್ರಜಾವಾಣಿ'ಗೆ ತಿಳಿಸಿದರು.

'ಪರೀಕ್ಷೆ ಆರಂಭಕ್ಕೂ ಮುನ್ನವೇ ಸಿಸಿಬಿ ಪೊಲೀಸರ ವಿಶೇಷ ತಂಡ, ನಾಲ್ವರನ್ನೂ ವಶಕ್ಕೆ ಪಡೆದಿದೆ. ಎಲ್ಲರನ್ನೂ ಬೆಂಗಳೂರಿಗೆ ಕರೆತಂದು ಪರೀಕ್ಷೆ ಮುಗಿಯುವವರೆಗೂ ಸುಪ-ರ್ದಿಯಲ್ಲಿಟ್ಟುಕೊಂಡಿತ್ತು. ನಂತರ, ಮುಂಜಾಗ್ರತಾ ಕ್ರಮದ ಪ್ರಕರಣ ದಾಖಲಿಸಿ ಕಾನೂನು ಕ್ರಮ ಜರುಗಿಸಿದೆ' ಎಂದು ಹೇಳಿದರು.

ಕುಂದು ಕೊರತೆ

ಜನದನಿ

ನಿಮ್ಮ ಅಹವಾಲುಗಳನ್ನು ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು

'ರಸ್ತೆ ದುರಸ್ತಿಗೊಳಿಸಿ'

ವಿದ್ಯಮಾನ್ಯನಗರ ಪಶ್ಚಿಮ ವಿಭಾಗದ ಹಂದರಹಳ್ಳಿ ಮುಖ್ಯರಸ್ತೆಯ ಅಭಿವೃದ್ಧಿ ಕಾಮಗಾರಿ ಚುನಾವಣೆ ಸಂದರ್ಭದಲ್ಲಿ ಕೈಗೆತ್ತಿಕೊಳ್ಳಲಾಗಿತ್ತು. ಚುನಾವಣೆ ಮುಗಿದು ಮೂರು ತಿಂಗಳಾದರೂ ಕಾಮಗಾರಿ ಪೂರ್ಣಗೊಂಡಿಲ್ಲ. ರಸ್ತೆಗೆ ಜಲ್ಲಿಕಲ್ಲು ಹಾಕಿ ಹಾಗೆಯೇ ಬಿಡಲಾಗಿದೆ. ಇದರಿಂದ, ವಾಹನ ಸವಾರರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮಹಿಳೆಯರು, ಮಕ್ಕಳು ಮತ್ತು ವೃದ್ಧರು ಈ ರಸ್ತೆಯಲ್ಲಿ ಓಡಾಡುವುದೇ ಕಷ್ಟವಾಗಿದೆ. ಈ ಬಗ್ಗೆ ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ರಸ್ತೆ ಕಾಮಗಾರಿ ಪೂರ್ಣಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಟಿ.ಕೆ. ವಿನಯ್, ವಿದ್ಯಮಾನ್ಯನಗರದ ನಿವಾಸಿ



ಕಟ್ಟಡ ತ್ಯಾಜ್ಯ ತೆರವುಗೊಳಿಸಿ

ಎಸ್‌ಎಂವಿ ನಗರದ 2ನೇ ಬ್ಲಾಕ್‌ನ ಮುಖ್ಯರಸ್ತೆಯಲ್ಲಿ ಪ್ರತಿನಿತ್ಯ ಕಟ್ಟಡ ತ್ಯಾಜ್ಯ ತಂದು ಹಾಕಲಾಗುತ್ತಿದೆ. ರಾತ್ರಿ 11 ಗಂಟೆಯ ನಂತರ ಈ ಕಸವನ್ನು ರಸ್ತೆಯ ಮಧ್ಯದಲ್ಲಿ ಎಸೆದು ಹೋಗುತ್ತಿದ್ದಾರೆ. ದೊಡ್ಡಬಸ್ತಿ ವೃತ್ತದ ಹತ್ತಿರುವ ಬಿಬಿಎಂಪಿಗೆ ಸೇರಿದ ಕಟ್ಟಡದಲ್ಲಿ ಸಿಸಿಟಿವಿ ಕ್ಯಾಮೆರಾ ಇದ್ದು, ಅದರಲ್ಲಿ ಕಸ ಹಾಕಿ ಹೋದವರು ಯಾರು ಎಂಬುದನ್ನು ಪರಿಶೀಲಿಸಿ ಕ್ರಮಕೈಗೊಳ್ಳಬೇಕು. ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಈ ರಸ್ತೆಯನ್ನು ದುರಸ್ತಿಗೊಳಿಸಿ ಡಾಂಬರು ಹಾಕಲಾಗಿದೆ. ಕಸ ಎಸೆಯುವವರ ವಿರುದ್ಧ ಕ್ರಮಕೈಗೊಳ್ಳುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ.

ಶಿವಪುತ್ರಪ್ಪ, ಎಸ್‌ಎಂವಿ ನಗರ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ

'ಬೀದಿ ನಾಯಿಗಳ ಹಾವಳಿ ನಿಯಂತ್ರಿಸಿ'

ಬಿಬಿಎಂಪಿ ವ್ಯಾಪ್ತಿಯ ಕೋಣನಕುಂಟೆ ಭಾಗದ ಎಸ್‌ಬಿಎಂ ಕಾಲೊನಿಯ ವಾರ್ಡ್ ನಂಬರ್ 195ರಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದೆ. ಮಕ್ಕಳು ಶಾಲೆಗೆ ಹೋಗುವ ಸಂದರ್ಭದಲ್ಲಿ ದಾಳಿ ಮಾಡುತ್ತಿವೆ. ರಾತ್ರಿ ಸಮಯದಲ್ಲಿ ಭಯದಲ್ಲಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ನಾಯಿಗಳ ಹಾವಳಿಯಿಂದ ವಾಹನ ಸವಾರರು ಸಂಚರಿಸುವುದು ಸಹ ಕಷ್ಟವಾಗುತ್ತಿದೆ. ಬೈಕ್‌ಗಳ ಹಿಂದೆ ಈ ನಾಯಿಗಳು ಬೆನ್ನು ಹತ್ತುತ್ತಿದ್ದು, ಅಪಘಾತಗಳು ಸಂಭವಿಸುತ್ತಿವೆ. ಜತೆಗೆ, ರಾತ್ರಿ ಸಮಯದಲ್ಲಿ ನಾಯಿಗಳು ಬೊಗಳಲು ಶುರು ಮಾಡಿ ನಿದ್ದೆ ಹಾಳು ಮಾಡುತ್ತಿವೆ. ಆದ್ದರಿಂದ ಇವುಗಳ ಹಾವಳಿ ತಪ್ಪಿಸಲು ಬಿಬಿಎಂಪಿ ಕ್ರಮ ಕೈಗೊಳ್ಳಬೇಕು. ಈ ಬಗ್ಗೆ 'ಸಹಾಯ' ಆ್ಯಪ್ ಮೂಲಕ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ.

ಲಿಕಿತ್ ಆರ್., ಸ್ಥಳೀಯ ನಿವಾಸಿ

'ಉದ್ಯಾನ ದುರಸ್ತಿಗೊಳಿಸಿ'

ಕನಕಪುರ ಮುಖ್ಯರಸ್ತೆಯ ಬನಶಂಕರಿ 6ನೇ ಹಂತದ 4ನೇ ಟಿ ಬ್ಲಾಕ್‌ನಲ್ಲಿರುವ ಬಿಡಿಎ ಲೇಔಟ್‌ನ ಕಿರು ಉದ್ಯಾನ ದುರಸ್ತಿಗೊಳಿಸಬೇಕು. ಈ ಬಡಾವಣೆಯಲ್ಲಿ ಎರಡು ದಶಕಗಳ ಹಿಂದೆಯೇ ಇದನ್ನು ನಿರ್ಮಿಸಲಾಗಿದ್ದು, ಮೂಲಸೌಕರ್ಯ ಕೊರತೆ ಎದುರಿಸುತ್ತಿದೆ. ಜತೆಗೆ, ಉದ್ಯಾನದಲ್ಲಿ ಒಂದು ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಬೇಕು. ಇಲ್ಲಿ ಇದುವರೆಗೂ ಕಾವೇರಿ ನೀರಿನ ಸಂಪರ್ಕ ಬಂದಿಲ್ಲ. ಆದ್ದರಿಂದ, ಶುದ್ಧ ಕುಡಿಯುವ ನೀರು ತರಲು 1 ಕಿ.ಮೀ ದೂರ ಹೋಗಬೇಕಾದ ಪರಿಸ್ಥಿತಿ ಇದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸಮಸ್ಯೆಯನ್ನು ಬಗೆಹರಿಸಬೇಕು.

ರಾ. ಜಯಸಿಂಹ, ಸ್ಥಳೀಯ ನಿವಾಸಿ

ಪಾದಚಾರಿ ಮಾರ್ಗದಲ್ಲಿ ತ್ಯಾಜ್ಯ ನೀರು



ಶಾಂತಿನಗರದ ಬಸ್ ನಿಲ್ದಾಣದಿಂದ ಹೊಂಬೆಗೌಡ ಗಾರ್ಡನ್‌ಗೆ ಸಂಪರ್ಕ ಕಲ್ಪಿಸುವ ಪಾದಚಾರಿ ಮಾರ್ಗದಲ್ಲಿ ಸಂಪೂರ್ಣ ಹದಗೆಟ್ಟಿದೆ. ಮಳೆ ಬಂದರೆ ಪಾದಚಾರಿ ಮಾರ್ಗದಲ್ಲಿ ನೀರು ನಿಲ್ಲುತ್ತಿದೆ. ಈ ಭಾಗದ ಚರಂಡಿಗಳು ತ್ಯಾಜ್ಯ ನೀರಿನಿಂದ ತುಂಬಿ ಹೋಗಿದ್ದು, ಜತೆಗೆ ರಸ್ತೆಯ ಮೇಲೆಯೇ ನೀರು ನಿಲ್ಲುತ್ತದೆ. ಆದ್ದರಿಂದ, ಬಿಬಿಎಂಪಿ ಅಧಿಕಾರಿಗಳು ಈ ಮಾರ್ಗವನ್ನು ದುರಸ್ತಿಗೊಳಿಸಿ ನಗರದ ಸೌಂದರ್ಯವನ್ನು ಕಾಪಾಡಬೇಕು.

ಪೂಜಾ ಎಸ್. ಕಲಬುರಗಿ

'ರಸ್ತೆ ಅಭಿವೃದ್ಧಿಗೊಳಿಸಿ'

ಮಹದೇವಪುರ ವಿಧಾನಸಭೆ ಕ್ಷೇತ್ರದ ಸದಾಮಂಗಲದಿಂದ ಕೃಷ್ಣಾ ಫಾರ್ಮ್‌ಗೆ ಸಂಪರ್ಕಿಸುವ ರಸ್ತೆ ಕಾಮಗಾರಿ ಚುನಾವಣೆಗೂ ಮುನ್ನವೇ ಆರಂಭಿಸಲಾಗಿತ್ತು. ಆದರೆ, ಇದುವರೆಗೂ ಪೂರ್ಣಗೊಂಡಿಲ್ಲ. ಒಳಚರಂಡಿ ಮತ್ತು ನೈರ್ಮಲ್ಯ ಕಾಮಗಾರಿಯನ್ನು ಅವೈಜ್ಞಾನಿಕವಾಗಿ ಮಾಡಲಾಗಿದೆ. ಈ ರಸ್ತೆಯಲ್ಲಿ ಗುಂಡಿಗಳು ಉದ್ಭವಿಸಿದ್ದು, ಅಪಘಾತಗಳು ಸಂಭವಿಸುತ್ತಿವೆ. ಮಳೆ ಬಂದರೆ ರಸ್ತೆ ಕೆಸರು ಗದ್ದೆಯಾಗುತ್ತದೆ. ಆದ್ದರಿಂದ, ಬಿಬಿಎಂಪಿ ಅಧಿಕಾರಿಗಳು ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಸಾಗರ, ಸ್ಥಳೀಯ ನಿವಾಸಿ

ವರದಿ ಪರಿಣಾಮ

ಎಂ.ಎಸ್.ಆರ್ ನಗರದ 2ನೇ ಕ್ರಾಸ್‌ನ ರಸ್ತೆಯಲ್ಲಿರುವ ಮ್ಯಾನ್‌ಹೋಲ್‌ಗೆ ಹಾಕಿದ್ದ ಒಡೆದಿರುವ ಮುಚ್ಚಳವನ್ನು ಸರಿಪಡಿಸಲಾಗಿದೆ. 'ಪ್ರಜಾವಾಣಿ' ಕುಂದು ಕೊರತೆ ವಿಭಾಗದಲ್ಲಿ ಸೆಪ್ಟಂಬರ್ 3ರಂದು 'ಮ್ಯಾನ್‌ಹೋಲ್ ಮುಚ್ಚಳ ಬದಲಿಸಿ' ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ, ಎಚ್ಚೆತ್ತ ಜಲಮಂಡಳಿ ಅಧಿಕಾರಿಗಳು ಮುಚ್ಚಳವನ್ನು ಬದಲಿಸಿದ್ದಾರೆ.

'ರಸ್ತೆ ಡಾಂಬರು ಹಾಕಿ'

ಜಯನಗರ 4ನೇ ಟಿ ಬ್ಲಾಕ್‌ನ ಶಾಲಿನಿ ಮೈದಾನದ 11ನೇ ಮುಖ್ಯರಸ್ತೆಯ ಒಳಚರಂಡಿ ಕಾಮಗಾರಿ ಮುಗಿದು ತಿಂಗಳು ಕಳೆದಿದೆ. ಆದರೆ, ಇದುವರೆಗೂ ಈ ರಸ್ತೆಗೆ ಡಾಂಬರ ಹಾಕಿಲ್ಲ. ಮಳೆ ಬಂದರೆ ರಸ್ತೆ ಮೇಲೆ ನೀರು ನಿಲ್ಲುತ್ತದೆ. ಜಲಮಂಡಳಿ ಸಿಬ್ಬಂದಿ ರಸ್ತೆ ಅಗೆದರೆ, ಅದನ್ನು ಮುಚ್ಚುವ ಗೋಜಿಗೆ ಹೋಗುವುದಿಲ್ಲ. ಇದರಿಂದ, ವಾಹನ ಸವಾರರು, ಮತ್ತು ಪಾದಚಾರಿಗಳು ಸಂಚಾರಕ್ಕೆ ಸಮಸ್ಯೆಯಾಗಿದೆ.

ದೀಪಕ್ ಶೇಟ್ ಶಿರಾಲಿ, ಸ್ಥಳೀಯ ನಿವಾಸಿ



ಕಟ್ಟಿಕೊಂಡಿರುವ ಚರಂಡಿ ನೀರು

ಬೇಗೂರು ಮೈಕೊ ಬಡಾವಣೆಯ 13ನೇ ಮುಖ್ಯರಸ್ತೆಯ ಗುರುಕುಲ ಶಾಲೆ ಹತ್ತಿರದ ಚರಂಡಿ ನೀರು ಕಟ್ಟಿಕೊಂಡಿದೆ. ಇದರಿಂದ, ಈ ಪ್ರದೇಶವೆಲ್ಲ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳು ಮತ್ತು ನೊಣಗಳು ಹೆಚ್ಚಾಗಿದೆ. ಜತೆಗೆ ರೋಗಗಳು ಹರಡುವ ಭೀತಿ ಶುರುವಾಗಿದೆ. ಚರಂಡಿಯಲ್ಲಿ ಕಟ್ಟಿಕೊಂಡಿರುವ ತ್ಯಾಜ್ಯ ನೀರನ್ನು ಸರಾಗವಾಗಿ ಹರಿದು ಹೋಗುವಂತೆ ಬಿಬಿಎಂಪಿ ಕೂಡಲೇ ಕ್ರಮ ಕೈಗೊಳ್ಳಬೇಕು. ನಗರದ ಸೌಂದರ್ಯ ಹಾಗೂ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ಭಾಸ್ಕರ್, ಸ್ಥಳೀಯ ನಿವಾಸಿ

ಸಮಾವೇಶದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸವಾಲು

ಸಿದ್ದರಾಮಯ್ಯ ಬಿಜೆಪಿ ಬಾಗಿಲು ಬಡಿದಿರಲಿಲ್ಲವೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೆಡಿಎಸ್ ಪಕ್ಷವನ್ನು ಬಿಜೆಪಿಯ 'ಬಿ ಟೀಂ' ಎಂದು ಟೀಕಿಸುವ ಮುಖ್ಯಮಂತ್ರಿ ಸಿದ್ದರಾಮಯ್ಯ ನಮಗಿಂತ ಮೊದಲೇ ಬಿಜೆಪಿಯ ಬಾಗಿಲು ಬಡಿದಿರಲಿಲ್ಲವೆ? ಈ ಬಗ್ಗೆ ಬಾಯಿ ಬಿಡಲಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸವಾಲು ಹಾಕಿದರು.

ನಗರದ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ಬಿಜೆಪಿ ಸೇರುವುದಕ್ಕಾಗಿ ಆ ಪಕ್ಷದ ನಾಯಕ ಎಲ್.ಕೆ. ಅಡ್ವಾಣಿ ಅವರ ಮನೆಗೆ ಹೋಗಿದ್ದ ಬಗ್ಗೆ ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ. ಯಾರನ್ನು ಕರೆದುಕೊಂಡು ಬಿಜೆಪಿ ನಾಯಕರ ಮನೆ ಬಾಗಿಲಿಗೆ ಹೋಗಿದ್ದರು ಎಂಬುದನ್ನು ಹೇಳಲಿ' ಎಂದರು.

'ನಮ್ಮ ನೈತಿಕತೆ ಬಗ್ಗೆ ಮಾತನಾಡುತ್ತೀರಿ. ನಮ್ಮ ಸಿದ್ಧಾಂತದ ಬಗ್ಗೆ ಪ್ರಶ್ನಿಸುತ್ತೀರಿ. ಮಲ್ಲಿಕಾರ್ಜುನ ಖರ್ಗೆ ಅವರು ಲೋಕಸಭಾ ಚುನಾವಣೆಯಲ್ಲಿ ಗೆದ್ದು, ಸಂಸತ್ತಿಗೆ ಹೋಗದಿದ್ದರೆ ನೀವು ಬಿಜೆಪಿ ಸೇರುತ್ತಿರಲಿಲ್ಲವೆ? ವಿರೋಧ ಪಕ್ಷದ ನಾಯಕನ ಸ್ಥಾನ ನೀಡಲಿಲ್ಲ ಎನ್ನುವ ಒಂದೇ ಕಾರಣಕ್ಕೆ ಬಿಜೆಪಿ ಸೇರಲು ನೀವು ಮುಂದಾಗಿದ್ದು ಗೊತ್ತಿದೆ. ಖರ್ಗೆ ಅವರ ಗೆಲುವಿನಲ್ಲಿ ಜೆಡಿಎಸ್ ಪಾತ್ರವೂ ಇತ್ತು. ಇದರಿಂದಾಗಿ ನಿಮಗೆ ವಿರೋಧ ಪಕ್ಷದ ನಾಯಕನ ಸ್ಥಾನ ದೊರಕಿತು' ಎಂದು ಕುಟುಕಿದರು.

'ನಮ್ಮನ್ನು ಬಿಜೆಪಿಯ 'ಬಿ ಟೀಂ' ಎಂದು ಅಣಕಿಸುತ್ತೀರಿ. ನಾವು ಕನ್ನಡಿಗರ 'ಎ ಟೀಂ', 'ಬಿ ಟೀಂ' ಎಲ್ಲವೂ ಹೌದು' ಎಂದರು.

'ಹಣಕಾಸು ಸಚಿವರಾಗಲು ಹೊರಟಿದ್ದರು': ಜೆಡಿಎಸ್ ರಾಜ್ಯ ಪ್ರಮುಖರ ಸಮಿತಿ (ಕೋರ್ ಕಮಿಟಿ) ಅಧ್ಯಕ್ಷ ಜಿ.ಟಿ. ದೇವೇಗೌಡ ಮಾತನಾಡಿ, 'ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಕಾಂಗ್ರೆಸ್‌ನಲ್ಲಿ ವಿರೋಧ ಪಕ್ಷದ ಸ್ಥಾನ ದೊರಕಿಲ್ಲ ಎಂದು ಮುನಿಸಿಕೊಂಡಿದ್ದ ಸಿದ್ದರಾಮಯ್ಯ, ಬಿಜೆಪಿ ಸೇರಿ ಹಣಕಾಸು ಸಚಿವರಾಗಲು ಹೊರಟಿದ್ದರು' ಎಂದರು.

'ಕಾಗಿನೆಲೆ ಕನಕ ಗುರುಪೀಠದ ಸಮಾರಂಭದಲ್ಲಿ ಯಡಿಯೂರಪ್ಪ ಮತ್ತು ಸಿದ್ದರಾಮಯ್ಯ ಒಟ್ಟಾಗಿದ್ದರು. ಅಲ್ಲಿಂದ ನೇರವಾಗಿ ಹೆಲಿಕಾಪ್ಟರ್‌ನಲ್ಲಿ ಮೈಸೂರಿನ ಸುತ್ತೂರು ಮಠಕ್ಕೆ ಬಂದಿದ್ದರು. ಅಲ್ಲಿ ಮಾತುಕತೆ ನಡೆದಿತ್ತು. ಹಣಕಾಸು ಸಚಿವ ಸ್ಥಾನ ಕೊಟ್ಟರೆ ಬಿಜೆಪಿ ಸೇರುವುದಾಗಿ ಸಿದ್ದರಾಮಯ್ಯ ಒಪ್ಪಿಕೊಂಡಿದ್ದರು. ಜತೆಯಲ್ಲಿದ್ದ ಸಿ.ಎಂ. ಇಬ್ರಾಹಿಂ ಇದನ್ನು ಆಗ ಎಐಸಿಸಿ ಅಧ್ಯಕ್ಷೆಯಾಗಿದ್ದ ಸೋನಿಯಾ ಗಾಂಧಿಯವರಿಗೆ ತಿಳಿಸಿದ್ದರು. ಬಳಿಕ ಬದಲಾವಣೆ ಆಯಿತು' ಎಂದು ವೇದಿಕೆಯಲ್ಲಿದ್ದ ಇಬ್ರಾಹಿಂ ಅವರತ್ತ ಕೈ ತೋರಿದರು.

ಶಾಸಕಿ ಕರೆಮ್ಮ ಜಿ. ನಾಯಕ, ಮುಖಂಡರಾದ ವೈ.ಎಸ್.ವಿ. ದತ್ತ, ಬಂಡೆಪ್ಪ ಕಾಶೆಂಪುರ, ವೆಂಕಟರಾವ್ ನಾಡಗೌಡ ಮಾತನಾಡಿದರು. ಸಂಸದರು, ಶಾಸಕರು, ಪದಾಧಿಕಾರಿಗಳು ವೇದಿಕೆಯಲ್ಲಿದ್ದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಜೆಡಿಎಸ್ ಪದಾಧಿಕಾರಿಗಳು ಮತ್ತು ಕಾರ್ಯಕರ್ತರ ಸಮಾವೇಶದಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಮಾತನಾಡಿದರು. ಜಿ.ಟಿ. ದೇವೇಗೌಡ, ಎಚ್.ಡಿ. ಕುಮಾರಸ್ವಾಮಿ, ಸಿ.ಎಂ. ಇಬ್ರಾಹಿಂ, ಬಂಡೆಪ್ಪ ಕಾಶೆಂಪುರ, ಎಚ್.ಡಿ.ರೇವಣ್ಣ ಮತ್ತಿತರ ನಾಯಕರು ಇದ್ದಾರೆ –ಪ್ರಜಾವಾಣಿ ಚಿತ್ರ

'₹ 2,000 ಕೋಟಿ ಲೂಟಿಗೆ ಸಂಚು'

'ಬೆಂಗಳೂರಿನ ರಿಯಲ್ ಎಸ್ಟೇಟ್ ಉದ್ಯಮಿಗಳಿಂದ ₹ 2,000 ಕೋಟಿ ಲೂಟಿ ಮಾಡಲು ಈ ಸರ್ಕಾರದ ಪ್ರಭಾವಿ ಒಬ್ಬರು ಸಂಚು ರೂಪಿಸಿದ್ದಾರೆ. ಇಂಡಿಯಾ ಕೂಟಕ್ಕಾಗಿ ಪ್ರತಿ ಚದರ ಅಡಿಗೆ ₹ 100ರ ದರ ನಿಗದಿಯೂ ಆಗಿದೆ' ಎಂದು ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

'ಪೆನ್ನು, ಪೇಪರ್ ಕೈಗೆ ಕೊಡಿ ರಾಜ್ಯವನ್ನು ಅಭಿವೃದ್ಧಿ ಮಾಡುತ್ತೇನೆ ಎಂದು ನನ್ನ ತಮ್ಮ (ಡಿ.ಕೆ. ಶಿವಕುಮಾರ್) ಹೇಳಿದ್ದರು. ಈಗ ರೈತರ ಜಮೀನು ಲಪಟಾಯಿಸಲು ಪೆನ್ನು, ಪೇಪರ್ ಪಡೆದುಕೊಂಡಿದ್ದಾರೆ' ಎಂದು ದೂರಿದರು.

ಭಾವುಕರಾದ ದೇವೇಗೌಡ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುರಿತು ಮಾತನಾಡುತ್ತಿದ್ದ ಒಮ್ಮೆ ಆಕ್ರೋಶಭರಿತರಾದ ಎಚ್.ಡಿ. ದೇವೇಗೌಡ, 'ಈ ಪಕ್ಷ ಮುಗಿಸ್ತೀರಾ' ಎಂದು ಏರು ಧ್ವನಿಯಲ್ಲಿ ಕೇಳಿದರು. 'ನಿಮ್ಮಲ್ಲಿ ಕೈಮುಗಿದು ಕೇಳುತ್ತೇನೆ. ಈ ಪಕ್ಷವನ್ನು ಉಳಿಸಿ' ಎಂದು ಕಾರ್ಯಕರ್ತರಲ್ಲಿ ಭಾವುಕರಾಗಿ ಮನವಿ ಮಾಡಿದರು.

'ನನ್ನ ಪ್ರಶ್ನಿಸಲು ಯೋಗ್ಯತೆ ಇದೆಯೆ?'

'ಯಾರು ಇವರು? ಎಲ್ಲಿದ್ದರು ಇವರು? ಇವರು ಕಾಂಗ್ರೆಸ್ಸಿಗರಾಗಿದ್ದು ಯಾವಾಗ? ನನ್ನ ತತ್ವ, ಸಿದ್ಧಾಂತದ ಬಗ್ಗೆ ಮಾತನಾಡುವ ಯೋಗ್ಯತೆ ಇದೆಯೆ' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

'ರಾಮಕೃಷ್ಣ ಹೆಗಡೆ ಸರ್ಕಾರಕ್ಕೆ ಬಿಜೆಪಿಯ 18 ಶಾಸಕರು ಬೆಂಬಲ ನೀಡಿದ್ದರು. ಅದೇ ಸರ್ಕಾರದಲ್ಲಿ ಸಿದ್ದರಾಮಯ್ಯ ಕನ್ನಡ ಕಾವಲು ಸಮಿತಿ ಅಧ್ಯಕ್ಷರಾಗಿದ್ದರು. ನಂತರದಲ್ಲಿ ಬಿಜೆಪಿ ಸೇರಲು ಅಡ್ವಾಣಿ ಮನೆ ಬಾಗಿಲಿಗೂ ಹೋಗಿದ್ದರು. ಈಗ ನಮ್ಮ ಬಗ್ಗೆ ಮಾತನಾಡಲು ಈ ಮಹಾನುಭಾವನಿಗೆ ಯಾವ ನೈತಿಕ ಹಕ್ಕಿದೆ' ಎಂದು ಕೇಳಿದರು.

ಕಾಂಗ್ರೆಸ್ ಪಕ್ಷಕ್ಕೆ ಯಾವ ಸಿದ್ಧಾಂತ ಇದೆ. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಅವರಿಗೆ ಯಾವ ರೀತಿ ತೊಂದರೆ ಕೊಡುತ್ತಿದ್ದಾರೆ? ಅದೇ ರೀತಿ ಇಲ್ಲಿಯೂ ಮಾಡುತ್ತಿದ್ದಾರೆ ಎಂದು ದೂರಿದರು.

'ತುಮಕೂರಿನಲ್ಲಿ ಸೋಲಿಸಿದರು': 'ಕಳೆದ ಲೋಕಸಭಾ ಚುನಾವಣೆಯಲ್ಲಿ ನಾನು ತುಮಕೂರು ಕ್ಷೇತ್ರದಲ್ಲಿ ಸ್ಪರ್ಧಿಸಲು ಕೇಳಿರಲಿಲ್ಲ. ಜಿ. ಪರಮೇಶ್ವರ ಮನವಿ ಮಾಡಿದರು. ಆದರೆ, ಸಿದ್ದರಾಮಯ್ಯ ಮತ್ತು ಕೆ.ಎನ್. ರಾಜಣ್ಣ ನನ್ನನ್ನು ಸೋಲಿಸಿದರು' ಎಂದು ದೇವೇಗೌಡ ಆರೋಪಿಸಿದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಮಾತನಾಡಿ, 'ಕುಮಾರಸ್ವಾಮಿ ಅವರು ಬಿಜೆಪಿ ಜತೆ ಸೇರಿ ಸರ್ಕಾರ ರಚಿಸುವಾಗ ಜೆಡಿಎಸ್ ಶಾಸಕರನ್ನು ಕೂರಿಸಿಕೊಂಡು ಬಸ್ ಚಲಾಯಿಸಿದವರು ಯಾರು? ಈಗ ಅವರು ಎಲ್ಲಿದ್ದಾರೆ' ಎಂದು ಕೇಳಿದರು.

ಸಮಾವೇಶಕ್ಕೆ ಶಾಸಕ ಶರಣಗೌಡ ಕಂದಕೂರು ಗೈರು

ಯಾದಗಿರಿ: ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಜೆಡಿಎಸ್ ಸಮಾವೇಶಕ್ಕೆ ಗುರುಮಠಕಲ್‌ನ ಜೆಡಿಎಸ್ ಶಾಸಕ ಶರಣಗೌಡ ಕಂದಕೂರು ಗೈರಾಗುವ ಮೂಲಕ ಬಿಜೆಪಿ–ಜೆಡಿಎಸ್ ಮೈತ್ರಿಗೆ ಅಸಮಾಧಾನ ಹೊರಹಾಕಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಸಮಾವೇಶಕ್ಕೆ ಆಹ್ವಾನ ಬಂದಿದೆ. ಕುಟುಂಬದ ಖಾಸಗಿ ಕಾರ್ಯಕ್ರಮ ಕಾರಣದಿಂದ ಸಭೆಗೆ ಹೋಗಿಲ್ಲ. ಉದ್ದೇಶಪೂರ್ವಕವಾಗಿ ಸಭೆಗೆ ಗೈರಾಗುವ ಸನ್ನಿವೇಶ ಬಂದಿಲ್ಲ. ಇಂಥ ಸನ್ನಿವೇಶ ಬರುವುದಕ್ಕೂ ಅವಕಾಶವಿಲ್ಲ. ಅಂತರ ಕಾಯ್ದುಕೊಳ್ಳಲು ಯಾವುದೇ ಅವಕಾಶವಿಲ್ಲ. ಸಭೆಗೆ ಆಹ್ವಾನ ಇದ್ದೇ ಇದೆ. ನಾನು ಒಬ್ಬ ಕುಮಾರಸ್ವಾಮಿ ಕುಟುಂಬದ ಸದಸ್ಯ' ಎಂದು ಹೇಳಿದರು.

'ನನ್ನ ಅಭಿಪ್ರಾಯ ತಿಳಿಸಿದ್ದೀನಿ. ಈಗಾಗಲೇ ಸಾಕಷ್ಟು ಜನ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮೈತ್ರಿಯಾದರೆ ಪಕ್ಷ ಇದಕ್ಕಿಂತ ಹೀನಾಯ ಪರಿಸ್ಥಿತಿಗೆ ಹೋಗುತ್ತದೆ. ಮುಂದೆ ಏನಾಗುತ್ತೋ ಗೊತ್ತಿಲ್ಲ' ಎಂದರು. 'ಲೋಕಸಭಾ ಚುನಾವಣೆಗೆ ಬಿಜೆಪಿಯವರು ನಾಲ್ಕು ಸೀಟು ಕೊಡುತ್ತಾರೆ. ಮೂರ್ನಾಲ್ಕು ಸೀಟು ಗೆಲ್ಲಬಹುದು. ಒಂದು ವೇಳೆ ಸೋತರೆ ಜೆಡಿಎಸ್ ಪಕ್ಷದ ಮುಂದಿನ ಗತಿ ಏನು' ಎಂದು ವರಿಷ್ಠರಿಗೆ ಕಂದಕೂರು ಪ್ರಶ್ನಿಸಿದರು.

'ಜೆಡಿಎಸ್ ಜತೆಗಿನ ಮೈತ್ರಿ ಸುದೀರ್ಘ ಚರ್ಚೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಜತೆ ಬಿಜೆಪಿ ಮೈತ್ರಿ ಮಾಡಿಕೊಳ್ಳುವ ಸಂಬಂಧ ಎಲ್ಲ ಹಂತಗಳಲ್ಲೂ ಸುದೀರ್ಘ ಚರ್ಚೆ ನಡೆಯಬೇಕಿದೆ' ಎಂದು ಶಾಸಕ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ಮಾಧ್ಯಮದವರೊಂದಿಗೆ ಭಾನುವಾರ ಮಾತನಾಡಿದ ಅವರು, 'ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ನಾಲ್ಕು ತಿಂಗಳ ಆಡಳಿತ ನೋಡಿದರೆ ಎಲ್ಲರೂ ಸೇರಿ ವಿರೋಧಿಸುವ ಅವಶ್ಯಕತೆ ಇದೆ. ಆದರೆ, ಜೆಡಿಎಸ್ ಜತೆ ಮೈತ್ರಿ ಮಾಡಿಕೊಳ್ಳುವ ಸಂಬಂಧ ಇದುವರೆಗೆ ಸುದೀರ್ಘ ಚರ್ಚೆ ಆಗಿಲ್ಲ. ಮುಂಬರುವ ದಿನಗಳಲ್ಲಿ ಆಗಬಹುದು' ಎಂದು ಸ್ಪಷ್ಟಪಡಿಸಿದರು.

'ಎಚ್.ಡಿ. ಕುಮಾರಸ್ವಾಮಿ ಅವರ ಹೇಳಿಕೆಯನ್ನು ಗಮನಿಸಿದರೆ ಮಾತುಕತೆ ಪ್ರಾಥಮಿಕ ಹಂತದಲ್ಲಿದೆ ಎಂಬುದು ಅರ್ಥವಾಗುತ್ತದೆ' ಎಂದರು.

'ಸಿದ್ದರಾಮಯ್ಯನವರ ಹಿಂದಿನ ಸರ್ಕಾರ ಹಾಗೂ ಈಗಿನ ಆಡಳಿತ ನೋಡಿದರೆ ಬಹಳಷ್ಟು ವ್ಯತ್ಯಾಸ ಇದೆ. ಆಂತರಿಕವಾಗಿ ಬಹಳಷ್ಟು ನಾಯಕರಿಗೆ ಬೇಗುದಿ ಇದೆ. ಅದರಲ್ಲಿ ಒಂದು ಭಾಗ ಹರಿಪ್ರಸಾದ್. ವಿಧಾನ ಪರಿಷತ್ ಸದಸ್ಯರ ಹೇಳಿಕೆಗೆ ಪ್ರತಿಕ್ರಿಯಿಸಲು ಮುಖ್ಯಮಂತ್ರಿ ನಿರಾಕರಿಸುತ್ತಿರುವುದನ್ನು ಗಮನಿಸಿದರೆ ಹರಿಪ್ರಸಾದ್ ಪಕ್ಷದೊಳಗೆ ಪ್ರಬಲರಾಗಿದ್ದಾರೆ ಎಂಬುದು ಸಾಬೀತಾಗಿದೆ' ಎಂದು ಬೊಮ್ಮಾಯಿ ವ್ಯಾಖ್ಯಾನಿಸಿದರು.

'ಹಿಂದೆ ಸಿದ್ದರಾಮಯ್ಯ (2013–18) ಮುಕ್ತವಾಗಿ ಆಡಳಿತ ಮಾಡಿದ್ದಾರೆ. ಆದರೆ ಈಗ ಅವರಿಗೆ ಸ್ವಾತಂತ್ರ್ಯವಿಲ್ಲ. ಒತ್ತಡದಲ್ಲಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರ ರಚನೆಯಾಗಿ ಮೂರು ತಿಂಗಳು ಆಗುವುದರೊಳಗೆ ಅವರ ಶಾಸಕರೇ ತಿರುಗಿಬೀಳುತ್ತಿದ್ದಾರೆ' ಎಂದರು.

ಬೆಂಗಳೂರಿನಲ್ಲಿ ಭಾನುವಾರ ಮಹಿಳಾ ಕಟ್ಟಡ ನಿರ್ಮಾಣ ಕಾರ್ಮಿಕರ ಪ್ರಥಮ ರಾಜ್ಯಮಟ್ಟದ ಸಮಾವೇಶದಲ್ಲಿ (ಎಡದಿಂದ) ಫೆಡರೇಷನ್ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ಲಕ್ಷ್ಮಿ, ರಾಜ್ಯ ಅಧ್ಯಕ್ಷ ಬಾಲಕೃಷ್ಣ ಶೆಟ್ಟಿ, ವಿಮರ್ಶಕಿ ಎಂ.ಎಸ್.ಆಶಾದೇವಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಕಾರ್ಯದರ್ಶಿ ಡಿ. ಭಾರತಿ ಮತ್ತು ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್ ಇದ್ದಾರೆ –ಪ್ರಜಾವಾಣಿ ಚಿತ್ರ

ಕಾರ್ಮಿಕ ಮಂಡಳಿ ಸೌಲಭ್ಯ ಅನರ್ಹರ ಪಾಲು: ಭಾರತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾರ್ಮಿಕ ಮಂಡಳಿಯಲ್ಲಿ ದೊರೆಯುವ ಬಹುತೇಕ ಎಲ್ಲ ಸೌಲಭ್ಯಗಳು ಅನರ್ಹರ ಪಾಲಾಗುತ್ತಿವೆ' ಎಂದು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಾರ್ಯದರ್ಶಿ ಭಾರತಿ ಡಿ ಹೇಳಿದರು.

ನಗರದಲ್ಲಿ ಭಾನುವಾರ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಆಯೋಜಿಸಿದ್ದ 'ಮಹಿಳಾ ಕಟ್ಟಡ ನಿರ್ಮಾಣ ಕಾರ್ಮಿಕರ ಪ್ರಥಮ ರಾಜ್ಯಮಟ್ಟದ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರ ಉಚಿತ ಯೋಜನೆಗಳನ್ನು ಜಾರಿಗೊಳಿಸಿದೆ. ಮಂಡಳಿಯಲ್ಲಿ ಸಿಗುವ ಎಲ್ಲ ಸೌಲಭ್ಯಗಳ ಬಗ್ಗೆ ಹೆಚ್ಚು ಜಾಗೃತಿ ಮೂಡಿಸಬೇಕು. ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುವ ನೈಜ ಫಲಾನುಭವಿ ಗಳಿಗೆ ಈ ಸೌಲಭ್ಯಗಳು ಸಿಗುವಂತೆ ಮಾಡಲು ಎಲ್ಲರೂ ಇಲಾಖೆಯೊಂದಿಗೆ ಕೈಜೋಡಿಸಬೇಕು' ಎಂದು ಕರೆ ನೀಡಿದರು.

ವಿಮರ್ಶಕಿ ಎಂ.ಎಸ್. ಆಶಾದೇವಿ, 'ದೇಶದಲ್ಲಿ ಶೇ 85ರಷ್ಟು ಜನ ಅಸಂಘಟಿತ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರೆಲ್ಲರನ್ನೂ ಸಂಘಟಿತರನ್ನಾಗಿ ಮಾಡಬೇಕು. ಸಮಾಜದಲ್ಲಿರುವ ವೇತನ ಅಸಮಾನತೆಯನ್ನು ಹೋಗಲಾಡಿಸಲು ಕಾನೂನು ರೂಪಿಸುವಂತೆ ಹೋರಾಟ ಹಮ್ಮಿಕೊಳ್ಳಬೇಕು. ಮಹಿಳೆಯರು ನಿರ್ಣಯಗಳನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು ಬಿಟ್ಟುಕೊಡಬಾರದು' ಎಂದರು.

ಫೆಡರೇಷನ್ ಕಾರ್ಯಾಧ್ಯಕ್ಷ ಬಿ. ಉಮೇಶ್ ಇದ್ದರು.

ಹರಿಪ್ರಸಾದ್ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ



ನಂಜೇಗೌಡ

ಮಾಲೂರು (ಕೋಲಾರ): 'ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ' ಎಂದು ಮಾಲೂರು ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ವೈ. ನಂಜೇಗೌಡ ಆರೋಪ ಮಾಡಿದ್ದಾರೆ.

ಭಾನುವಾರ ತಾಲ್ಲೂಕಿನ ಮಾಸ್ತಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಹರಿಪ್ರಸಾದ್ ಪಕ್ಷದಲ್ಲಿ ಎಲ್ಲಾ ಸ್ಥಾನಮಾನ ಅನುಭವಿಸಿದ್ದಾರೆ. ಈಗ ತಮ್ಮನ್ನು ಮಂತ್ರಿ ಮಾಡಲಿಲ್ಲ ಎಂಬ ಕಾರಣಕ್ಕೆ ಪಕ್ಷದ ವಿರುದ್ಧ ಮಾತನಾಡುವುದು ಸರಿಯಲ್ಲ' ಎಂದು ಹರಿಹಾಯ್ದರು.

'ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ವಿರುದ್ಧ ಹರಿಪ್ರಸಾದ್ ಮಾತನಾಡಿರುವುದು ಬೇಸರ ತರಿಸಿದೆ. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರಷ್ಟು ದೊಡ್ಡ ನಾಯಕ ಹರಿಪ್ರಸಾದ್ ಅಲ್ಲ. ಇದನ್ನು ಅರ್ಥ ಮಾಡಿಕೊಳ್ಳಬೇಕು' ಎಂದು ನಂಜೇಗೌಡ ಸಲಹೆ ಮಾಡಿದರು.

'ಲೋಕಸಭೆ ಚುನಾವಣೆ ಸಮಯದಲ್ಲಿ ಪಕ್ಷದ ಹಿರಿಯ ನಾಯಕ ಈ ರೀತಿ ಮಾತನಾಡುವುದು ಸರಿ ಅಲ್ಲ. ಪಕ್ಷ ತಕ್ಷಣ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಏನೂ ಮಾತನಾಡಲ್ಲ: ಬಿ.ಕೆ ಹರಿಪ್ರಸಾದ್



ಹೊಸಪೇಟೆ (ವಿಜಯನಗರ): ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದ್ದ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರಿಗೆ 'ಏನೂ ಮಾತನಾಡದಂತೆ' ಪಕ್ಷದ ಹೈಕಮಾಂಡ್ ಸೂಚನೆ ನೀಡಿದೆ.

ಸಿ.ಎಂ ವಿರುದ್ಧ ಮಾತನಾಡಿರುವ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, 'ಏನೂ ಕೇಳಬೇಡಿ, ಏನೂ ಮಾತನಾಡಬಾರದೆಂದು ಮೇಲಿನವರು ಹೇಳಿದ್ದಾರಪ್ಪ..' ಎಂದರು.

'ಸಿದ್ದರಾಮಯ್ಯ ವಿರುದ್ಧ ಮಾತನಾಡುವ ನೈತಿಕ ಹಕ್ಕು ಇಲ್ಲ'

ಬೆಂಗಳೂರು: 'ರಾಜ್ಯದ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರನ್ನು ಪಕ್ಷದ ಹೈಕಮಾಂಡ್ ಆಯ್ಕೆ ಮಾಡಿದೆ. ಸಿದ್ದರಾಮಯ್ಯ ವಿರುದ್ಧ ಮಾತನಾಡಲು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರಿಗೆ ಯಾವುದೇ ನೈತಿಕ ಹಕ್ಕು ಇಲ್ಲ.
ಅವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಬೇಕು' ಎಂದು ಪಕ್ಷದ ವರಿಷ್ಠರನ್ನು ರಾಷ್ಟ್ರೀಯ ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷ ಎಲ್.ಆರ್. ಅನಂತ್ ಆಗ್ರಹಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಹರಿಪ್ರಸಾದ್ ಅವರ ದ್ವಂದ್ವ ನೀತಿ ಮತ್ತು ನಕಲಿ ಸಮಾಜವಾದಿ ಧೋರಣೆ ಖಂಡನೀಯ. ಕಾಂಗ್ರೆಸ್‌ನಲ್ಲಿ ಅವರು ಎಲ್ಲ ರಾಜಕೀಯ ಲಾಭಗಳನ್ನು ಪಡೆದಿದ್ದಾರೆ. ಆದರೆ, ಮುಖ್ಯಮಂತ್ರಿಯಾಗಿದ್ದ ಎಸ್. ಬಂಗಾರಪ್ಪ, ಎಂ. ವೀರಪ್ಪ ಮೊಯಿಲಿ ಅವರನ್ನೂ ಹರಿಪ್ರಸಾದ್ ವಿರೋಧಿಸಿದ್ದರು. ತಮ್ಮ 45 ವರ್ಷಗಳ ರಾಜಕೀಯ ಜೀವನದಲ್ಲಿ ಎಷ್ಟು ಹಿಂದುಳಿದ ವರ್ಗಗಳ ನಾಯಕರಿಗೆ ರಾಜಕೀಯವಾಗಿ ಅವರು ಸಹಾಯ ಮಾಡಿದ್ದಾರೆ ಎನ್ನುವುದನ್ನು ಪ್ರಾಮಾಣಿಕವಾಗಿ ಹೇಳಲಿ' ಎಂದೂ ಪ್ರಶ್ನಿಸಿದ್ದಾರೆ.

'ಹರಿಪ್ರಸಾದ್ ಅವರು ಒಂದೇ ಒಂದು ನೇರ ಚುನಾವಣೆಯಲ್ಲಿ ಗೆದ್ದಿಲ್ಲ. ಈಡಿಗ ಸಮುದಾಯ ಅವರನ್ನು ಮೊದಲಿನಿಂದಲೂ ನಾಯಕ ಎಂದು ಒಪ್ಪಿಕೊಂಡಿಲ್ಲ. ಸಚಿವ ಸಂಪುಟದಲ್ಲಿ ಸ್ಥಾನ ಸಿಗಲಿಲ್ಲ ಎಂಬ ಕಾರಣಕ್ಕೆ ಇದೀಗ ಅವರು ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ವಿಧಾನಪರಿಷತ್ ಸ್ಥಾನಕ್ಕೆ ಅವರು ರಾಜೀನಾಮೆ ನೀಡಿ ವಿಧಾನಸಭೆ ಅಥವಾ ಸಂಸತ್ತಿಗೆ ಸ್ಪರ್ಧಿಸಿ ಗೆಲ್ಲಲಿ' ಎಂದು ಸವಾಲು ಹಾಕಿದ ಅವರು, 'ಹರಿಪ್ರಸಾದ್ ಅವರ ಸದ್ಯದ ನಡವಳಿಕೆಯನ್ನು ಕೆಪಿಸಿಸಿ ಅಧ್ಯಕ್ಷರು ತಕ್ಷಣ ಹೈಕಮಾಂಡ್ ಗಮನಕ್ಕೆ ತಂದು ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದರು.

ತಮ್ಮ ಪಕ್ಷದ ನಾಯಕರ ವಿರುದ್ಧವೇ ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಪರೋಕ್ಷ ಹೇಳಿಕೆ ನೀಡಿದ್ದಾರೆ. ಇದು ಕಾಂಗ್ರೆಸ್‌ನಲ್ಲಿ ರಾಜಕೀಯ ಭೂಕಂಪನದ ಮುನ್ಸೂಚನೆ

ಸಿ.ಟಿ. ರವಿ, ಬಿಜೆಪಿ ನಾಯಕ

ಕಾಂಗ್ರೆಸ್‌ನಲ್ಲಿ ಗುಂಪುಗಾರಿಕೆ ಇದೆ. ಬಿ.ಕೆ. ಹರಿಪ್ರಸಾದ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಕಿಡಿ ಕಾರಿರುವುದೇ ಇದಕ್ಕೆ ಸಾಕ್ಷಿ

ಕೆ.ಎಸ್. ಈಶ್ವರಪ್ಪ, ಮಾಜಿ ಸಚಿವ

ಕೋಲಾರ ಸಂಸದ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಶ್ರೀನಿವಾಸಪುರ (ಕೋಲಾರ): ಅರಣ್ಯ ಇಲಾಖೆ ನಡೆಸಿದ ಒತ್ತುವರಿ ತೆರವು ಕಾರ್ಯಾಚರಣೆಗೆ ಅಡ್ಡಿಪಡಿಸಿದ ಆರೋಪದ ಮೇಲೆ ಕೋಲಾರ ಸಂಸದ ಎಸ್.ಮುನಿಸ್ವಾಮಿ ಸೇರಿದಂತೆ 25 ಮಂದಿ ವಿರುದ್ಧ ಭಾನುವಾರ ಎಫ್‌ಐಆರ್ ದಾಖಲಾಗಿದೆ.

ಈ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳು ಶ್ರೀನಿವಾಸಪುರ ಠಾಣೆಯಲ್ಲಿ ದೂರು ನೀಡಿದ್ದು, ಮುನಿಸ್ವಾಮಿ–ಎ1 ಆರೋಪಿಯಾಗಿದ್ದಾರೆ. 15 ಮಂದಿಯನ್ನು ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಪ್ರತ್ಯೇಕವಾಗಿ ಎರಡು ಪ್ರಕರಣ ದಾಖಲಾಗಿದೆ. ಜೆಸಿಬಿ ಜಖಂಗೊಳಿಸಿದ್ದಕ್ಕೆ ಜೆಸಿಬಿ ಮಾಲೀಕರು ಕೂಡ ದೂರು ನೀಡಿದ್ದು ಮೂರನೇ ಪ್ರಕರಣ ದಾಖಲಿಸಲಾಗಿದೆ.

ರಾಜ್ಯ ಸರ್ಕಾರಕ್ಕೆ ವಿವಿಧ ಮಠಾಧೀಶರ ಆಗ್ರಹ

'ಗೋಹತ್ಯೆ ನಿಷೇಧ ಕಾಯ್ದೆ ಹಿಂಪಡೆಯದಿರಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಹಿಂದಿನ ಸರ್ಕಾರವು ಜಾರಿಗೆ ತಂದಿದ್ದ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆ ಮತ್ತು ಸಂರಕ್ಷಣಾ ಅಧಿನಿಯಮ–2020 (ಗೋಹತ್ಯೆ ನಿಷೇಧ) ಹಾಗೂ ಮತಾಂತರ ನಿಷೇಧ ಕಾಯ್ದೆಗಳನ್ನು ಮುಂದುವರಿಸಬೇಕು. ಅವುಗಳನ್ನು ಹಿಂಪಡೆಯಬಾರದು. ಕಿರುತೆರೆ, ಒಟಿಟಿ, ಸಾಮಾಜಿಕ ಮಾಧ್ಯಮಕ್ಕೂ ಸೆನ್ಸಾರ್ ವ್ಯವಸ್ಥೆ ತರಬೇಕು' ಎಂದು ಭಾನುವಾರ ಇಲ್ಲಿ ನಡೆದ ಧರ್ಮಸಭೆಯು ರಾಜ್ಯ ಸರ್ಕಾರವನ್ನು ಆಗ್ರಹಿಸಿತು.

ಶ್ರೀಕೃಷ್ಣಧಾಮ ಚಾತುರ್ಮಾಸ್ಯ ಸಮಿತಿ, ವಿಶ್ವ ಹಿಂದೂ ಪರಿಷತ್ ವತಿಯಿಂದ ನಗರದ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಭಾನುವಾರ ಆಯೋಜಿಸಿದ್ದ ಸಭೆಯಲ್ಲಿ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ನೇತೃತ್ವದಲ್ಲಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಅಧ್ಯಕ್ಷತೆ ವಹಿಸಿದ್ದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಮಾತನಾಡಿ, 'ಧರ್ಮ ವಿರೋಧಿ ಹೇಳಿಕೆಗಳನ್ನು ಅಷ್ಟೇ ಪ್ರಬಲವಾಗಿ ಪ್ರತಿಭಟಿಸುವ ಅಗತ್ಯವಿದೆ. ವ್ಯವಸ್ಥೆಯಲ್ಲಿನ ದೋಷಗಳನ್ನು ಸರಿಪಡಿಸುವ ಪ್ರಯತ್ನ ಆಗಬೇಕೇ ಹೊರತು ಧರ್ಮವನ್ನೇ ಕಿತ್ತು ಹೊರಹಾಕುತ್ತೇವೆ ಎನ್ನುವುದಲ್ಲ. ದೇಶದ ತುಂಬಾ ಸನಾತನ ಧರ್ಮೀಯರಿದ್ದಾರೆ' ಎಂದರು.

'ಮಣಿಪುರದಲ್ಲಿ ಎರಡು ಪಂಗಡಗಳ ನಡುವೆ ಕಿಡಿ ಹೊತ್ತಿಸಿದ್ದು, ಇನ್ನೂ ಆರಿಸಲಾಗಿಲ್ಲ. ಕಿಡಿ ಹೊತ್ತಿಸುವ ಕೆಲಸ ಹೆಚ್ಚಾದರೆ ದೇಶದಲ್ಲಿ ಅರಾಜಕತೆ ಹೆಚ್ಚಾಗುತ್ತದೆ. ಇಂತಹ ಪ್ರಯತ್ನಗಳನ್ನು ಮೂಲದಲ್ಲಿಯೇ ಚಿವುಟಿ ಹಾಕಬೇಕು' ಎಂದು ಹೇಳಿದರು.

ರಾವಣನ ಮನಸ್ಥಿತಿಯವರ ಬಹಿಷ್ಕರಿಸಿ: 'ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಕನಸು ನನಸಾಗುತ್ತಿದೆ. ಅದಕ್ಕಿಂತ ಮುಖ್ಯವಾಗಿ ರಾಮ ರಾಜ್ಯ ನಿರ್ಮಾಣ ಆಗಬೇಕು. ಪ್ರಜಾ ರಾಜ್ಯ ನಿರ್ಮಾಣ ಆಗಬೇಕಾದರೆ ಧರ್ಮಸೂತ್ರ ಅಳವಡಿಸಿಕೊಳ್ಳಬೇಕು. ರಾವಣನ ಮನಸ್ಥಿತಿಯವರನ್ನು ಬಹಿಷ್ಕರಿಸಬೇಕು' ಎಂದು ಸಲಹೆ ನೀಡಿದರು.

'ಮೈಸೂರಿನಲ್ಲಿ ಚಾಮುಂಡಿಯ ದಸರಾ ಉತ್ಸವದ ನಡುವೆ ಮಹಿಷಾಸುರನ ಉತ್ಸವಕ್ಕೂ ಕೆಲವರು ಮುಂದಾಗಿದ್ದಾರೆ. ಮುಂದೆ ಕಂಸ, ಜರಾಸಂಧರ ಉತ್ಸವಗಳು ಹೆಚ್ಚು ನಡೆಯಬಹುದು. ಶಕುನಿ, ದುಶ್ಯಾಸನರ ದಸರಾ ಸಹ ಬರಬಹುದು. ಈ ಎಲ್ಲದರ ವಿರುದ್ಧ ನಾವು ಎದ್ದು ನಿಲ್ಲಬೇಕಿದೆ' ಎಂದರು.

ಉದಯನಿಧಿ ಹೇಳಿಕೆ ಹಿಂದೆ ಟೂಲ್‌ಕಿಟ್: ದಕ್ಷಿಣ ಕನ್ನಡ ಜಿಲ್ಲೆಯ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿ ಮಾತನಾಡಿ, 'ಸನಾತನ ಧರ್ಮದ ಕುರಿತು ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಹೇಳಿಕೆ ಹಿಂದೆ ಯುರೋಪ್ ಟೂಲ್‌ಕಿಟ್ ಕೆಲಸ ಮಾಡುತ್ತಿದೆ. ಹಿಂದೂ ಧರ್ಮದ ಏಳಿಗೆ ಸಹಿಸಲಾಗದೇ ಸಂಚು ರೂಪಿಸಲಾಗಿದೆ' ಎಂದು ದೂರಿದರು.

'ಕೇವಲ ಉಚಿತಗಳ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬಂದವರು ಗೋಹತ್ಯೆ ನಿಷೇಧ ಮತ್ತು ಮತಾಂತರ ನಿಷೇಧ ಕಾಯ್ದೆ ಹಿಂಪಡೆಯುವ ಮಾತುಗಳನ್ನು ಆಡುತ್ತಿದ್ದಾರೆ. ಶ್ರೀಗಳು ಧ್ವನಿ ಎತ್ತಿದರೆ ಮಹದೇವ, ಪರಮೇಶ್ವರರೆಲ್ಲರೂ ಮುದುಡಿಕೊಳ್ಳಬೇಕಾಗುತ್ತದೆ' ಎಂದು ಎಚ್ಚರಿಸಿದರು.

ರಾಜ್ಯದ ವಿವಿಧ ಮಠಗಳ ಮಠಾಧೀಶರು, ವಿಶ್ವ ಹಿಂದು ಪರಿಷತ್ ಮುಖಂಡರು ಪಾಲ್ಗೊಂಡರು.

ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಭಾನುವಾರ ಆಯೋಜಿಸಿದ್ದ ಧರ್ಮಸಭೆಯನ್ನು ಉಡುಪಿಯ ಪೇಜಾವರ ಮಠಾಧೀಶ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಉದ್ಘಾಟಿಸಿದರು. ರಾಜಶೇಖರಾನಂದ ಶ್ರೀ, ಸ್ವಾಮಿ ಮುಕ್ತಿದಾನಂದ, ಗುರುಲಿಂಗ ಶ್ರೀ , ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ ಇದ್ದಾರೆ – ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಧರ್ಮಸಭೆಯಲ್ಲಿ ನಿರ್ಣಯ
- ಉಚಿತಗಳ ಬಗ್ಗೆಯೂ ಅಸಮಾಧಾನ

10 ಕೆ.ಜಿ. ಅಕ್ಕಿ ಪಡೆಯಲು ಜನರು ಬಿಕಾರಿ ಆಗಬಾರದು. ಉಚಿತ ಯೋಜನೆಗಳನ್ನು ಘೋಷಿಸುತ್ತಾ ಹೋದರೆ ಪಾಕಿಸ್ತಾನದಂತೆ ನಾವೂ ದಿವಾಳಿ ಆಗಬೇಕಾದೀತು

ರಾಜಶೇಖರಾನಂದ ಸ್ವಾಮೀಜಿ, ವಜ್ರದೇಹಿ ಮಠ, ದಕ್ಷಿಣ ಕನ್ನಡ

In the fond memories of our Founder Chairman
Sri. G Mallikarjunappa
Srishyla Educational Trust ®

GM UNIVERSITY
GM UNIVERSITY
(Established under the Karnataka State Act No. 19 of 2023)
DAVANAGERE

WE ARE NOW A UNIVERSITY

The best invites the best

Start your journey of becoming a successful professional and responsible citizen today! Make the choice that will help to shape your life through elevated scholarly exposure, pedagogy and learning at a University founded on the distinguished legacy of over 23 years of academic excellence of the GMIT & GMS Academy

Faculty of Engineering

B.Tech
Computer Science & Engg.
Information Science & Engg.
Computer Science (AIML)
Computer Science (Info Security)
Computer Science (Data Science)
Computer Science (Business System)
Computer Science (Cyber Security)
Computer Science (Cloud Computing)
Computer Science (IOT)
Electronics & Communications Engg.
Electrical & Electronics Engg.

Diploma
Computer Science & Engg.
Electronics and Communication Engg.
Mechanical Engg.

Faculty of Computer Application

UG Program
Bachelor of Computer Application (Data Science)

PG Program
Master of Computer Application (MCA)

Faculty of Commerce & Management
Master of Commerce (M.Com.)
Master of Business Administration (MBA)

Ph. D.
Computer Science & Engg.
Biomedical Engg.
Electrical & Electronics Engg.
Electronics and Communication Engg.
Management Studies

GM UNIVERSITY
P. B. Road, Davanagere, Karnataka - 577 006

Admission Contact:
63642 59993
96200 96346
93640 99720 / 721
For Ph.D. : 98444 00397
Toll Free No.: 1800 123 7099
admissions@gmu.ac.in
www.gmu.ac.in

ಬಳ್ಳಾರಿಯಲ್ಲಿ ವೀರಶೈವ– ಲಿಂಗಾಯತ ಮಹಾಸಭಾದಿಂದ ಜನ ಜಾಗೃತಿ ಸಮಾವೇಶ

‘ಒಬಿಸಿ ಪಟ್ಟಿಗೆ ಉಪ ಜಾತಿ ಸೇರಿಸಲು ಆಗ್ರಹ’

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ವೀರಶೈವ-ಲಿಂಗಾಯತ ಸಮಾಜದ ಎಲ್ಲ ಉಪ ಜಾತಿಗಳನ್ನು ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸುವಂತೆ ಒತ್ತಡ ಹಾಕಲು ಒಗ್ಗಟ್ಟಿನಿಂದ ಹೋರಾಡಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಜಗದೀಶ್ ಶೆಟ್ಟರ್ ಹಾಗೂ ಅರಣ್ಯ ಹಾಗೂ ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಸಲಹೆ ನೀಡಿದರು.

ಹಾನಗಲ್ ಕುಮಾರಸ್ವಾಮಿ-ಗಳ 156ನೇ ಜಯಂತ್ಯುತ್ಸವ ಹಾಗೂ ವೀರಶೈವ-ಲಿಂಗಾಯತ ಮಹಾಸಭಾದ ಆಶ್ರಯದಲ್ಲಿ ಏರ್ಪಡಿಸಿದ್ದ ಜನ ಜಾಗೃತಿ ಸಮಾವೇಶ ಭಾನುವಾರ ಉದ್ಘಾಟಿಸಿ ಮಾತನಾಡಿದ ಜಗದೀಶ್ ಶೆಟ್ಟರ್, ‘ಸಮಾಜದ ಎಲ್ಲ ಉಪ ಜಾತಿಗಳನ್ನು ಸಂಘಟಿಸಿ ಒಗ್ಗಟ್ಟಿನಿಂದ ಹೋರಾಟ ಮಾಡಿದರೆ ಬೇಡಿಕೆ ಈಡೇರಲಿದೆ’ ಎಂದು ಅಭಿಪ್ರಾಯಪಟ್ಟರು.

ಸಚಿವ ಈಶ್ವರ ಖಂಡ್ರೆ, ‘ನಮ್ಮ ಸಮಾಜ ಕವಲು ದಾರಿಯಲ್ಲಿದೆ. ಗುರು– ವಿರಕ್ತ ಪರಂಪರೆಯವರನ್ನು ಒಂದೇ ವೇದಿಕೆಯಲ್ಲಿ ತರಲು ಕೂಡಲ ಸಂಗಮದಲ್ಲಿ ಸಮಾವೇಶ ಸಂಘಟಿಸಲಾ-ಗಿತ್ತು. ಆದರೂ ಈ ಸಮಾಜ ಒಗ್ಗೂಡಿಲ್ಲ. ವೀರಶೈವ ಮತ್ತು ಲಿಂಗಾಯತ ಬೇರೆ ಬೇರೆ ಅಲ್ಲ ಎರಡೂ ಸಮಾನಾರ್ಥ ಪದಗಳು. ಎರಡರ ನಡುವೆ ಯಾವುದೇ ಭೇದಭಾವವಿಲ್ಲ’ ಎಂದು ಹೇಳಿದರು.

ಉಜ್ಜಯಿನಿಯ ಸಿದ್ಧಲಿಂಗ ರಾಜ ದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಕಲ್ಯಾಣ ಸ್ವಾಮಿ ಮಠದ ಕಲ್ಯಾಣ ಸ್ವಾಮಿ, ಸಿರುಗುಪ್ಪ ಬಸವ ಭೂಷಣ ಸ್ವಾಮಿ ಸಾನಿಧ್ಯ ವಹಿಸಿದ್ದರು. ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಎನ್. ತಿಪ್ಪಣ್ಣ ಅವರನ್ನು ಸಮಾರಂಭದಲ್ಲಿ ಅಭಿನಂದಿಸಲಾಯಿತು.

ಇದೇ ಸಮಾರಂಭದಲ್ಲಿ ಸಂಗನಬಸವ ಸ್ವಾಮೀಜಿಗೆ ಮರಣೋ-ತ್ತರವಾಗಿ ‘ಕುಮಾರಶ್ರೀ’ ಪ್ರಶಸ್ತಿ, ಸಮಾಜದ ಮುಖಂಡರಾದ ಭೀಮಣ್ಣ ಖಂಡ್ರೆ ಅವರಿಗೆ ‘ಶರಣ ಸಕ್ಕರೆ ಕರಡೀಶ’ ಪ್ರಶಸ್ತಿ, ಶಾಮನೂರು ಶಿವಶಂಕರಪ್ಪ ಅವರಿಗೆ ‘ಮಹಾದೇವ ತಾತ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ‘ಸಿದ್ಧ-ಲಿಂಗೇಶ್ವರ ಭಗವತ್ಪಾದ’ ಪ್ರಶಸ್ತಿ-ಯನ್ನು ಪಂಪಾಪತಿ ಶಾಸ್ತ್ರಿಗಳಿಗೆ ಪ್ರದಾನ ಮಾಡಲಾಯಿತು. ಬಸವಶ್ರೀ ಪ್ರಶಸ್ತಿಗೆ ಭಾಜನರಾಗಿದ್ದ ಬಿ.ಎಸ್. ಯಡಿಯೂರಪ್ಪ ಗೈರು ಹಾಜರಾಗಿದ್ದರು.

ಹರಪನಹಳ್ಳಿ ಶಾಸಕಿ ಲತಾ, ವೀರಶೈವ ಲಿಂಗಾಯತ ಸಮಾಜದ ಮುಖಂಡ ರೇಣುಕಾ ಪ್ರಸನ್ನ, ಅಲ್ಲಂ ವೀರಭದ್ರಪ್ಪ, ರಾಮನಗೌಡ, ಗುರುಸಿ-ದ್ದಸ್ವಾಮಿ, ಚಾನಾಳ್ ಶೇಖರ್ ಕಾರ್ಯಕ್ರ-ಮದಲ್ಲಿ ಭಾಗವಹಿಸಿದ್ದರು. ಸಮಾವೇಶದ ಅಂಗವಾಗಿ ನಡೆದ ಮೆರವಣಿಗೆಯ-ನ್ನು ಬೆಳಿಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಬಿ. ನಾಗೇಂದ್ರ ಉದ್ಘಾಟಿಸಿದರು.

ಬಳ್ಳಾರಿಯಲ್ಲಿ ಭಾನುವಾರ ನಡೆದ ವೀರಶೈವ– ಲಿಂಗಾಯತ ಮಹಾಸಭಾದ ಸಮಾವೇಶದಲ್ಲಿ ವಿಧಾನ ಪರಿಷತ್ ಸದಸ್ಯ ಜಗದೀಶ ಶೆಟ್ಟರ್ ಮಾತನಾಡಿದರು

> ‘ವೀರಶೈವ- ಲಿಂಗಾಯತ ಪ್ರತ್ಯೇಕ ಧರ್ಮ ಕುರಿತು **ಈಗಲೂ ಚರ್ಚೆಗಳು ನಡೆಯುತ್ತಿವೆ. ಈ ವಿಷಯದಲ್ಲಿ ಸಮಾಜದಲ್ಲಿ ಒಮ್ಮತ ಮೂಡಿಸುವ ಅಗತ್ಯವಿದೆ**
> **ಜಗದೀಶ ಶೆಟ್ಟರ್**
> ವಿಧಾನ ಪರಿಷತ್ ಸದಸ್ಯ

‘ಸಂಘರ್ಷ ಬೇಡ; ಸಮನ್ವಯತೆ ಬೇಕು’

‘ಜಾತಿ, ಉಪ ಜಾತಿಗಳ ನಡುವೆ ಸಂಘರ್ಷ ನಡೆಯುತ್ತಿದೆ. ನಮ್ಮ ಲಾಭಕ್ಕಾಗಿ ಸಮಾಜ ಒಡೆಯುತ್ತಿದ್ದೇವೆ. ಸಮಾಜದ ಏಕತೆಗಾಗಿ ಸಮನ್ವಯತೆ ಸಾಧಿಸಬೇಕಾಗಿದೆ. ನೀತಿ–ತತ್ವಗಳ ಆಧಾರದ ಮೇಲೆ ಎಲ್ಲ ಉಪ ಜಾತಿಗಳು ಒಗ್ಗೂಡಬೇಕಿದೆ’ ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

‘ನಮ್ಮ ಚಿಂತನೆಗಳ ವಿರುದ್ಧ ಒಂದು ವರ್ಗ ಕೆಲಸ ಮಾಡುತ್ತಿದೆ. ನಮ್ಮನ್ನು ಅಡಕತ್ತರಿಯಲ್ಲಿ ಸಿಕ್ಕಿಸುವ ಕುತಂತ್ರಗಳಿಗೆ ಸಮರ್ಥವಾಗಿ ಉತ್ತರಿಸುವ ಶಕ್ತಿ ಬೆಳೆ-ಸಿಕೊಳ್ಳಬೇಕು. ಚರಿತ್ರೆಗಿಂತ ಚಾರಿತ್ರ್ಯ ಮುಖ್ಯ. ಮಠ– ಮಾನ್ಯಗಳಿವೆ. ಆಚಾರ್ಯ-ರಿದ್ದಾರೆ. ಆದರೆ, ಆಚರಣೆಗಳಿಲ್ಲ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

‘ಶಿಕ್ಷಣ, ಉದ್ಯೋಗ ಮತ್ತು ಆಧ್ಯಾತ್ಮ ಕ್ಷೇತ್ರಗಳಲ್ಲಿ ಮಹಾನ್ ಸಾಧನೆ ಜತೆಗೆ, ವೈಚಾರಿಕಾ ಕ್ರಾಂತಿಯ ಮಠಗಳನ್ನು ಸ್ಥಾಪಿಸಿದ ಬಳಿಕವೂ ವೀರಶೈವ ಲಿಂಗಾಯತರಲ್ಲಿ ಸಂಘಟಿತ ಸಮಾಜ ನಿರ್ಮಾಣ ಸಾಧ್ಯವಾಗಿಲ್ಲ’ ಎಂದು ವಿಷಾದಿಸಿದರು.

2ಎ ಮೀಸಲಾತಿಗೆ ಒತ್ತಾಯಿಸಿ ಹೆದ್ದಾರಿಯಲ್ಲಿ ಇಷ್ಟಲಿಂಗ ಪೂಜೆ

ನಿಪ್ಪಾಣಿ (ಬೆಳಗಾವಿ ಜಿಲ್ಲೆ): ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಬೇಕು ಹಾಗೂ ಉಪಪಂಗಡಗಳನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಬೇಕು ಎಂದು ಆಗ್ರಹಿಸಿ ಕೂಡಲಸಂಗಮ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಭಾನುವಾರ, ನಿಪ್ಪಾಣಿ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ ಮಾಡಿ ಆರನೇ ಹಂತದ ಹೋರಾಟಕ್ಕೆ ಚಾಲನೆ ನೀಡಲಾಯಿತು.

ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಅರ್ಧ ತಾಸು ವಾಹನ ನಿಲ್ಲಿಸಲಾಯಿತು. ಟ್ರ್ಯಾಕ್ಟರ್‌ನಲ್ಲಿ ಹಾಕಿದ ವೇದಿಕೆಯಲ್ಲಿ ಶ್ರೀಗಳು ಇಷ್ಟಲಿಂಗ ಪೂಜೆ ಆರಂಭಿಸಿದರು. ಅವರೊಂದಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ, ರಾಜ್ಯಸಭೆ ಸದಸ್ಯ ಈರಣ್ಣ ಕಡಾಡಿ, ಶಾಸಕ ವಿನಯ ಕುಲಕರ್ಣಿ ಸೇರಿದಂತೆ ಹಲವರು ಇಷ್ಟಲಿಂಗ ಪೂಜೆ ಮಾಡಿದರು.

ಈ ವೇಳೆ ಮಾತನಾಡಿದ ಸ್ವಾಮೀಜಿ, ‘2ಎ ಮೀಸಲಾತಿಗಾಗಿ ಮೂರು ದಶಕಗಳಿಂದ ಹೋರಾಟ ಮಾಡಿದರೂ ನ್ಯಾಯ ಸಿಕ್ಕಿಲ್ಲ. ಈ ಹಿಂದೆ ಬಿಜೆಪಿ ಸರ್ಕಾರ 2ಡಿ ಮೀಸಲಾತಿ ನೀಡಿದ್ದರೂ ನಾವು ಒಪ್ಪಿಕೊಂಡಿಲ್ಲ. ಕಾಂಗ್ರೆಸ್ ಸರ್ಕಾರ ರಚನೆ ಮಾಡುವಲ್ಲಿ ಪಂಚಮಸಾಲಿ ಸಮುದಾಯದ ದೊಡ್ಡ ಪಾಲು ಇದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಗ್ಗೆ ಶೀಘ್ರ ನಿರ್ಧಾರ ತೆಗೆದುಕೊಳ್ಳಬೇಕು’ ಎಂದರು.

ಮನವಿ ಪಡೆದು ಮಾತನಾಡಿದ ಸಚಿವೆ ಲಕ್ಷ್ಮೀ ಹೆಬ್ಬಾಳಕರ, ‘ಮೀಸಲಾತಿ ವಿಚಾರದಲ್ಲಿ ಸಮಾಜ ಮತ್ತು ಸರ್ಕಾರದ ಕೊಂಡಿಯಾಗಿ ಕೆಲಸ ಮಾಡುತ್ತೇನೆ. ಮಂಗಳವಾರ (ಸೆ.12) ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸುತ್ತೇನೆ. ಮೀಸಲಾತಿ ಅವಶ್ಯಕತೆ ಕುರಿತು ಮನವರಿಕೆ ಮಾಡುತ್ತೇನೆ’ ಎಂದರು.

ರಾಜ್ಯಸಭೆ ಸದಸ್ಯ ಈರಣ್ಣ ಕಡಾಡಿ ‘2ಡಿ ಮೀಸಲಾತಿ ಒಪ್ಪಿಕೊಳ್ಳದ ಸಮಾಜದವರು ಬಿಜೆಪಿಯಿಂದ ದೂರವಾಗಿದ್ದು, ಇದರ ಲಾಭ ಕಾಂಗ್ರೆಸ್‌ಗೆ ಆಗಿದೆ. ಕಾಂಗ್ರೆಸ್ ಸರ್ಕಾರ ಸಮಾಜದ ಋಣ ತೀರಿಸಬೇಕು’ ಎಂದು ಆಗ್ರಹಿಸಿದರು.

2ಎ ಮೀಸಲಾತಿಗೆ ಆಗ್ರಹಿಸಿ ನಿಪ್ಪಾಣಿಯಲ್ಲಿ ಭಾನುವಾರ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ ನಡೆಸಲಾಯಿತು. ಸಚಿವೆ ಲಕ್ಷ್ಮೀ ಹೆಬ್ಬಾಳಕರ, ರಾಜ್ಯಸಭೆ ಸದಸ್ಯ ಈರಣ್ಣ ಕಡಾಡಿ ಕೂಡ ಇದ್ದಾರೆ —ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಶೀಘ್ರ ಜಾರಿ: ಮುನಿಯಪ್ಪ

ಹೊಸದುರ್ಗ: ಒಳಮೀಸಲಾತಿಯ ವರ್ಗೀಕರಣ ಕುರಿತು ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ಸಲ್ಲಿಸಿರುವ ವರದಿಯು ಶೀಘ್ರವೇ ಜಾರಿಗೆ ಬರಲಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಪಟ್ಟಣದಲ್ಲಿ ತಾಲ್ಲೂಕು ಮಾದಿಗ ಸಮಾಜದ ಬಿ.ಜಿ. ಅಭಿಮಾನಿಗಳ ಬಳಗದ ವತಿಯಿಂದ ಭಾನುವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

‘ಶೋಷಿತ ಸಮುದಾಯಗಳು ಪ್ರಗತಿ ಕಾಣಬೇಕಾದರೆ, ಸದಾಶಿವ ಆಯೋಗದ ವರದಿ ಜಾರಿಗೆ ಬರಬೇಕು. 2013ರಲ್ಲೇ ಕಾಂಗ್ರೆಸ್ ಆಡಳಿತದಲ್ಲಿದ್ದಾಗ ಈ ವರದಿ ಜಾರಿಗೆ ತೀರ್ಮಾನಿ-ಸಲಾಗಿತ್ತು. ಆದರೆ, ಚುನಾವಣೆ ಎದುರಾಗಿದ್ದರಿಂದ ಜಾರಿ ಮಾಡಲಾಗಲಿಲ್ಲ. ಇದೀಗ ಮುಖ್ಯಮಂತ್ರಿ, ಉಪಮುಖ್ಯ-ಮಂತ್ರಿ ಮತ್ತು ಸಚಿವ ಸಂಪುಟ ಸಹೋದ್ಯೋಗಿಗಳೊಂದಿಗೆ ಈ ಕುರಿತು ಚರ್ಚೆ ನಡೆದಿದ್ದು, ವರದಿ ಜಾರಿಗೊಳಿಸಲಾಗುವುದು ಎಂದರು.

‘ವರದಿ ಜಾರಿಗೊಂಡರೆ ಭೋವಿ, ಕೊರಮ, ಕೊರಚ, ಲಂಬಾಣಿ ಹಾಗೂ ಇನ್ನಿತರ ಸಮುದಾಯಗಳಿಗೆ ಅನ್ಯಾಯ-ವಾಗಲಿದೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಎಲ್ಲ ಸಮುದಾಯಗಳ ಸ್ಥಿತಿಗತಿ ಮತ್ತು ಪ್ರಗತಿಯನ್ನು ಗಮನದಲ್ಲಿಟ್ಟು-ಕೊಂಡೇ ವರದಿ ಜಾರಿಗೊಳಿಸಿಯೇ ತೀರುತ್ತೇವೆ’ ಎಂದು ಅವರು ಮಾದಿಗ ಸಮುದಾಯದ ಜನರಿಗೆ ಭರವಸೆ ನೀಡಿದರು.

ಅನ್ಯಾಯವಾದಾಗ ಹೋರಾಟ ಮಾಡಿ: ‘ನಿಮಗೆ ಅನ್ಯಾಯವಾದಾಗ ಹೋರಾಟ ಮಾಡಿ. ಆದರೆ, ಸುಖಾಸುಮ್ಮನೆ ಇನ್ನೊಬ್ಬರ ಮೇಲೆ ಜಾತಿನಿಂದನೆ ಪ್ರಕರಣ ದಾಖಲಿಸಬೇಡಿ’ ಎಂದು ಸಮಾರಂಭದಲ್ಲಿ ಹಾಜರಿದ್ದ ಅಬಕಾರಿ ಸಚಿವ ಆರ್. ಬಿ. ತಿಮ್ಮಾಪುರ ಕಿವಿಮಾತು ಹೇಳಿದರು.

‘ಯಾರದ್ದೋ ಮೇಲಿನ ತಮ್ಮ ಸೇಡು ತೀರಿಸಿಕೊಳ್ಳಲು ಕೆಲವರು ನಿಮ್ಮನ್ನು ಬಳಸಿಕೊಂಡು ‘ಅಟ್ರಾಸಿಟಿ’ ಪ್ರಕರಣ ದಾಖಲಿಸುತ್ತಾರೆ. ಇಂತಹವುಗಳಿಂದ ಅಟ್ರಾಸಿಟಿ ಪ್ರಕರಣಗಳು ಮಹತ್ವ ಕಳೆದುಕೊ-ಳ್ಳುತ್ತಿವೆ. ಇಂತಹ ನಡೆಯಿಂದಾಗಿ, ಬೇರೆ ಸಮುದಾಯದವರು ನಿಮ್ಮಿಂದ ದೂರ ಉಳಿಯುತ್ತಾರೆ’ ಎಂದರು.

ಆದಿತ್ಯ ಎಲ್1 ಕಕ್ಷೆ ಬದಲಾವಣೆ

ಬೆಂಗಳೂರು: ಆದಿತ್ಯ ಎಲ್ 1 ನೌಕೆಯ ಮೂರನೇ ಕಕ್ಷೆ ಬದಲಾವಣೆ ಭಾನುವಾರ ಯಶಸ್ವಿಯಾಗಿ ನಡೆಯಿತು ಎಂದು ಇಸ್ರೊ ತಿಳಿಸಿದೆ.

ಆದಿತ್ಯ ಈಗ 296 ಕಿ.ಮೀ x 71767 ಕಿ.ಮೀ ಎತ್ತರದ ಭೂಕಕ್ಷೆಯಲ್ಲಿ ಪರಿಭ್ರಮಣ ನಡೆಸುತ್ತಿದ್ದು, ಮುಂದಿನ ಕಕ್ಷೆ ಬದಲಾವಣೆ ಸೆ.15 ರಂದು ನಡೆಯಲಿದೆ. ಇಸ್ರೊದ ಟೆಲಿಮೆಟ್ರಿ, ಟ್ರ್ಯಾಕಿಂಗ್ ಆ್ಯಂಡ್ ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಸಿ) ಕಕ್ಷೆ ಬದಲಾವಣೆ ಕಾರ್ಯ ನಿರ್ವಹಿಸಿದೆ.

ಮಾರಿಷಿಯಸ್‌ನಲ್ಲಿರುವ ಇಸ್ರೊ ಭೂನಿಲ್ದಾಣ, ಬೆಂಗಳೂರಿನ ಎಸ್‌ಡಿಎಸ್‌ಸಿ–ಎಸ್‌ಎಚ್‌ಎಆರ್ ಪೋರ್ಟ್‌ಬ್ಲೇರ್‌ನಲ್ಲಿರುವ ಕೇಂದ್ರವು ಕಕ್ಷೆಯ ಬದಲಾವಣೆ ವೇಳೆ ಆದಿತ್ಯ ಎಲ್1 ಚಲನೆಯ ಮೇಲೆ ನಿಗಾ ಇಟ್ಟಿತ್ತು ಎಂದು ಇಸ್ರೊ ‘ಎಕ್ಸ್’ನಲ್ಲಿ ಹೇಳಿದೆ.

ಮೊದಲ ಮತ್ತು ಎರಡನೇ ಹಂತದ ಕಕ್ಷೆ ಬದಲಾವಣೆ ಸೆ.3 ಮತ್ತು 5 ರಂದು ನಡೆದಿತ್ತು. ಇನ್ನೊಂದು ಹಂತದ ಭೂಕಕ್ಷೆಯ ಬದಲಾವಣೆ ಬಳಿಕ ಬಾಹ್ಯಾಕಾಶ ನೌಕೆಯು ಲಗ್ರಾಂಜಿಯನ್ ಬಿಂದು ಎಲ್1 ನತ್ತ ಪ್ರಯಾಣ ಬೆಳೆಸಲಿದೆ.

ಕಸಾಪ ಕೇರಳ ಗಡಿನಾಡ ಘಟಕ ಅಧ್ಯಕ್ಷ ಎಸ್.ವಿ.ಭಟ್ ನಿಧನ

ಬದಿಯಡ್ಕ: ಕನ್ನಡ ಸಾಹಿತ್ಯ ಪರಿಷತ್ತಿನ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಎಸ್.ವಿ. ಭಟ್ (72) ಭಾನುವಾರ ಹೃದಯಾಘಾತದಿಂದ ನಿಧನರಾದರು.

ಬದಿಯಡ್ಕದಲ್ಲಿ ನಡೆದ ಕಾರ್ಯಕ್ರ-ಮವೊಂದರಲ್ಲಿ ಭಾಗವಹಿಸಿದ್ದ ಅವರು, ಕುಸಿದು ಬಿದ್ದರು. ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು.

ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಸೋಮವಾರ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಮೂಲತಃ ಹೊನ್ನಾವರದ ಸಾಲಕೋಡು ಗ್ರಾಮದ ಎಸ್.ವಿ. ಭಟ್ಟ ಅವರು, 1975ರಲ್ಲಿ ಕಾಸರಗೋಡಿಗೆ ಶಿಕ್ಷಕರಾಗಿ ಬಂದರು. ಕಾಸರಗೋಡು, ಕಾಞಂಗಾಡು, ಅಡೂರು, ಕಾರಡ್ಕ, ಮುಳ್ಳೇರಿಯದ ಶಾಲೆಗಳಲ್ಲಿ ಶಿಕ್ಷಕರಾಗಿ, ದೇಲಂಪಾಡಿ, ಬೆಳ್ಳೂರು ಶಾಲೆಗಳಲ್ಲಿ ಮುಖ್ಯ ಶಿಕ್ಷಕರಾಗಿ ಕೆಲಸ ನಿರ್ವಹಿಸಿದ್ದರು. ಬಳಿಕ ಕುಂಬಳೆ ಉಪ ಜಿಲ್ಲಾ ಸಹಾಯಕ ಶಿಕ್ಷಣಾಧಿಕಾರಿಯಾಗಿದ್ದರು.

2006ರಲ್ಲಿ ನಿವೃತ್ತರಾದ ಬಳಿಕ ಸಾಹಿತ್ಯ ಹಾಗೂ ಸಾಮಾಜಿಕ ಕೆಲಸಗಳಲ್ಲಿ ಸಕ್ರಿಯರಾಗಿದ್ದರು. ಕಾಸರಗೋಡಿನಲ್ಲಿ ಕನ್ನಡ ಭಾಷೆಯ ಉಳಿವು ಹಾಗೂ ಬೆಳವಣಿಗೆಗಾಗಿ ಹೋರಾಟ ನಡೆಸಿದ್ದರು.

ಕಸಾಪ ಕೇರಳ ಗಡಿನಾಡು ಘಟಕದಲ್ಲಿ ವಿವಿಧ ಜವಾಬ್ದಾರಿ ನಿರ್ವಹಿಸಿದ್ದ ಅವರು, ಸತತ ನಾಲ್ಕು ಅವಧಿಯಲ್ಲಿ ಅದರ ಅಧ್ಯಕ್ಷರಾಗಿದ್ದರು. ಮಕ್ಕಳ ಕ್ರಿಯಾಶೀಲತೆ ಹೆಚ್ಚಿಸಲು ಶಾಲೆಗಳಲ್ಲಿ ‘ವಿದ್ಯಾರಂಗ ಕಲಾವೇದಿಕೆ’ ಬೆಳೆಸಿದರು.

‘ಇಂಡಿಯಾಗೆ ಬೆಚ್ಚಿ ಭಾರತವೆಂದು ಬದಲು’

ಸಿಡಬ್ಲ್ಯುಸಿ ಸದಸ್ಯರಾಗಿ ಆಯ್ಕೆಯಾದ ಸಯ್ಯದ್ ನಾಸಿರ್ ಹುಸೇನ್‌ಗೆ ಅಭಿನಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತನ್ನ ಕಾರ್ಯಕ್ರಮ-ಗಳಿಗೆ ‘ಮೇಕ್ ಇನ್ ಇಂಡಿಯಾ’, ‘ಸ್ಕಿಲ್ ಇಂಡಿಯಾ’, ‘ಸ್ಟ್ಯಾಂಡ್ ಅಪ್ ಇಂಡಿಯಾ’ ಎಂದೆಲ್ಲ ಹೆಸರಿಟ್ಟಿದ್ದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವೇ ಈಗ ‘ಇಂಡಿಯಾ’ (ವಿರೋಧ ಪಕ್ಷಗಳ ಮಹಾ ಮೈತ್ರಿಯ ಹೆಸರು) ಹೆಸರಿಗೆ ಬೆಚ್ಚಿ ಬಿದ್ದು ದೇಶದ ಹೆಸರನ್ನೇ ‘ಭಾರತ’ ಎಂದು ಬದಲಿಸಲು ಹೊರಟಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಾಂಗ್ರೆಸ್ ಕಾರ್ಯಕಾರಣಿ ಸಮಿತಿ (ಸಿಡಬ್ಲ್ಯುಸಿ) ಸದಸ್ಯರಾಗಿ ಆಯ್ಕೆಯಾದ ರಾಜ್ಯಸಭೆ ಸದಸ್ಯ ಸಯ್ಯದ್ ನಾಸಿರ್ ಹುಸೇನ್ ಅವರಿಗೆ ಅರಮನೆ ಮೈದಾನದಲ್ಲಿ ಕೆಪಿಸಿಸಿ ಅಲ್ಪಸಂಖ್ಯಾತ ಘಟಕ ಭಾನುವಾರ ಆಯೋಜಿಸಿದ್ದ ಅಭಿನಂದನಾ ಕಾರ್ಯ-ಕ್ರಮದಲ್ಲಿ ಅವರು ಮಾತನಾಡಿದರು.

‘ನಾವು (ಕಾಂಗ್ರೆಸ್) ‘ಭಾರತ್ ಜೋಡೊ ನಡೆಸಿದವರು’. ನಮಗೆ ಭಾರತ- ಇಂಡಿಯಾ ಬಗ್ಗೆ ಪಾಠ ಹೇಳುವ ಮೂರ್ಖತನಕ್ಕೆ ಬಿಜೆಪಿ ಪರಿವಾರ ಮುಂದಾಗಿದೆ. ಅವರಿಗೆ (ಬಿಜೆಪಿ) ಭಾರತದ ಬಗ್ಗೆಯೂ ಗೌರವ ಇಲ್ಲ. ಇಂಡಿಯಾದ ಘನತೆಯೂ ಗೊತ್ತಿಲ್ಲ’ ಎಂದು ಟೀಕಿಸಿದರು.

‘ಬಹುತ್ವ ಭಾರತೀಯ ಸಂಸ್ಕೃತಿಯ ಜೀವಾಳ. ಬಹುತ್ವದ ನಾಶ ಎಂದರೆ ಅದು ನಮ್ಮ ಸಂವಿಧಾನದ ನಾಶ. ಸಾವಿರಾರು ವರ್ಷಗಳ ಭಾರತದ ಬಹುತ್ವ ಸಂಸ್ಕೃತಿಯನ್ನು ನಾಶಪಡಿಸುವ ಹುನ್ನಾರ ನಡೆಯುತ್ತಿದೆ. ಇದಕ್ಕಾಗಿ ಆಕರ್ಷಕ ಪದಗಳನ್ನು, ಘೋಷಣೆಗಳನ್ನು ಕೊಡುತ್ತಿದ್ದಾರೆ. ಆದರೆ, ಎಷ್ಟೇ ಹುನ್ನಾರ, ಪಿತೂರಿ ರಾಜಕಾರಣ ನಡೆಸಿದರೂ ನಾವು ಬಹುತ್ವದ ಭಾರತವನ್ನು, ಈ ಮಣ್ಣಿನ ಸೌಹಾರ್ದ ಪರಂಪರೆಯನ್ನು, ಜಾತ್ಯತೀತ ಸಂಸ್ಕೃತಿಯನ್ನು, ಸಂವಿಧಾನವನ್ನು ಕಾಪಾಡಿಕೊಳ್ಳುತ್ತೇವೆ’ ಎಂದರು.

ಕೇಂದ್ರದ ಮಾಜಿ ಸಚಿವ ಸಲ್ಮಾನ್ ಖುರ್ಷಿದ್, ಬಿಹಾರ ವಿಧಾನಸಭೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಶಕೀಲ್ ಅಹಮದ್, ಮಹಾರಾಷ್ಟ್ರ ಕಾಂಗ್ರೆಸ್ ಮುಖಂಡರಾದ ಬಾಬಾ ಸಿದ್ದಿಕಿ, ಸಚಿವರಾದ ಪ್ರಿಯಾಂಕ್ ಖರ್ಗೆ, ಬೈರತಿ ಸುರೇಶ್, ರಹೀಂ ಖಾನ್, ರಾಜ್ಯಸಭೆ ಸದಸ್ಯ ಜಿ.ಸಿ. ಚಂದ್ರಶೇಖರ್, ಮುಖ್ಯಮಂತ್ರಿಯ ರಾಜಕೀಯ ಸಲಹೆಗಾರ ನಸೀರ್ ಅಹಮದ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹಮದ್, ಶಾಸಕ ತನ್ವೀರ್ ಸೇಠ್ ಇದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಯ್ಯದ್ ನಾಸಿರ್ ಹುಸೇನ್ ಅವರಿಗೆ ಶಾಲು ಹೊದಿಸಿ ಅಭಿನಂದಿಸಿದರು. ಎನ್.ಎ ಹ್ಯಾರಿಸ್, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇದ್ದರು —ಪ್ರಜಾವಾಣಿ ಚಿತ್ರ

ಭಯದ ವಾತಾವರಣ ದೂರ: ಡಿಕೆಶಿ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ಕರ್ನಾಟಕದಲ್ಲಿ ಮೇ 13ಕ್ಕೂ ಮೊದಲು ಎಲ್ಲ ಧರ್ಮಿಯರೂ ಭಯದ ವಾತಾವರಣದಲ್ಲಿ ಬದುಕುತ್ತಿದ್ದರು. ಈಗ ನಿರ್ಭಯವಾಗಿ ಬದುಕುತ್ತಿದ್ದಾರೆ’ ಎಂದು ಅಭಿಪ್ರಾಯಪಟ್ಟರು.

‘ಬಿಜೆಪಿ ಸರ್ಕಾರ ಅಮಾಯಕ ಅಲ್ಪಸಂಖ್ಯಾತರ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸಿತ್ತು. ನಾವು ಕಾನೂನು ತಜ್ಞರ ಬಳಿ ಸುಳ್ಳು ಕೇಸುಗಳ ಕುರಿತು ಚರ್ಚೆ ನಡೆಸುತ್ತೇವೆ’ ಎಂದ ಅವರು, ‘ಅಲ್ಪಸಂಖ್ಯಾತರು ನಿರಾಳವಾಗಿ ಉಸಿರಾಡಬಹುದು. ಅನ್ಯಾಯ ಮಾಡಲು ನಮ್ಮ ಸರ್ಕಾರ ಬಿಡುವುದಿಲ್ಲ. ಯಾವುದೇ ರೀತಿಯ ತೊಂದರೆಯಾದರೂ ನಾವು ಬೆನ್ನಿಗೆ ನಿಲ್ಲುತ್ತೇವೆ. ಕಾನೂನಿನ ಚೌಕಟ್ಟು ಮೀರಿ ಎಂದಿಗೂ ನಡೆಯುವುದಿಲ್ಲ’ ಎಂದರು.

ಶಿಕ್ಷಣ ಪುರವಣಿ ಓದಿರಿ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	98.08	4,035	3,747
ಹಾರಂಗಿ	2,859	2,857.27	3,383	100
ಕಬಿನಿ	2284.00	2275.64	4,345	1,100
ಹೇಮಾವತಿ	2,922	2,901	820	6,090
ಲಿಂಗನಮಕ್ಕಿ	1,819	1,787.5	2,219	4,370.25
ಸೂಪಾ (ಮೀ)	564	545.58	3,351	1,283
ಮಾಣಿ	595	579.60	934	337
ತುಂಗಭದ್ರಾ	1,633	1,622.89	1,480	9,997
ಮಲಪ್ರಭಾ	2079.50	2,065.78	00	194
ಘಟಪ್ರಭಾ	2175	2,162.90	599	178
ಭದ್ರಾ	186	161.11	420	2,492
ಆಲಮಟ್ಟಿ (ಮೀ)	519.60	519.13	00	13,171
ನಾರಾಯಣಪುರ (ಮೀ)	492.25	490.47	10,899	9,434

* ನೆಲಮಟ್ಟದಿಂದ

ಪೊಲೀಸ್ ಇನ್‌ಸ್ಪೆಕ್ಟರ್, ಸಿಟಿ&ಆರ್ ವಿಭಾಗ, ಪೊಲೀಸ್ ಇಲಾಖೆ, ಸಿಐಡಿ, ಬೆಂಗಳೂರು.

ಪ್ರಕಟಣೆ

ಸಾರ್ವಜನಿಕರಲ್ಲಿ ಈ ಮೂಲಕ ತಿಳಿಯಪಡಿಸುವುದೇನೆಂದರೆ **ಬುರಾಕ್ ಯೂನಿಟಿ** ಎನ್ನುವ ಖಾಸಗಿ ಹಣಕಾಸು ಸಂಸ್ಥೆಯು ಸಾರ್ವಜನಿಕರಿಂದ ಠೇವಣಿ ರೂಪದಲ್ಲಿ ಹಣ ಸಂಗ್ರಹಿಸಿ, ಲಾಭಾಂಶ ಮತ್ತು ಅಸಲು ಹಣವನ್ನು ನೀಡದೆ ಮೋಸ ಮಾಡಿರುತ್ತಾರೆ. ಈ ಬಗ್ಗೆ ಡಿ.ಜೆ. ಹಳ್ಳಿ ಹಾಗೂ ಆರ್.ಟಿ. ನಗರ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದು, ಪ್ರಸ್ತುತ ಸಿ.ಐ.ಡಿ.ಯಲ್ಲಿ ತನಿಖೆಯಲ್ಲಿರುತ್ತದೆ. ಈ ಪ್ರಕರಣದಲ್ಲಿ ಆರೋಪಿ **ಎ1 ಸೈಯದ್ ನಿಯಾಜ್ ಬಿನ್ ಸೈಯ್ಯದ್ ಇಸ್ಮಾಯಿಲ್, 54 ವರ್ಷ, ಎ2 ಸೈಯ್ಯದ್ ಮೊಹಿಸ್ ಪಾಷಾ ಬಿನ್ ಸೈಯ್ಯದ್ ನಿಯಾಜ್, 37 ವರ್ಷ, ಎ3 ರೋಷನ್ ಪಾಷಾ ಬಿನ್ ಸೈಯ್ಯದ್ ನಿಯಾಜ್, 35 ವರ್ಷ,** ಇವರುಗಳ ಹೆಸರಿನಲ್ಲಿರುವ ಚರಾ ಮತ್ತು ಸ್ಥಿರಾಸ್ಥಿಗಳನ್ನು ಸ್ವಾಧೀನಪಡಿಸಿಕೊಂಡು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಅಧಿನಿಯಮ–2004 ಕಾಯಿದೆಯಂತೆ ಕ್ರಮ ಜರುಗಿಸಬೇಕಾಗಿರುವುದರಿಂದ ಇವರುಗಳ ಹೆಸರಿನಲ್ಲಿರುವ ಚರಾ ಮತ್ತು ಸ್ಥಿರಾಸ್ಥಿಗಳ ಬಗ್ಗೆ ಮಾಹಿತಿ ತಿಳಿದಲ್ಲಿ, ಈ ಕೆಳಕಂಡ ಅಧಿಕಾರಿಗಳಿಗೆ ಮಾಹಿತಿ ನೀಡಲು ಕೋರಿದೆ. ಮಾಹಿತಿದಾರರ ಹೆಸರನ್ನು ಗೌಪ್ಯವಾಗಿರಿಸಲಾಗುವುದು.

ಸಹಿ/- ಲಕ್ಷ್ಮಿದೇವಿ ಎಂ, ಪೊಲೀಸ್ ಇನ್‌ಸ್ಪೆಕ್ಟರ್, ಸಿಟಿ&ಆರ್ ವಿಭಾಗ, ಸಿಐಡಿ, ಬೆಂಗಳೂರು. ದೂ: 080–22094567, ಮೊ: 9844712055

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು, ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಮುಖ್ಯ ಅಭಿಯಂತರರವರ ಕಛೇರಿ (ತ್ಯಾನೀನಿ-ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–09

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗೆ ಇಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ & ಸಮಯ	ಟೆಂಡರ್ ತೆರೆಯುವ ದಿನಾಂಕ & ಸಮಯ
1.	ಕಾನಿಅ (ತ್ಯಾನೀನಿ–ಎನ್) ವಿ. ವ್ಯಾಲಿ	ಬೆಂಜಮಂ/ಕಾನಿಅ (ತ್ಯಾನೀನಿ–ಎನ್ –ವಿ.ವಿ)/ಪಿಬಿ/304/2023–24 ದಿನಾಂಕ: 06–09–2023	ರೂ.21.06 ಲಕ್ಷಗಳು / ರೂ.50,000/-	18-09-2023 ಸಂಜೆ 5.30 ಗಂಟೆಯವರೆಗೆ	20-09-2023 ಸಂಜೆ 4.00 ಗಂಟೆಗೆ
		ಬೆಂಜಮಂ/ಕಾನಿಅ (ತ್ಯಾನೀನಿ–ಎನ್ –ವಿ.ವಿ)/ಪಿಬಿ/307/2023–24 ದಿನಾಂಕ: 07–09–2023	ರೂ.19.21 ಲಕ್ಷಗಳು / ರೂ.49,000/-	25-09-2023 ಸಂಜೆ 5.30ಗಂಟೆಯವರೆಗೆ	27-09-2023 ಸಂಜೆ 4.00 ಗಂಟೆಗೆ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಎನ್) ವಿ. ವ್ಯಾಲಿ

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/AAPL/RO1244/23-24

ಕರ್ನಾಟಕ ನೀರಾವರಿ ನಿಗಮ ನಿಯಮಿತ

ಕರ್ನಾಟಕ ಸರ್ಕಾರದ ಉದ್ದಿಮೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ ಕನೀನಿನಿ, ತುಂ.ಭ.ಎ.ಕಾ. ವಿಭಾಗ ನಂ.3, ಸಿಂಧನೂರು–584128

ಸಂ.:ಕಾಪಾಅ–3/ಕನೀನಿನಿ/ತಾಶಾ–3/ಮಾಸಂಸ/ತಿದ್ದುಪಡಿ/2023–24/702 ದಿನಾಂಕ:07–09–2023

ಟೆಂಡರ್ ತಿದ್ದುಪಡಿ

ಉಲ್ಲೇಖ: 1. ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 677 ದಿನಾಂಕ: 04.09.2023.
2. ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 678 ದಿನಾಂಕ: 04.09.2023.

ಮೇಲಿನ ಉಲ್ಲೇಖಗಳನ್ವಯ ಈ ಕಛೇರಿಯಿಂದ ಆಹ್ವಾನಿಸಲಾದ ಎರಡು ಅಲ್ಪಾವಧಿ ಟೆಂಡರ್ ಪ್ರಕಟಣೆಗಳಲ್ಲಿ ಕೆಲವೊಂದು ತಿದ್ದುಪಡಿಯಾಗಿದ್ದು ವಿವರಗಳು ಈ ಕೆಳಗಿನಂತಿವೆ.

ವಿವರ	ಈ ಮೊದಲು ಪ್ರಕಟಣೆಯಲ್ಲಿದ್ದಂತೆ	ತಿದ್ದುಪಡಿ ಪ್ರಕಟಣೆಯಂತೆ.
web site Address	www.eprockarnataka.gov.in	https://www.kppp.karnataka.gov.in/#/portal/portal-home

ಇನ್ನುಳಿದಂತೆ ಟೆಂಡರ್ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಇಂಜಿನೀಯರರು ಕನೀನಿನಿ, ತುಂ.ಭ.ಎ. ಕಾಲುವೆ ವಿಭಾಗ ನಂ. 3 ಸಿಂಧನೂರು ರವರ ಕಛೇರಿಯಿಂದ ಕಛೇರಿ ಸಮಯದಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ. ತುಂ.ಭ.ಎ.ಕಾ. ವಿಭಾಗ ನಂ.3, ಸಿಂಧನೂರು.

DIP/RCR/122/KSMC&A/Job No.119/2023-24

ನಟ ಪ್ರಕಾಶ್ ರಾಜ್ ವಿರುದ್ಧ ಕಪ್ಪು ಬಟ್ಟೆ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಕಲಬುರಗಿ: ನಗರದ ಡಾ.ಎಸ್.ಎಂ. ಪಂಡಿತ್ ರಂಗ-ಮಂದಿರದಲ್ಲಿ ಏರ್ಪಡಿಸಿದ್ದ ಸಂವಾದದಲ್ಲಿ ಚಿತ್ರನಟ ಪ್ರಕಾಶ್ ರಾಜ್ ಪಾಲ್ಗೊಂಡಿದ್ದನ್ನು ಖಂಡಿಸಿದ ಹಿಂದೂ ಜಾಗೃತ ಸೇನೆ ಕಾರ್ಯ ಕರ್ತರು, ಭಾನುವಾರ ಕಪ್ಪು ಬಟ್ಟೆ ಪ್ರದರ್ಶಿಸಿ ಪ್ರತಿಭಟಿಸಿದರು.

ಜಗತ್ ವೃತ್ತದಲ್ಲಿ ಜಮಾಯಿಸಿದ ಕಾರ್ಯಕರ್ತರು ಘೋಷಣೆ ಕೂಗಿದರು. ಕೋಮು ಭಾವನೆಗೆ ಧಕ್ಕೆ ತರುವಂತೆ ಪ್ರಚೋದನಾತ್ಮಕ ಹೇಳಿಕೆ ನೀಡಿದ್ದಾರೆ. ಸಂವಾದದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಬಾರದು’ ಎಂದು ಆಗ್ರಹಿಸಿದರು.

ಬ್ರಹ್ಮಪುರ ಠಾಣೆಯ ಪೊಲೀಸರು ಪ್ರತಿಭಟನಕಾರ-ರನ್ನು ವಶಕ್ಕೆ ಪಡೆದು, ಮುಚ್ಚಳಿಕೆ ಪತ್ರ ಬರೆಸಿಕೊಂಡು ಬಿಡುಗಡೆ ಮಾಡಿದರು.ಕಾರ್ಯಕ್ರಮ ನಡೆದ ರಂಗಮಂದಿರದ ಬಳಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

‘ಸನಾತನ ಧರ್ಮ ಮತ್ತು ಹಿಂದುತ್ವವನ್ನು ಎತ್ತಿಹಿಡಿಯುವ ಬಗ್ಗೆ ಆಕ್ರಮಣಕಾರಿಯಾಗಿ ಮಾತನಾಡುವವರು ಹಿಂದೂಗಳಲ್ಲ. ಆದರೆ, ಅವರೇ ಹಿಂದುತ್ವದ ಗುತ್ತಿಗೆದಾರರಂತೆ ಬಿಂಬಿಸಿಕೊಳ್ಳುತ್ತಿದ್ದಾರೆ’ ಎಂದು ಪ್ರಕಾಶ್ ರಾಜ್ ಹೇಳಿದರು.

‘ಅಂಧಾನುಕರಣೆಯಿಂದ ಸಮಾಜ ಹಾಳು’

ಕೊಟ್ಟಾಯಂ (ಪಿಟಿಐ): ಮಣಿಪುರದಲ್ಲಿನ ಹಿಂಸಾಚಾರದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ನಟ ಪ್ರಕಾಶ್ ರಾಜ್ ಅವರು, ‘ಕೋಮು ಹಿಂಸಾಚಾರದಲ್ಲಿ ಬಹುತೇಕವಾಗಿ ಮಹಿಳೆಯರು ಮತ್ತು ಮಕ್ಕಳು ತೊಂದರೆಗಳಾಗುತ್ತಾರೆ’ ಎಂದು ಹೇಳಿದ್ದಾರೆ.

ಡಿಸಿ ಬುಕ್ಸ್‌ನ ಸುವರ್ಣ ಮಹೋತ್ಸವದ ಅಂಗವಾಗಿ ನಡೆದ ಡಿ.ಸಿ. ಕಿಳಕ್ಕೆಮುರಿ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ, ‘ಪ್ರಜೆಗಳು ತಮ್ಮ ನಾಯಕನನ್ನು ಅಂಧಾನುಕರಣೆ ಮಾಡಿದಾಗ ಸಮಾಜವು ಹಾಳಾಗುತ್ತದೆ. ಪ್ರಜೆಗಳು ತಮ್ಮ ನಾಯಕ ಇಲ್ಲವೇ ಯಾವುದೇ ಒಂದು ಸಿದ್ಧಾಂತವನ್ನು ಪ್ರಶ್ನಿಸದೇ ಕುರುಡಾಗಿ ಅನುಸರಿಸಿದರೆ ಆ ಸಮಾಜವು ಹಾಳಾಗುತ್ತದೆ ಎಂಬುದು ಸ್ಪಷ್ಟವಾಗಿದೆ. ರಾಷ್ಟ್ರೀಯತೆಯ ಹೆಸರಿನಲ್ಲಿ ಈಗ ದೇಶದಲ್ಲಿ ಅದೇ ಆಗುತ್ತಿದೆ’ ಎಂದು ಅಭಿಪ್ರಾಯಪಟ್ಟರು.

ಸುನ್ನಿ ಸ್ಟೂಡೆಂಟ್ಸ್ ಫೆಡರೇಷನ್ ‘ಗೋಲ್ಡನ್ ಫಿಫ್ಟಿ’ ಸಮಾವೇಶ

ಕಪ್ಪುಚುಕ್ಕೆ ಇಲ್ಲದೆ ಎಸ್‌ಎಸ್‌ಎಫ್ ಕೆಲಸ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಸೌಹಾರ್ದ ಮತ್ತು ಸಾಮರಸ್ಯದ ಸಂಸ್ಕೃತಿ ರಕ್ಷಿಸಲು 50 ವರ್ಷಗಳಿಂದ ಹೋರಾಡುತ್ತಿರುವ ಸುನ್ನಿ ಸ್ಟೂಡೆಂಟ್ಸ್ ಫೆಡರೇಷನ್ (ಎಸ್‌ಎಸ್‌ಎಫ್) ಕಪ್ಪುಚುಕ್ಕೆ ಇಲ್ಲದಂತೆ ಕೆಲಸ ಮಾಡಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಎಸ್‌ಎಸ್‌ಎಫ್ ‘ಗೋಲ್ಡನ್ ಫಿಫ್ಟಿ’ (ಸುವರ್ಣ ಮಹೋತ್ಸವ) ಕಾರ್ಯಕ್ರಮದ-ಲ್ಲಿ ಮಾತನಾಡಿದ ಅವರು, ‘ಜಾತಿ, ಧರ್ಮದ ಹೆಸರಿನಲ್ಲಿ ತಾರತಮ್ಯಕ್ಕೆ, ಕಾನೂನು ಕೈಗೆ ತೆಗೆದುಕೊಳ್ಳಲು ಯಾರಿಗೂ ಅವಕಾಶ ನೀಡುವುದಿಲ್ಲ’ ಎಂದರು.

‘ದೇಶದ ಐಕ್ಯತೆ, ಸಂವಿಧಾನ ಮತ್ತು ಸಮಗ್ರತೆ ಕಾಪಾಡಿಕೊಳ್ಳಲು ಎಸ್‌ಎಸ್‌ಎಫ್ ಕೆಲಸ ಮಾಡಬೇಕು. ತಮ್ಮ ಶಕ್ತಿ, ಸಂಘಟನೆಯನ್ನು ಇದಕ್ಕಾಗಿ ಮುಡಿಪಾಗಿಟ್ಟು ಅಭಿವೃದ್ಧಿ ದಿಕ್ಕಿನಲ್ಲಿ ದೇಶವನ್ನು ಮುನ್ನಡೆಸುವ ರೀತಿಯಲ್ಲಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು’ ಎಂದು ಕರೆ ನೀಡಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಗ್ರಾಂಡ್ ಮುಫ್ತಿ ಆಫ್ ಇಂಡಿಯಾ ಶೇಖ್ ಅಬೂಬಕ್ಕರ್ ಅಹಮದ್, ಕೇರಳ ಮುಸ್ಲಿಂ ಜಮಾತೆ ಪ್ರಧಾನ ಕಾರ್ಯದರ್ಶಿ ಸಯ್ಯದ್ ಖಲೀಲುಲ್ ಬುಖಾರಿ ತಂಗಲ್, ವಕ್ಫ್ ಮಂಡಳಿ ಅಧ್ಯಕ್ಷ ಅನ್ವರ್ ಬಾಷಾ, ಮಾಜಿ ಅಧ್ಯಕ್ಷ ಶಾಫಿ ಸಾದಿ, ಇದ್ದರು.

ಸಮಾವೇಶದಲ್ಲಿ ಸೇರಿದ್ದ ಜನ —ಪ್ರಜಾವಾಣಿ ಚಿತ್ರ

‘ಮದರಸ ಮಂಡಳಿ ಸ್ಥಾಪನೆಗೆ ಚಿಂತನೆ’

‘ರಾಜ್ಯದಲ್ಲೂ ಮದರಸ ಮಂಡಳಿ ಸ್ಥಾಪನೆಗೆ ಚಿಂತನೆ ನಡೆದಿದೆ’ ಎಂದು ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಕೇರಳದಲ್ಲಿ ಮದರಸ ಶಿಕ್ಷಣ ಎಲ್ಲರಿಗೂ ಮಾದರಿ. ನಮ್ಮ ರಾಜ್ಯದಲ್ಲೂ ಮದರಸಗಳಲ್ಲಿ ಕನ್ನಡ ಕಲಿಸಲು ತೀರ್ಮಾನಿಸಲಾಗಿದೆ’ ಎಂದರು.

ಎಸ್‌ಎಸ್‌ಎಫ್ ರಾಜ್ಯ ಘಟಕದ ಅಧ್ಯಕ್ಷ ಸೂಫಿಯಾನ್ ಸಖಾಫಿ ಮಾತನಾಡಿ, ‘ನಮ್ಮ ಸಂಘದ ಸದಸ್ಯರು ಸಮಾಜಕ್ಕೆ ಮಾರಕ ಆಗುವ ಯಾವುದೇ ಚಟುವಟಿಕೆಯಲ್ಲಿ ಭಾಗವಹಿಸಿದ ಉದಾಹರಣೆ ಇಲ್ಲ. ಸಂಘ ಸಾವಿರಾರು ಮದರಸ ನಡೆಸುತ್ತಿದ್ದು, ಶಿಕ್ಷಣಕ್ಕೆ ಆದ್ಯತೆ ನೀಡುತ್ತಿದೆ’ ಎಂದರು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ : ಇತಿಹಾಸ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

ಹಿಂದಿನ ಪ್ರಶ್ನೆಪತ್ರಿಕೆಯಿಂದ

6) 'ದ್ವಿ ಪ್ರಭುತ್ವ' ಪದ್ಧತಿ ಎಂದರೇನು?

ಉತ್ತರ:- ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು ಹಾಗೂ ನವಾಬರು ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಇದನ್ನೇ 'ದ್ವಿ ಪ್ರಭುತ್ವ' ಎನ್ನುವರು. (ಏಪ್ರಿಲ್ 2017 ವಾರ್ಷಿಕ ಪರೀಕ್ಷೆ)

II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಭಾರತದ ಯಾವೆಲ್ಲಾ ಪದಾರ್ಥಗಳಿಗೆ ಯುರೋಪಿನಲ್ಲಿ ಅಪಾರ ಬೇಡಿಕೆ ಇತ್ತು?

ಉತ್ತರ:- ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ಜೀರಿಗೆ, ದಾಲ್ಚಿನ್ನಿ, ಏಲಕ್ಕಿ, ಶುಂಠಿ ಮುಂತಾದ ಉತ್ಪನ್ನಗಳಿಗೆ ಯುರೋಪಿನಲ್ಲಿ ಅಪಾರ ಬೇಡಿಕೆ ಇತ್ತು.

2) `ಕಾನ್‌ಸ್ಟಾಂಟಿನೋಪಲ್ ಅಂತರರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು'. ಈ ಹೇಳಿಕೆಯನ್ನು ಸಮರ್ಥಿಸಿ

ಉತ್ತರ:-. ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವ ರೋಮನ್ (ಬೈಜಾಂಟಿಯನ್) ಸಾಮ್ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು. ಅಲ್ಲಿಂದ ಇಟಲಿಯ (ರೋಮನ್ ಸಾಮ್ರಾಜ್ಯದ ಭಾಗ) ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು. ಹೀಗೆ ಕಾನ್‌ಸ್ಟಾಂಟಿನೋಪಲ್ ಅಂತರರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತು.

3) ಪ್ರಾರಂಭದಲ್ಲಿ ಭಾರತದೊಂದಿಗೆ ಯುರೋಪಿಯನ್ನರ ವ್ಯಾಪಾರ ಹೇಗೆ ನಡೆಯುತ್ತಿತ್ತು?

ಉತ್ತರ:- ಭಾರತದ ಸಾಂಬಾರು ಪದಾರ್ಥಗಳನ್ನು ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳಿಗೆ ರಫ್ತು ಮಾಡುವ ಮೂಲಕ ಯುರೋಪಿಯನ್ನರೊಂದಿಗೆ (ಪ್ರಾರಂಭದಲ್ಲಿ) ವ್ಯಾಪಾರ ನಡೆಯುತ್ತಿತ್ತು. ವಿಶೇಷವಾಗಿ ಮೆಣಸು, ಶುಂಠಿ ಮೊದಲಾದ ವಸ್ತುಗಳಿಗೆ ಯುರೋಪಿನಲ್ಲಿ ಬಹಳ ಬೇಡಿಕೆಯಿತ್ತು.

4) ಮಧ್ಯಕಾಲೀನ ಇತಿಹಾಸದ ಸಮಯದಲ್ಲಿ ಯುರೋಪ್ ಮತ್ತು ಏಷ್ಯಾದ ನಡುವಿನ ವ್ಯಾಪಾರಗಳು ಹೇಗೆ ನಡೆಯುತ್ತಿದ್ದವು?

ಉತ್ತರ:- ಏಷ್ಯಾದ ಸರಕುಗಳನ್ನು ಅರಬ್ ವರ್ತಕರು ಪೂರ್ವ ರೋಮನ್ (ಬೈಜಾಂಟಿಯನ್) ಸಾಮ್ರಾಜ್ಯದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರಕ್ಕೆ ತಲುಪಿಸುತ್ತಿದ್ದರು. ಅಲ್ಲಿಂದ ಇಟಲಿಯ (ರೋಮನ್ ಸಾಮ್ರಾಜ್ಯದ ಭಾಗ) ವರ್ತಕರು ಅವುಗಳನ್ನು ಕೊಂಡು ಯುರೋಪಿನ ದೇಶಗಳಲ್ಲಿ ಮಾರುತ್ತಿದ್ದರು

5) ಯೂರೋಪಿಯನ್ ರಾಷ್ಟ್ರಗಳಲ್ಲಿ ಭಾರತದ ಯಾವೆಲ್ಲಾ ವಸ್ತುಗಳಿಗೆ ಬಹಳ ಬೇಡಿಕೆಯಿತ್ತು?

ಉತ್ತರ:- ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ದಾಲ್ಚಿನಿ, ಏಲಕ್ಕಿ, ಶುಂಠಿ ಮೊದಲಾದ ವಸ್ತುಗಳಿಗೆ ಯೂರೋಪಿನಲ್ಲಿ ಬಹಳ ಬೇಡಿಕೆಯಿತ್ತು.

6) ಮಧ್ಯಕಾಲೀನ ಇತಿಹಾಸದಲ್ಲಿ ಏಷ್ಯಾ ದೇಶಗಳ ವ್ಯಾಪಾರದ ಮೇಲೆ ಅರಬ್ಬರು ಏಕಸ್ವಾಮ್ಯ ಸಾಧಿಸಿದ್ದರೆ, ಯುರೋಪಿನ ದೇಶಗಳ ವ್ಯಾಪಾರದ ಮೇಲೆ ಯಾವ ದೇಶದ ವರ್ತಕರು ಏಕಸ್ವಾಮ್ಯ ಸಾಧಿಸಿದ್ದರು?

ಉತ್ತರ:- ಇಟಲಿ

7) ಯಾವ ಕಾರಣಕ್ಕಾಗಿ ಭಾರತದೊಡನೆ ವ್ಯಾಪಾರವಹಿವಾಟು ನಡೆಸಲು ಯೂರೋಪಿಯನ್ನರಿಗೆ ಹೊಸ ಜಲಮಾರ್ಗ ಕಂಡುಹಿಡಿಯಬೇಕಾಯಿತು? ಹಾಗೂ ಯಾವುದು ಇವರ ನೆರವಿಗೆ ಬಂದವು?

ಉತ್ತರ:- ಭಾರತ (ಏಷ್ಯಾ) ಮತ್ತು ಯುರೋಪ್ ನಡುವಿನ ವ್ಯಾಪಾರ ಮತ್ತು ವ್ಯವಹಾರಗಳು ಕಾನ್‌ಸ್ಟಾಂಟಿನೋಪಲ್ ನಗರದ ಮೂಲಕ ನಡೆಯುತ್ತಿತ್ತು. 1453ರಲ್ಲಿ ಆಟೋಮಾನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು. ಇದರಿಂದಾಗಿ ಆ ನಗರವನ್ನು ಸಂಧಿಸುವ ಎಲ್ಲಾ ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಹೋದವು. ಹೊಸದಾಗಿ ಸಿಕ್ಕ ಅವಕಾಶದಿಂದ ಟರ್ಕರು ಈ ಮಾರ್ಗದ ವ್ಯಾಪಾರದ ಮೇಲೆ ತೀವ್ರತರದ ತೆರಿಗೆಗಳನ್ನು ವಿಧಿಸತೊಡಗಿದರು. ಪರಿಣಾಮವಾಗಿ ವರ್ತಕರಿಗೆ ಈ ಮಾರ್ಗದ ವ್ಯಾಪಾರವು ಲಾಭದಾಯಕವಾಗಿ ಪರಿಣಮಿಸಲಿಲ್ಲ. ಇದೇ ವೇಳೆ ಇಟಲಿಯ ವರ್ತಕರ ಏಕಸ್ವಾಮ್ಯವನ್ನು ಮುರಿಯಲು ಸ್ಪೇನ್, ಪೋರ್ಚುಗಲ್ ಮೊದಲಾದ ಯುರೋಪಿನ ದೇಶಗಳ ರಾಜರು ಹೊಸ ಸಮುದ್ರ ಮಾರ್ಗಗಳನ್ನು ಹುಡುಕಲು ಸಾಹಸಿ ನಾವಿಕರನ್ನು ಪ್ರೋತ್ಸಾಹಿಸಲಾರಂಭಿಸಿದರು. ಇದಕ್ಕೆ ಪೂರಕವಾಗಿ ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ಆಸ್ಟ್ರೋಲೋಬ್ (ನಕ್ಷತ್ರ ಉನ್ನತಿ ಮಾಪನ), ಸಿಡಿಮದ್ದು, ಮೊದಲಾದವುಗಳು ನೆರವಿಗೆ ಬಂದವು.

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಎಸ್ಸೆಸ್ಸೆಲ್ಸಿ

8) 1498ರಲ್ಲಿ ಭಾರತಕ್ಕೆ ವ್ಯಾಪಾರದ ಉದ್ದೇಶಕ್ಕಾಗಿ ಬಂದಿಳಿದ ಯುರೋಪಿಯನ್ನರಲ್ಲಿ ಮೊದಲಿಗರು ಯಾರು?

ಉತ್ತರ:- 1498ರಲ್ಲಿ ಭಾರತಕ್ಕೆ ವ್ಯಾಪಾರದ ಉದ್ದೇಶಕ್ಕಾಗಿ ಬಂದಿಳಿದ ಯುರೋಪಿಯನ್ನರಲ್ಲಿ ಮೊದಲಿಗರೆಂದರೆ ಪೋರ್ಚುಗೀಸ್ ನಾವಿಕ ವಾಸ್ಕೊಡಗಾಮ .

9) ಭಾರತಕ್ಕೆ ಪರ್ಯಾಯ ಮಾರ್ಗದ (ಜಲ ಮಾರ್ಗದ) ಮೂಲಕ. ಪೋರ್ಚುಗೀಸ್ ನಾವಿಕ ಬಂದುದರಿಂದ ಆದ ಪರಿವರ್ತನೆ ಏನು?

ಉತ್ತರ:- ಭಾರತಕ್ಕೆ ಪರ್ಯಾಯ ಮಾರ್ಗದ (ಜಲ ಮಾರ್ಗದ) ಮೂಲಕ ಪೋರ್ಚುಗೀಸ್ ನಾವಿಕ ಬಂದುದರಿಂದ ಅವರಿಂದ ಪ್ರೇರಣೆಗೊಂಡ ಯುರೋಪಿನ ಡಚ್, ಇಂಗ್ಲಿಷ್ ಮತ್ತು ಫ್ರೆಂಚ್ ವ್ಯಾಪಾರಿ ಕಂಪನಿಗಳು ಭಾರತಕ್ಕೆ ಬಂದವು. ಈ ಬೆಳವಣಿಗೆಯು ಕಾಲಾನುಕ್ರಮದಲ್ಲಿ ಭಾರತವು ವಸಾಹತು ರಾಷ್ಟ್ರವಾಗಿ ಪರಿವರ್ತನೆಗೊಳ್ಳಬೇಕಾಯಿತು. ಭಾರತವನ್ನು ವಸಾಹತುವಾಗಿ ಪರಿವರ್ತಿಸಿದ ಯೂರೋಪಿಯನ್ ರಾಷ್ಟ್ರಗಳ ಚರಿತ್ರೆಯಲ್ಲಿಯೂ ಸಹ ನಿರ್ಣಾಯಕ ಬದಲಾವಣೆಗಳಾದವು. ಈ ಮೊದಲಾದ ಪರಿವರ್ತನೆಯನ್ನು ಇತಿಹಾಸದಲ್ಲಿ ನೋಡುವಂತಾಯಿತು.

10) ಜಲಮಾರ್ಗದ ಮೂಲಕ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಮೊಟ್ಟಮೊದಲ ಯುರೋಪಿಯನ್ನರು ಪೋರ್ಚುಗೀಸರಾದರೆ ಭಾರತವನ್ನು ತೊರೆದ ಕೊನೆಯ ಯುರೋಪಿಯನ್ನರು ಯಾರು?

ಉತ್ತರ:- ಪೋರ್ಚುಗೀಸರು

11) ಪೋರ್ಚುಗೀಸರ ಮೊಟ್ಟಮೊದಲ ವೈಸರಾಯ್ ಆಗಿ ಯಾರು ಭಾರತಕ್ಕೆ ಬಂದರು.?

ಉತ್ತರ:- ಫ್ರಾನ್ಸಿಸ್ಕೊ ಡಿ ಆಲ್ಮೇಡ

12) ಭೂಮಿಯ ಮೇಲಿನ ಅಧಿಪತ್ಯಕ್ಕೆ ಬದಲು ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ 'ನೀಲಿ ನೀರಿನ ನೀತಿ' (Blue Water Policy)ಯನ್ನು ಜಾರಿಗೆ ತಂದವರು ಯಾರು?

ಉತ್ತರ:- ಫ್ರಾನ್ಸಿಸ್ಕೊ ಡಿ ಆಲ್ಮೇಡ

13) ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕರೆಂದು ಪ್ರಸಿದ್ಧಿ ಪಡೆದವರು ಯಾರು?

ಉತ್ತರ:- ಆಲ್ಫೋನ್ಸೊ-ಡಿ-ಅಲ್ಬುಕರ್ಕ್

14) 1510ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು ಯಾರು?

ಉತ್ತರ:- ಆಲ್ಫೋನ್ಸೊ-ಡಿ-ಅಲ್ಬುಕರ್ಕ್

(ಮುಂದುವರಿಯುವುದು....)

II PUC CHEMISTRY

Types of Solutions

1. ***Write a brief note on solution.***

Ans:- A solution may contain two or more substances also called components or constituents. A solution which has two components is known as binary solution (e.g a solution of NaCl in water) while a solution with three components is called ternary solution (e.g. a solution of NaCI and KCI in water). Similarly even more than three components may also be present.

2. Express the Concentration of Solutions

Ans:- Concentration of a solution implies the amount of the solute present in a given quantity of the solution or the solvent. Thus, while expressing the concentration of a solution, only the relative amounts of the components are considered. The concentration of a binary solution can be expressed in a number of ways.

(i) Mass percentage (w/w): The mass percentage of a component of a solution is defined as:

Mass % of a component =

$$= \frac{\text{Mass of the component in the solution}}{\text{Total mass of the solution}} \times 100$$

(ii) Volume percentage (V/V): The volume percentage is defined as:

$$\text{Volume \% of a component} = \frac{\text{Volume of the component}}{\text{Total volume of solution}} \times 100$$

(iii) Mass by volume percentage (w/V): It is commonly used in medicine and pharmacy. It is mass by volume percentage.

It is the mass of solute dissolved in 100 mL of the solution.

(iv) Parts per million: When a solute is present in trace quantities, it is convenient to express concentration in parts per million (ppm) and is defined as:

Parts per million =

$$\frac{\text{Number of parts of the component}}{\text{Total number of parts of all components of the solution}} \times 10^6$$

(v) Mole fraction: Commonly used symbol for mole fraction is x and subscript used on the right hand side of x denotes the component. It is defined as:

Mole fraction of a component =

$$\frac{\text{Number of moles of the component}}{\text{Total number of moles of all the components}}$$

Mole fraction unit is very useful in relating some physical properties of solutions, say vapour pressure with the concentration of the solution and quite useful in describing the calculations involving gas mixtures.

vi) Molarity: Molarity (M) is defined as number of moles of solute dissolved in one litre (or one cubic decimetre) of solution,

$$\text{Molarity} = \frac{\text{Moles of solute}}{\text{Volume of solution in litre}}$$

= Moles of solute Molarity Volume of solution in litre (2.8)

(vii) Molality: Molality (m) is defined as the number of moles of the solute per kilogram (kg) of the solvent and is expressed as:

$$\text{Molality (m)} = \frac{\text{Moles of solute}}{\text{Mass of solvent in kg}}$$

Multiple Choice Questions:-

1. Which of the following units is useful in relating concentration of solution with its vapour pressure?

a) mole fraction b) parts per million
c) mass percentage d) molality

Ans:- a

2. On dissolving sugar in water at room temperature, solution feels cool to touch. Under which of the following cases dissolution of sugar will be most rapid?

a) Sugar crystals in cold water.
b) Sugar crystals in hot water.
c) Powdered sugar in cold water.
d) Powdered sugar in hot water.

Ans:- d

3. At equilibrium the rate of dissolution of a solid solute in a volatile liquid solvent is...............

a) less than the rate of crystallization
b) greater than the rate of crystallization
c) equal to the rate of crystallization
d) Zero

Ans:- C

4. A breaker contains a solution of substance 'A'. Precipitation of substance 'A' takes place when small amount of 'A' is added to the solution. The solution is -

a) saturated b) supersaturated
c) unsaturated d) concentrated

Ans:- b

5. Maximum amount of a solid solute that can be dissolved in a specified amount of a given liquid solvent does *not* depend upon ....

a) Temperature b) Nature of solute
c) Pressure d) Nature of solvent

Ans:- C

6. Low concentration of oxygen in the blood and tissues of people living at high altitude is due to ....

a) low temperature
b) low atmospheric pressure
c) high atmospheric pressure
d) both low temperature and high atmospheric pressure.

Ans:- b

7. Considering the formation, breaking and strength of hydrogen bond, predict which of the following mixtures will show a positive deviation from Raoult's law?

a) Methanol and acetone
b) Chloroform and acetone
c) Nitric acid and water
d) Phenol and aniline.

Ans:- a

8. Colligative properties depend on

a) the nature of the solute particles dissolved in solution.
b) the number of solute particles in solution.
c) the physical properties of the solute particles dissolved in solution.
d) the nature of solvent particles.

Ans:-b

9. In comparison to a 0.01 M solution of glucose, the depression in freezing point of a 0.01M $MgCl_2$ solution is.........

a) the same b) about twice
c) about 3 times d) about 6 times

Ans:- C

10. An unripe mango placed in a concentrated salt solution to prepare pickles, shrivels because............

a) it gains water due to osmosis,
b) it loses water due to reverse osmosis.
c) it gains water due to reverse osmosis.
d) it loses water due to osmosis.

Ans:- d

11. At a given temperature, osmotic pressure of a concentrated solution of a substance

a) is higher than that of a dilute solution.
b) is lower than that of a dilute solution.
c) is same as that of a dilute solution.
d) cannot compared with osmotic pressure of dilute solution.

Ans:- a

(Contd...)

ವೈವಿಧ್ಯಮಯ ಅಣಬೆ (ಚಿತ್ರ : ಲೇಖಕರದ್ದು)

ಅಣಬೆಗಳ ಲೋಕ

ಅಣಬೆಗಳಲ್ಲಿ 14 ಸಾವಿರ ಪ್ರಭೇದಗಳನ್ನು ಗುರುತಿಸಲಾಗಿದೆ. ಬಣ್ಣ, ಗಾತ್ರ, ಆಕಾರದಲ್ಲಿ ವೈವಿಧ್ಯಮಯವಿದ್ದು, ಕೆಲವು ವಿಷಯುಕ್ತ ಅಣಬೆಗಳಿರುವ ಕಾರಣ ಜನರಲ್ಲಿ ಇವುಗಳ ಬಗ್ಗೆ ಕುತೂಹಲವಿದೆ.

ಡಾ. ಎಸ್. ಶಿಶುಪಾಲ

ಜೀವಾನ್ವೇಷಣೆ

ಮುಂಗಾರಿನ ಮಳೆ ಬಿದ್ದೊಡನೆ ಗೊಬ್ಬರದ ಗುಂಡಿ, ಗೆದ್ದಲಿನ ಹುತ್ತ, ಮುರಿದು ಬಿದ್ದ ಮರ, ಉದುರಿದ ಎಲೆಗಳ ಸಂದು-ಗೊಂದು, ತೇವಾಂಶವಿರುವ ಮಣ್ಣು ಮುಂತಾದ ಕಡೆಗಳಲ್ಲಿ ಕಾಣುವ ನಾಯಿಕೊಡೆಗಳನ್ನು ಅಣಬೆ (mushroom) ಎನ್ನುವರು. ಮಳೆ ಬರುವವರೆಗೂ ಕಾಲಗರ್ಭದಲ್ಲಿ ಅಡಗಿರುವ ಈ ಜೀವಿಗಳು ಎಲ್ಲಿಂದಲೋ ತಕ್ಷಣ ಉದ್ಭವವಾದಂತೆ ಕಂಡುಬರುತ್ತವೆ.

ಬಣ್ಣ, ಆಕಾರ, ಗಾತ್ರದಲ್ಲಿ ವೈವಿಧ್ಯಮಯ. ಕೆಲವು ವಿಷಯುಕ್ತವಾಗಿರುವುದರಿಂದ ಜನರು ಇವುಗಳ ಬಗ್ಗೆ ವಿಶೇಷ ಕುತೂಹಲ ಹೊಂದಿದ್ದಾರೆ.

ಅಣಬೆಗಳು ಶಿಲೀಂಧ್ರಗಳೆಂಬ (Fungi) ವಿಶೇಷ ಗುಂಪಿಗೆ ಸೇರಿದ ಜೀವಿಗಳು. ಇವು ಸಾವಯವ ವಸ್ತುಗಳಲ್ಲಿ ಬೆಳೆಯುವ ಕೊಳೆತಿನಿಗಳು ಅಥವಾ ಪೂತಿಭಕ್ಷಕರು (Saprophytes). ಕೊಳೆಯುತ್ತಿರುವ ವಸ್ತುಗಳ ನಡುವೆ ಕಣ್ಣಿಗೆ ಕಾಣದಂತೆ ಹತ್ತಿಯ ಎಳೆಯಂತಹ ಶಿಲೀಂಧ್ರದ ತಂತುಗಳ(Hypha) ಜಾಲದ ರಚನೆಯಿರುವ ಕವಕಜಾಲ (Mycelium) ವಾಗಿರುತ್ತದೆ. ಕಣ್ಣಿಗೆ ಕಾಣದ ಈ ಜಾಲವು ಭೂಮಿಯ ಮಣ್ಣಿನೊಳಗೆ ಅಥವಾ ಮರದ ಬೊಡ್ಡೆಯೊಳಗೆ ಹರಡಿರುತ್ತದೆ.

ಮಳೆ ಬಿದ್ದೊಡನೆ ಸಾಕಷ್ಟು ತೇವಾಂಶ ಸಿಗುವುದರಿಂದ ಇವುಗಳ ಶರೀರ ವಿಕಸನಗೊಂಡು ಸಂತಾನೋತ್ಪತ್ತಿಗಾಗಿ ಮಾರ್ಪಾಡಾಗುವ ಫಲಕಾಯವೇ (Fruiting body) ಕಣ್ಣಿಗೆ ಕಾಣುವ ಅಣಬೆ. ಫಲಕಾಯಗಳ ಗಾತ್ರ ಮತ್ತು ಆಕಾರಗಳನ್ನು ಗಮನಿಸಿ ಅಣಬೆಗಳನ್ನು ಉನ್ನತ ಶಿಲೀಂಧ್ರಗಳ ಗುಂಪಿಗೆ ಸೇರಿಸಲಾಗಿದೆ. ಫಲಕಾಯಗಳಲ್ಲಿ ಉತ್ಪಾದಿಸುವ ಲಕ್ಷಗಟ್ಟಲೇ ಬೀಜಕಣಗಳಿಂದ (Spores) ಅವುಗಳ ಸಂತಾನಭಿವೃದ್ಧಿಯಾಗುವುದು.

ಅಣಬೆಗಳ ವೈವಿಧ್ಯ:ವಿಶ್ವದಲ್ಲಿ ಅಂದಾಜು 14 ಸಾವಿರ ಅಣಬೆ ಪ್ರಭೇದಗಳನ್ನು ಗುರುತಿಸಲಾಗಿದೆ. ಅಣಬೆಗಳ ಫಲಕಾಯವು ಒಂದು ಪ್ರಕೃತಿಯ ವಿಶಿಷ್ಟ ಸೃಷ್ಟಿಯೇ ಸರಿ. ಅವುಗಳು ಸಣ್ಣ ಸೂಜಿ ಗಾತ್ರದಿಂದ ಹಿಡಿದು ಹಸುವಿನ ತಲೆಗಿಂತ ದೊಡ್ಡದಿರಬಹುದು. ಕೆಲವು ಅಣಬೆಗಳು ಮೂರು ಅಡಿಗಳಿಗಿಂತಲೂ ಹೆಚ್ಚು ಎತ್ತರವಿರುವುದನ್ನು ದಾಖಲಿಸಲಾಗಿದೆ. ಕೆಲವು ಅಣಬೆಗಳು ಕೊಡೆ ಆಕಾರದಲ್ಲಿದ್ದರೆ ಮತ್ತೆ ಕೆಲವು ಮಾಂಸದ ಮುದ್ದೆಯಂತೆ ಕಾಣುತ್ತವೆ. ಅಚ್ಚ ಬಿಳಿ ಬಣ್ಣದಿಂದ ಹಿಡಿದು ರಕ್ತಕೆಂಪು ಬಣ್ಣದವರೆಗೆ ವಿವಿಧ ಬಣ್ಣಗಳನ್ನು ಕಾಣಬಹುದು. ಕೆಲವು ಅಣಬೆಗಳು ಜೈವಿಕ ಪ್ರಕಾಶ (Bioluminescence)ವನ್ನು ಹೊಂದಿರುತ್ತವೆ. ಕರ್ನಾಟಕದಲ್ಲಿ ಪಶ್ಚಿಮ ಘಟ್ಟಗಳಲ್ಲಿ ಹೆಚ್ಚು ಅಣಬೆ ವೈವಿಧ್ಯವನ್ನು ಕಾಣಬಹುದು.

ಪರಿಸರದಲ್ಲಿ ಅಣಬೆಗಳ ಪಾತ್ರ: ತಮ್ಮ ಅಪೂರ್ವ ಕಿಣ್ವಗಳಿಂದ ಸಾವಯವ ರಾಸಾಯನಿಕಗಳನ್ನು ಜೀರ್ಣಿಸುವ ಅಣಬೆಗಳು ಮಣ್ಣನ್ನು ಫಲವತ್ತುಗೊಳಿಸುತ್ತವೆ. ಪರಿಸರದಲ್ಲಿ ಲಭ್ಯವಿರುವ ಸಸ್ಯ ಮತ್ತು ಪ್ರಾಣಿಜನ್ಯ ಸಾವಯವ ವಸ್ತುಗಳನ್ನು ಕರಗಿಸಿ ಅಲ್ಲಿನ ಪೋಷಕಾಂಶಗಳನ್ನು ತಾವು ಹೀರಿಕೊಂಡು ಸಸ್ಯಗಳಿಗೂ ಹಂಚುತ್ತವೆ. ಕೆಲವು ಅಣಬೆ ಪ್ರಭೇದಗಳು ಮರಗಳ ಬೇರುಗಳ ಜೊತೆಗೆ ಸೇರಿಕೊಂಡು ಶಿಲೀಂಧ್ರ ಬೇರು (Mycorrhiza) ಎಂಬ ಸಹಜೀವನ ನಡೆಸುತ್ತವೆ. ಸಾರರಹಿತ ಮಣ್ಣಿನಲ್ಲಿ ಮರಗಳು ಚೆನ್ನಾಗಿ ಬೆಳೆಯಲು ಈ ಅಣಬೆಗಳು ಅವಶ್ಯಕವಾಗಿದ್ದು ಅರಣ್ಯೀಕರಣಕ್ಕೆ ಸಹಕಾರಿ. ಮಳೆಕಾಡು ಮತ್ತು ಕೃಷಿ ಭೂಮಿಯಲ್ಲಿ ಲಭ್ಯವಿರುವ ಅಪಾರ ಪ್ರಮಾಣದ ಸಾವಯವ ವಸ್ತುಗಳ ಜೀರ್ಣಿಸುವ ಕ್ರಿಯೆಯಲ್ಲಿ ಮುಖ್ಯವಾಗಿ ಪಾಲುಗೊಂಡು ಜೈವಿಕ ಭೂ ರಸಾಯನ ಚಕ್ರ (Biogeochemical cycle) ದಲ್ಲಿ ವಿಭಜಕ (Decomposers)ಗಳ ಪಾತ್ರ ವಹಿಸುತ್ತವೆ. ಕೆಲವು ಪ್ರಭೇದದ ಸಸ್ಯಗಳಿಗೆ ರೋಗಕಾರಕಗಳು ಆಗಿವೆ.

ಅಣಬೆಗಳಲ್ಲಿನ ಪೋಷಕಾಂಶಗಳು:ಅಣಬೆಗಳಲ್ಲಿ ಅತೀ ಹೆಚ್ಚಿನ ಪ್ರೊಟೀನ್ ಅಂಶಗಳಿವೆ. ಅವಶ್ಯಕವಾದ ಬಹುತೇಕ ಎಲ್ಲಾ ರೀತಿಯ ಅಮೈನೊಅಮ್ಲಗಳು ಲಭ್ಯವಿರುತ್ತವೆ. ನಾರಿನಂಶ, ವಿಟಮಿನ್-ಡಿ, ಪೊಟಾಸಿಯಂ, ಕಬ್ಬಿಣ, ತಾಮ್ರ, ಮ್ಯಾಂಗನೀಸ್ ಮುಂತಾದ ಲವಣಾಂಶಗಳು ಹೆಚ್ಚಿನ ಪ್ರಮಾಣದಲ್ಲಿವೆ. ಲೊವಸ್ಟಾಟಿನ್, ಲೆಂಟಿನಾನ್, ಲೆಕ್ಟಿನ್, ರ್‍ಗೊಯೊನಿನ್, ಕಾರ್ಡಿಸೈಪಿನ್ ಮುಂತಾದ ಉಪಯುಕ್ತ ಔಷಧಿ ಅಂಶಗಳಿವೆ. ಕೊಬ್ಬು-ರಹಿತ ಆಹಾರವಾಗಿಯೂ ಬಳಕೆಯಲ್ಲಿದೆ. ಗುಡ್ಡಗಾಡು ಜನರು ತಿನ್ನುವ ಅಣಬೆಗಳನ್ನು ಪತ್ತೆ ಹಚ್ಚುವಲ್ಲಿ ನಿಷ್ಣಾತರು. ಈ ವಿಷಯವನ್ನು ಅವರು ತಲತಲಾಂತರಗಳಿಂದ ಅರಿತಿದ್ದಾರೆ. ಈ ಉಪಯುಕ್ತ ಜ್ಞಾನವನ್ನು ಅಣಬೆ ಶಾಸ್ತ್ರಜ್ಞರು ದಾಖಲಿಸಿ ಬಳಸಿಕೊಳ್ಳಬೇಕಾದ ಅಗತ್ಯವಿದೆ.

ಅಣಬೆ ಕೃಷಿ: ಕೆಲವು ಅಣಬೆ ಪ್ರಭೇದಗಳು ತಿನ್ನಲು ಯೋಗ್ಯವಾಗಿದ್ದರೆ ಮತ್ತೆ ಕೆಲವು ವಿಷಪೂರಿತವಾಗಿದ್ದು ತಿಂದರೆ ಮಾರಣಾಂತಿಕವಾಗಬಲ್ಲದು. ತಿನ್ನುವ ಕೆಲವು ಪ್ರಭೇದಗಳನ್ನು ಗುರುತಿಸಿ, ಹುಲ್ಲು ಮತ್ತು ಇತರೆ ಸಾವಯವ ವಸ್ತುಗಳನ್ನು ಬಳಸಿ ಅಣಬೆ ಕೃಷಿ ಮಾಡಲಾಗುತ್ತದೆ. ದೊಡ್ಡ ಹೋಟೆಲ್‌ಗಳಲ್ಲಿ ವಿವಿಧ ಸ್ವಾದಿಷ್ಟ ಅಣಬೆ ಖಾದ್ಯಗಳನ್ನು ತಯಾರಿಸಿ ಜನರನ್ನು ಆಕರ್ಷಿಸಲಾಗುತ್ತಿದೆ.

(ಲೇಖಕರು: ದಾವಣಗೆರೆ ವಿಶ್ವವಿದ್ಯಾಲಯದ ಸೂಕ್ಷ್ಮಜೀವಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು)

ಕೌಶಲ ಆಧರಿಸಿ ವೃತ್ತಿ ಯೋಜನೆ ತಯಾರಿಸಿ



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ನಾನು ಕಳೆದ ವರ್ಷ ಬಿ.ಎಸ್ಸಿ ಮುಗಿಸಿ ಪಿಎಸ್ಐ ಪರೀಕ್ಷೆ ಬರೆಯಲು ತಯಾರಿ ನಡೆಸಿದ್ದೇನೆ. ಆದರೆ, ಪಿಎಸ್ಐ ಅಧಿಸೂಚನೆ ಇನ್ನೂ ಪ್ರಕಟವಾಗಿಲ್ಲ. ಇದರ ನಡುವೆ, ಎಂಎಸ್ಸಿ ಓದುವುದೋ ಬೇಡವೋ ಗೊತ್ತಿಲ್ಲ. ದಯವಿಟ್ಟು ಸಲಹೆ ನೀಡಿ.

ಚಂದನ್, ಬೆಂಗಳೂರು.

ನಿಮ್ಮ ವೃತ್ತಿ ಮತ್ತು ವೈಯಕ್ತಿಕ ಬದುಕಿನ ಗುರಿಗಳೇನು ಎಂದು ಮೊದಲು ಸ್ಪಷ್ಟವಾಗಬೇಕು. ಪಿಎಸ್ಐ ವೃತ್ತಿಯ ಅವಕಾಶಗಳು, ಎಂಎಸ್ಸಿ ನಂತರದ ವೃತ್ತಿಯ ಅವಕಾಶಗಳು ಹಾಗೂ ಆಯಾ ವೃತ್ತಿಗಳ ಯಶಸ್ಸಿಗೆ ಬೇಕಾದ ಜ್ಞಾನ, ಪ್ರಾಥಮಿಕ ಮತ್ತು ವೃತ್ತಿಪರ ಕೌಶಲಗಳು ವಿಭಿನ್ನವಾಗಿವೆ. ಆದ್ದರಿಂದ, ನಿಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯಗಳು, ಕೌಶಲಗಳ ಆಧಾರದ ಮೇಲೆ ವೃತ್ತಿಯೋಜನೆಯನ್ನು ಮಾಡಿದರೆ ಮುಂದಿನ ಹಾದಿ ಸ್ಪಷ್ಟವಾಗುತ್ತದೆ. ವೃತ್ತಿಯೋಜನೆ ಮಾಡುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/@ExpertCareerConsultantAuthor ಹೆಚ್ಚಿನ ಮಾರ್ಗದರ್ಶನದ ಅಗತ್ಯವಿದ್ದರೆ, ಖುದ್ದಾಗಿ ಭೇಟಿ ಮಾಡಬಹುದು.

ಇನ್ನಷ್ಟು ಪ್ರಶ್ನೋತ್ತರಕ್ಕಾಗಿ. https://www.prajavani.net/education-career ನೋಡಿ. ❖

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

CMR UNIVERSITY
Private University Estd in Karnataka State by Act No.45 of 2013
BENGALURU
RECOGNISED BY UGC

CREATE THE FUTURE WITH CMRU MASTERS PROGRAMMES

CMRU EDGE
» Academic programmes based on Project-Based Learning approach.
» Industry 4.0-based academic curriculum.
» Assessments & industry-oriented interdisciplinary projects.

MBA
Finance | Marketing | HR | Digital Marketing | Business Analytics Supply Chain Management
2 year Programme (with Dual Specialization)

M.TECH.
CSE | AI
2 year Programme + 1 year Project (Part time-Weekend)

MCA
2 year Programme

Ranked 21st among Emerging B-Schools of India by The Week
Experiential Learning enabled through Industry Partnerships
"Beyond the classroom" learning opportunity through CMRU LEAP initiatives
Industry integrated internships

SCAN FOR MORE DETAILS ABOUT CMRU

PGCET CODES
MBA B150 (HRBR Campus) B395 (Lakeside Campus) B149 (OMBR Campus)
MCA C527 (OMBR Campus) C521 (Lakeside Campus)

200+ LEADING RECRUITERS
Deloitte. SAP ORACLE ANZ BOSCH pwc KPMG ICICI Bank And many more..

ADMISSIONS HELPLINE
93429 00666
admissions@cmr.edu.in | www.cmr.edu.in

Lakeside Campus : Off Hennur-Bagalur Main Road, Chagalahatti, Bengaluru - 562149
City Campus : #2, 3rd C Cross, 6th A Main, HRBR Layout, Bengaluru - 560043
OMBR Campus : No.5, Bhuvanagiri, OMBR Layout, Bengaluru -560043
CMRIT Campus : 132, AECS Layout, ITPL Main Road, Kundalahalli, Bengaluru - 560037

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಉದ್ವೇಗಕ್ಕೆ ಒಳಗಾಗುವುದನ್ನೇ ಸಂತೋಷ ಎಂದು ಹಲವರು ತಿಳಿದಿರುತ್ತಾರೆ. ಆದರೆ ನೀವು ಉದ್ವೇಗಕ್ಕೆ ಒಳಗಾದಾಗ ಶಾಂತಿಯಿಂದ ಇರುವುದಿಲ್ಲ. ನಿಜವಾದ ಸಂತೋಷವು ಶಾಂತಿಯನ್ನು ಆಧರಿಸಿರುತ್ತದೆ.

–ನಾಟ್ ಹಾನ್

ಜಿ20: ಜಾಗತಿಕ ವೇದಿಕೆಯಲ್ಲಿ ಭಾರತದ ವರ್ಚಸ್ಸು ಹೆಚ್ಚಳ

ಜಿ20 ದೇಶಗಳ ಗುಂಪಿನ ಅಧ್ಯಕ್ಷತೆಯನ್ನು ಭಾರತವು ವಹಿಸಿಕೊಂಡ ನಂತರದ ಎಂಟು ತಿಂಗಳಲ್ಲಿ ಆಗಿರುವ ಕೆಲಸಗಳ ಫಲಿತ ರೂಪದಲ್ಲಿ ನವದೆಹಲಿ ಘೋಷಣೆ ಹೊರಬಿದ್ದಿದೆ. ಇದು ಭಾರತದ ವರ್ಚಸ್ಸನ್ನು ಜಾಗತಿಕ ಮಟ್ಟದಲ್ಲಿ ಏರಿಸಿದೆ; ಅಭಿವೃದ್ಧಿ ಹೊಂದುತ್ತಿರುವ ಮತ್ತು ಅಭಿವೃದ್ಧಿ ಹೊಂದಿಲ್ಲದ ದೇಶಗಳ ಧ್ವನಿಯಾಗಿ ಮಾತ್ರವಲ್ಲದೆ, ಜಗತ್ತಿನ 'ದಕ್ಷಿಣ' ಮತ್ತು 'ಉತ್ತರ'ದ ನಡುವೆ ಮಧ್ಯಸ್ತಿಕೆ ವಹಿಸುವ ಸಾಮರ್ಥ್ಯ ಹಾಗೂ ಸಂಯೋಜನಾ ಶಕ್ತಿಯಾಗಿಯೂ ಭಾರತ ಹೊರಹೊಮ್ಮಿದೆ. ಹತ್ತು ಹಲವು ತೊಡಕುಗಳ ನಡುವೆಯೂ ಸಹಮತದ ಘೋಷಣೆ ರೂಪಿಸುವಲ್ಲಿ ಭಾರತ ಯಶಸ್ವಿಯಾಗಿದೆ. ರಷ್ಯಾ ಮತ್ತು ಉಕ್ರೇನ್ ಯುದ್ಧಕ್ಕೆ ಸಂಬಂಧಿಸಿ ಒಮ್ಮತಕ್ಕೆ ಬರಲು ಸಾಧ್ಯವಾಗಿದ್ದರಿಂದ ಸರ್ವ ಸಮ್ಮತಿಯ ಘೋಷಣೆ ಸಾಧ್ಯವಾಗಿದೆ. ರಷ್ಯಾದ ಆಕ್ರಮಣಶೀಲತೆ ಎಂಬುದನ್ನು ಕೈಬಿಟ್ಟು 'ಉಕ್ರೇನ್‌ನಲ್ಲಿನ ಯುದ್ಧ' ಎಂದಷ್ಟೇ ಘೋಷಣೆಯಲ್ಲಿ ಉಲ್ಲೇಖಿಸಲಾಗಿದೆ. ಬಾಲಿಯಲ್ಲಿ ಕಳೆದ ಬಾರಿ ಕೈಗೊಂಡ ಘೋಷಣೆಗಿಂತ ಈ ಬಾರಿಯದ್ದು ಭಿನ್ನವಾಗಿದೆ. 'ಹೆಚ್ಚಿನ ಸದಸ್ಯರು' 'ಅತ್ಯಂತ ಬಲವಾಗಿ ಖಂಡಿಸಿದ್ದಾರೆ' ಎಂಬುದರ ಜೊತೆಗೆ ರಷ್ಯಾದ ಪಾತ್ರವನ್ನು ಕಳೆದ ಬಾರಿ ಉಲ್ಲೇಖಿಸಲಾಗಿತ್ತು. ಜಂಟಿ ಘೋಷಣೆ ಇಲ್ಲದ 2008ರ ನಂತರದ ಮೊದಲ ಜಿ20 ಶೃಂಗಸಭೆ ಈ ಬಾರಿಯದ್ದು ಆಗಬಾರದು ಎಂಬ ಎಚ್ಚರಿಕೆಯನ್ನು ಜಿ20 ಸಂಧಾನಕಾರರು ತೆಗೆದುಕೊಂಡಿದ್ದರು. ಕಳೆದ ವರ್ಷ ಅಧ್ಯಕ್ಷತೆ ವಹಿಸಿದ್ದ ಇಂಡೊನೇಷ್ಯಾ, ಮುಂದಿನ ಅಧ್ಯಕ್ಷತೆ ವಹಿಸಲಿರುವ ಬ್ರೆಜಿಲ್ ಮತ್ತು 2025ರಲ್ಲಿ ಅಧ್ಯಕ್ಷ ಸ್ಥಾನಕ್ಕೆ ಏರಲಿರುವ ದಕ್ಷಿಣ ಆಫ್ರಿಕಾದ ಸಹಾಯ ಇಲ್ಲದೇ ಇದ್ದರೆ ಸಹಮತ ಸಾಧಿಸುವುದು ಸಾಧ್ಯವಾಗುತ್ತಿರಲಿಲ್ಲ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಜೊತೆಗೂಡಿ ಕೆಲಸ ಮಾಡುವ ಇತಿಹಾಸ ಇದೆ ಎಂಬುದರತ್ತ ಸಚಿವರ ಹೇಳಿಕೆಯು ಬೊಟ್ಟು ಮಾಡುತ್ತದೆ. ಬ್ರಿಕ್ಸ್‌ನಲ್ಲಿ ಭಾರತದ ಸಹಭಾಗಿಗಳಾಗಿರುವ ರಷ್ಯಾ ಮತ್ತು ಚೀನಾ ಕೂಡ ಭಾರತದ ಚತುರ ವಿದೇಶಾಂಗ ನೀತಿಗೆ ಮೆಚ್ಚುಗೆ ವ್ಯಕ್ತಪಡಿಸಿರುವುದು ವಿರಳ ವಿದ್ಯಮಾನವೇ ಹೌದು. ಇವೆಲ್ಲದರ ಫಲಿತಾಂಶವಾಗಿ, ಪ್ರಧಾನಿ ನರೇಂದ್ರ ಮೋದಿ ಅವರು ಶೃಂಗಸಭೆಯ ಮೊದಲ ದಿನವೇ ಘೋಷಣೆಯನ್ನು ಪ್ರಕಟಿಸಲು ಸಾಧ್ಯವಾಯಿತು. ರಷ್ಯಾ ಮತ್ತು ಚೀನಾದ ಅಧ್ಯಕ್ಷರು ಗೈರುಹಾಜರಾಗಿದ್ದು ಶೃಂಗಸಭೆಯ ಕೊನೆಯ ಹೊತ್ತಿಗೆ ಮಹತ್ವದ ವಿಚಾರ ಅನಿಸಲೇ ಇಲ್ಲ. ಹಾಗೆ ನೋಡಿದರೆ, ಅವರಿಬ್ಬರ ಅನುಪಸ್ಥಿತಿಯು ಸರ್ವ ಸಮ್ಮತಿ ಸಾಧಿಸುವಲ್ಲಿ ನೆರವೇ ಆಗಿರಬಹುದು.

ಹತ್ತು ಹಲವು ತೊಡಕುಗಳ ನಡುವೆಯೂ ಸಹಮತದ ಘೋಷಣೆ ರೂಪಿಸುವಲ್ಲಿ ಭಾರತ ಯಶಸ್ವಿಯಾಗಿದೆ

55 ದೇಶಗಳನ್ನು ಪ್ರತಿನಿಧಿಸುವ ಸುಮಾರು 3 ಟ್ರಿಲಿಯನ್ ಡಾಲರ್ (ಅಂದಾಜು ₹ 250 ಲಕ್ಷ ಕೋಟಿ) ಆರ್ಥಿಕತೆ ಹೊಂದಿರುವ ಆಫ್ರಿಕಾ ಒಕ್ಕೂಟಕ್ಕೆ ಗುಂಪಿನಲ್ಲಿ ಕಾಯಂ ಸ್ಥಾನ ನೀಡುವಲ್ಲಿ ಯಶಸ್ವಿಯಾಗಿರುವುದು ಭಾರತ ಹೆಮ್ಮೆಪಡಬಹುದಾದ ವಿಚಾರ. ಇನ್ನು ಮುಂದೆ ಜಿ21 ಎಂದು ಕರೆಸಿಕೊಳ್ಳಲಿರುವ ಈ ಗುಂಪು ಹೆಚ್ಚು ಪ್ರಭಾವಿ, ಶಕ್ತಿಶಾಲಿ ಮತ್ತು ಶ್ರೀಮಂತ ದೇಶಗಳ ನಾಯಕತ್ವದ ಗುಂಪು ಎಂಬುದರಿಂದ ಕಡಿಮೆ ಸಂಪತ್ತು ಹೊಂದಿರುವ ದೇಶಗಳಿಗೂ ಪ್ರಾತಿನಿಧ್ಯ ಇರುವ ಗುಂಪಾಗಿ ಪರಿವರ್ತನೆಗೊಂಡಿದೆ. ಈ ಬೆಳವಣಿಗೆಯಿಂದಾಗಿ ಕನಿಷ್ಠಪಕ್ಷ ಸೈದ್ಧಾಂತಿಕವಾಗಿಯಾದರೂ ಅಂತರ ರಾಷ್ಟ್ರೀಯ ಆರ್ಥಿಕ ಸ್ಥಿರತೆ, ಸುಸ್ಥಿರ ಅಭಿವೃದ್ಧಿ, ಹವಾಮಾನ ಬದಲಾವಣೆ ತಡೆಯಂತಹ ಗುರಿಗಳನ್ನು ಹೆಚ್ಚು ಸಮಾನ ರೀತಿಯಲ್ಲಿ ಪರಿಣಾಮಕಾರಿಯಾಗಿ ಸಾಧಿಸುವುದು ಸಾಧ್ಯವಾಗಬೇಕು.

ಭಾರತದ ಅಧ್ಯಕ್ಷತೆಯಲ್ಲಿ ಜಿ20 ಶೃಂಗಸಭೆಯ ಯಶಸ್ಸು ಕೇಂದ್ರ ಸರ್ಕಾರಕ್ಕೆ ಹಿರಿಮೆ ತಂದುಕೊಟ್ಟಿದೆ. ಭಾರತವು ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಇನ್ನೂ ಹೆಚ್ಚಿನ ಪಾತ್ರ ವಹಿಸುವುದಕ್ಕಾಗಿ ಹಕ್ಕು ಮಂಡಿಸಬಹುದು. ಜೊತೆಗೆ, ವಿಶ್ವಸಂಸ್ಥೆಯ ಸುಧಾರಣೆಯ ತನ್ನ ಕಾರ್ಯಸೂಚಿಯನ್ನು ಇನ್ನಷ್ಟು ಚೈತನ್ಯದಿಂದ ಪ್ರತಿಪಾದಿಸಬಹುದು. ನವದೆಹಲಿ ಘೋಷಣೆಯಲ್ಲಿ ಉಲ್ಲೇಖಿಸಲಾದ ಸವಾಲುಗಳಾದ ಒಳಗೊಳ್ಳುವಿಕೆ, ಧಾರ್ಮಿಕ ಸಹಿಷ್ಣುತೆ, ವೈವಿಧ್ಯ, ಲಿಂಗತ್ವ ನ್ಯಾಯ ಮತ್ತು ಹವಾಮಾನ ಬದಲಾವಣೆಯ ವಿಚಾರದಲ್ಲಿ ಸರ್ಕಾರವು ದೇಶದೊಳಗೆ ಹೇಗೆ ನಡೆದುಕೊಳ್ಳಲಿದೆ ಎಂಬುದು ಹೆಚ್ಚು ಸೂಕ್ಷ್ಮ ಪರಿಶೀಲನೆಗೆ ಒಳಪಡಬಹುದು.

ದಿನದ ಟ್ವೀಟ್

ಇಂದಿಗೂ ಪ್ರಸ್ತುತ

ಗಾಂಧೀಜಿ ಇಂದಿಗೂ ಐಕಾನ್ ಆಗಿದ್ದಾರೆ, ಅಲ್ಲವೇ? ಗಾಂಧೀಜಿಯನ್ನು ಹೀಗಳೆಯುವವರಿಗೂ ತಮ್ಮ ಅಂತರರಾಷ್ಟ್ರೀಯ ವರ್ಚಸ್ಸು ಕಾಯ್ದುಕೊಳ್ಳಲು ಅವರೇ ಬೇಕು.

ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

ಕಿಡಿನುಡಿ

ಧರ್ಮದ ಉದ್ದೇಶ ಒಗ್ಗೂಡಿಸುವುದು. ಅದು ವಿಭಜನೆಯ ಮಾತನಾಡುವುದಿಲ್ಲ. ಸಮಾಜವನ್ನು ವಿಭಜಿಸುವ ಶಕ್ತಿಗಳು ದೇಶಕ್ಕೆ ಮಾತ್ರವಲ್ಲದೆ ಜಗತ್ತಿಗೂ ಹಾನಿ ಮಾಡುತ್ತಿವೆ. ಅವುಗಳ ವಿರುದ್ಧ ಒಟ್ಟಾಗಿ ಹೋರಾಡಬೇಕಿದೆ.



ಮೋಹನ ಭಾಗವತ್
ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ

25 ವರ್ಷಗಳ ಹಿಂದೆ

ಶುಕ್ರವಾರ, 11-9-1998

- **ಕಾವೇರಿ ಪ್ರಾಧಿಕಾರ ಸಭೆ ಕರುಣಾನಿಧಿ ಒತ್ತಾಯ**

ಚೆನ್ನೈ, ಸೆ. 10 (ಪಿಟಿಐ)– ಹೊಸದಾಗಿ ರಚಿಸಲಾಗಿರುವ ಕಾವೇರಿ ನದಿ ಪ್ರಾಧಿಕಾರದ ಮೊದಲ ಸಭೆಯನ್ನು ಶೀಘ್ರವೇ ಕರೆಯುವಂತೆ ತಮಿಳುನಾಡು ಮುಖ್ಯಮಂತ್ರಿ ಎಂ.ಕರುಣಾನಿಧಿ ಅವರು ಪ್ರಧಾನಿ ವಾಜಪೇಯಿ ಅವರನ್ನು ಒತ್ತಾಯಿಸಿದ್ದಾರೆ.

ಕರ್ನಾಟಕವು ಆಗಸ್ಟ್ ತಿಂಗಳಿನಲ್ಲಿ ತಮಿಳುನಾಡಿಗೆ ಇನ್ನೂ 7.9 ಟಿಎಂಸಿ ಅಡಿ ನೀರು ಬಿಡಬೇಕಾಗಿದೆ. ಈ ಕುರಿತಂತೆ ಪ್ರಾಧಿಕಾರದ ಉಸ್ತುವಾರಿ ಸಮಿತಿ ಮುಖ್ಯಸ್ಥರಾದ ಕೇಂದ್ರ ಜಲ ಸಂಪನ್ಮೂಲ ಇಲಾಖೆ ಕಾರ್ಯದರ್ಶಿಗೆ ರಾಜ್ಯ ಸರ್ಕಾರ ಪತ್ರ ಬರೆದು, ತಕ್ಷಣ ತಮಿಳುನಾಡು ಪಾಲಿನ ನೀರು ಬಿಡುವಂತೆ ಕರ್ನಾಟಕಕ್ಕೆ ಸೂಚಿಸಲು ಕೇಳಿಕೊಳ್ಳಲಾಗಿದೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

- **ಕ್ಲಿಂಟನ್-ಲೆವಿನ್‌ಸ್ಕಿ ಸಂಬಂಧ: ಕಾಂಗ್ರೆಸ್‌ಗೆ ವರದಿ**

ವಾಷಿಂಗ್ಟನ್, ಸೆ. 10 (ಪಿಟಿಐ)– ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಮತ್ತು ಶ್ವೇತಭವನದ ಸಹಾಯಕಿ ಮೋನಿಕಾ ಲೆವಿನ್‌ಸ್ಕಿ ಅವರ ನಡುವಿನ ಲೈಂಗಿಕ ಸಂಪರ್ಕದ ಬಗ್ಗೆ ವಿಚಾರಣೆ ನಡೆಸಿದ ಸ್ವತಂತ್ರ ನ್ಯಾಯದರ್ಶಿ ಕೆನೆತ್ ಸ್ಟಾರ್ ಅವರು ತಮ್ಮ ವರದಿಯನ್ನು ಇಂದು ಅಮೆರಿಕ ಕಾಂಗ್ರೆಸ್‌ಗೆ ನೀಡಿದ್ದಾರೆ.

ಈ ವರದಿಯ ಹಿನ್ನೆಲೆಯಲ್ಲಿ ಕ್ಲಿಂಟನ್ ಅವರನ್ನು ಕಾಂಗ್ರೆಸ್ ದೋಷಾರೋಪಣೆಗೆ ಒಳಪಡಿಸುವ ಸಾಧ್ಯತೆ ಇರುವುದರಿಂದ ಕ್ಲಿಂಟನ್ ತಮ್ಮ ಅಧ್ಯಕ್ಷ ಗಾದಿ ಉಳಿಸಿಕೊಳ್ಳಲು ತೀವ್ರ ಹೋರಾಟ ನಡೆಸಬೇಕಾಗಿದೆ.

ಸ್ಟಾರ್ ಅವರು ಎಂಟು ತಿಂಗಳ ಕಾಲ ವಿಚಾರಣೆ ನಡೆಸಿ 445 ಪುಟಗಳ ವರದಿಯನ್ನು ನೀಡಿದ್ದಾರೆ. ಅಧ್ಯಕ್ಷರನ್ನು ದೋಷಾರೋಪಣೆಗೆ ಒಳಪಡಿಸಲು ಸಾಧ್ಯವಾಗಬಹುದಾದ 'ಗಮನಾರ್ಹ ಪ್ರಮಾಣದ ಮತ್ತು ವಿಶ್ವಾಸಾರ್ಹ' ಆಧಾರಗಳು ವರದಿಯಲ್ಲಿ ಇವೆ ಎಂದು ಸ್ವತಂತ್ರ ನ್ಯಾಯಾಧೀಶರ ವಕ್ತಾರ ಚಾರ್ಲ್ಸ್ ಬೇಕ್ಲೆ ಅವರು ಜನಪ್ರತಿನಿಧಿಗಳ ಸಭೆಯ ಆವರಣದಲ್ಲಿ ಪತ್ರಕರ್ತರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 11-9-1973

- **ಅಸ್ಪೃಶ್ಯತೆ ಅನುಸರಣೆಗೆ ಪುಂಡುಗಂದಾಯದ ದಂಡ**

ಬೆಂಗಳೂರು, ಸೆ. 10– ಹರಿಜನ ಮತ್ತು ಗಿರಿಜನರನ್ನು ಸಾಮಾಜಿಕವಾಗಿ ಬಹಿಷ್ಕರಿಸುವ ಗ್ರಾಮಗಳ ಮೇಲೆ ತಲೆಗಂದಾಯವನ್ನು ಹಾಕಬೇಕೆಂದು ಅಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಶ್ರೀ ಎಂ.ಮಲ್ಲಿಕಾರ್ಜುನಸ್ವಾಮಿ ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ಸಂತೇಮರಹಳ್ಳಿಯಲ್ಲಿ ಹರಿಜನ, ಗಿರಿಜನರ ವಿರುದ್ಧ ಸವರ್ಣ ಹಿಂದೂಗಳು ಸಾಮಾಜಿಕ ಬಹಿಷ್ಕಾರ ಹಾಕಿರುವ ಸಂಬಂಧದಲ್ಲಿ ಸಮಾಜ ಕಲ್ಯಾಣ ಅಧಿಕಾರಿಗಳು ಹಾಗೂ ಇತರರು ಅಲ್ಲಿಗೆ ಹೋಗಿ ಸವರ್ಣ ಹಿಂದೂಗಳು ಮತ್ತು ಹರಿಜನರನ್ನು ಕೂಡಿಸಿ ಮಾತುಕತೆ ನಡೆಸಿ, ಹೀಗೆ ಮಾಡುವುದು ಸರಿಯಲ್ಲ ಎಂದು ತಿಳಿಸಲಾಗಿದೆ ಎಂದು ಸಚಿವರು ಶ್ರೀ ಕೆ.ಸಿದ್ಧಯ್ಯ ಅವರ ಗೈರುಹಾಜರಿಯಲ್ಲಿ ಪ್ರಶ್ನೆ ಕೇಳಿದ ಶ್ರೀ ರಾಮಸ್ವಾಮಿ ಅವರಿಗೆ ಹೇಳಿದರು.

- **ಸ್ವೇಚ್ಛೆಯಾಗಿ ಮೋಟಾರ್ ಡ್ರೈವಿಂಗ್ ಲೈಸೆನ್ಸ್ ನೀಡಿಕೆ ಎಂದು ಮುಖ್ಯಮಂತ್ರಿ ಟೀಕೆ**

ಬೆಂಗಳೂರು, ಸೆ. 10– ಮೋಟಾರ್ ವಾಹನಗಳನ್ನು ನಡೆಸಲು ಸಂಬಂಧಪಟ್ಟ ಇಲಾಖೆಯು ಸ್ವೇಚ್ಛೆಯಾಗಿ ಲೈಸೆನ್ಸ್‌ಗಳನ್ನು ನೀಡುತ್ತಿರುವುದನ್ನು ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ಅವರು ಇಂದು ಇಲ್ಲಿ ಟೀಕಿಸಿ, 'ಡ್ರೈವಿಂಗ್ ಲೈಸೆನ್ಸ್' ಹೇಗೆ ಸಿಗುತ್ತೆಂಬುದನ್ನು ಅದನ್ನು ಪಡೆದವರನ್ನು ಕೇಳಿದರೆ ಗೊತ್ತಾಗುತ್ತದೆ ಎಂದರು.

'ಸಂಚಾರ ಸಪ್ತಾಹ'ವನ್ನು ರವೀಂದ್ರ ಕಲಾ ಕ್ಷೇತ್ರದಲ್ಲಿ ಉದ್ಘಾಟಿಸಿದ ಅವರು, ಮೋಟಾರ್ ವಾಹನಗಳಿಂದ ಆಗುವ ಅಪಘಾತಗಳನ್ನು ತಪ್ಪಿಸಲು ಪೊಲೀಸ್ ಇಲಾಖೆ ಜೊತೆಗೆ ಡ್ರೈವಿಂಗ್ ಲೈಸೆನ್ಸ್ ನೀಡುವ ಇಲಾಖೆಯ ಸಹಕಾರವೂ ಅಗತ್ಯವೆಂದರು.

ನ್ಯಾಯಮೂರ್ತಿ ರೋಹಿಣಿ ಆಯೋಗದ ವರದಿಯ ಶೀಘ್ರ ಜಾರಿ ಅಗತ್ಯ

ಒಬಿಸಿ ಒಳವರ್ಗೀಕರಣದ ತುರ್ತು

ವಿಶ್ಲೇಷಣೆ

ಎಚ್. ಕಾಂತರಾಜ

ಕೇಂದ್ರ ಸರ್ಕಾರವು ಸಂವಿಧಾನದ 340ನೇ ವಿಧಿಯ ಅಡಿಯಲ್ಲಿ ರಚಿಸಿದ ನ್ಯಾಯಮೂರ್ತಿ ರೋಹಿಣಿ ಆಯೋಗವು ಈ ವರ್ಷದ ಜುಲೈ 31ರಂದು ತನ್ನ ವರದಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಿದೆ. ಈ ಆಯೋಗವನ್ನು 2017ರ ಅಕ್ಟೋಬರ್ 2ರಂದು ರಚಿಸಲಾಗಿತ್ತು. ಆಯೋಗದ ಅಧ್ಯಕ್ಷರಾದ ರೋಹಿಣಿ ಅವರು ದೆಹಲಿ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ. ಆಯೋಗದ ನೇಮಕವು ಬಿ.ಪಿ. ಮಂಡಲ್ ವರದಿಯ ಜಾರಿ ನಂತರದಲ್ಲಿ ಸಾಮಾಜಿಕ ನ್ಯಾಯದ ಸಾಕಾರಕ್ಕೆ ಕೇಂದ್ರ ಸರ್ಕಾರ ಇಟ್ಟ ಪ್ರಮುಖ ಹಾಗೂ ಮಹತ್ವದ ಹೆಜ್ಜೆ.

ನ್ಯಾಯಮೂರ್ತಿ ರೋಹಿಣಿ ಆಯೋಗದ ಮಹತ್ವ ಏನು ಎಂಬುದನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸುವುದು ಸೂಕ್ತವಾಗಬಹುದು. ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಮೀಸಲಾತಿ ಮೊದಲಿಗೆ ಸಿಕ್ಕಿದ್ದು 1992ರ ನಂತರದಲ್ಲಿ. ಅಂದರೆ, ಇಂದಿರಾ ಸಹಾನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ತೀರ್ಪು ಹೊರಬಿದ್ದ ನಂತರದಲ್ಲಿ ಅವರಿಗೆ ಮೀಸಲಾತಿಯ ಪ್ರಯೋಜನ ದೊರೆಯಿತು. ಕೇಂದ್ರ ಸರ್ಕಾರವು ಪ್ರತಿ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ ತನ್ನದೇ ಆದ, ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಯೊಂದನ್ನು ಹೊಂದಿದೆ.

ಈ ಪಟ್ಟಿಯ ಉದ್ದೇಶ ಸಂವಿಧಾನದ 15(4) ಮತ್ತು 16(4) ವಿಧಿಗಳ ಅನುಸಾರ ಕ್ರಮವಾಗಿ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳನ್ನು ದೊರಕಿಸಿಕೊಡುವುದರ ಜೊತೆಗೆ ಇನ್ನೂ ಅನೇಕ ಸಾಂವಿಧಾನಿಕ ಸೌಲಭ್ಯಗಳನ್ನು ಒಬಿಸಿ ಸಮುದಾಯಗಳಿಗೆ ನೀಡುವುದು.

ಕರ್ನಾಟಕವನ್ನು ಉದಾಹರಿಸಿ ಹೇಳುವುದಾದಲ್ಲಿ, ಇಲ್ಲಿನ ರಾಜ್ಯ ಸರ್ಕಾರ ಸಿದ್ಧಪಡಿಸಿರುವ ಒಬಿಸಿ ಪಟ್ಟಿ ಬೇರೆ. ಕರ್ನಾಟಕದ ಒಬಿಸಿ ಸಮುದಾಯಗಳು ಯಾವುವು ಎಂದು ಕೇಂದ್ರ ಸಿದ್ಧಪಡಿಸಿರುವ ಪಟ್ಟಿಯೇ ಬೇರೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಕೇಂದ್ರ ಸಿದ್ಧಪಡಿಸಿರುವ ಒಬಿಸಿ ಪಟ್ಟಿಯಲ್ಲಿ 199 ಜಾತಿಗಳ ಉಲ್ಲೇಖವಿದೆ. ಅಂದರೆ ಈ ಪಟ್ಟಿಯಲ್ಲಿ, ಈ ಇಷ್ಟೂ ಜಾತಿಗಳನ್ನು ಒಂದೇ ಬಗೆಯಲ್ಲಿ ನೋಡಲಾಗುತ್ತಿದೆ. ಇಂತಹ ಪಟ್ಟಿಯನ್ನು ಇಟ್ಟುಕೊಂಡು ಮೀಸಲಾತಿಯನ್ನು ನೀಡಿದರೂ ಒಂದೇ, ನೀಡದೆ ಇದ್ದರೂ ಒಂದೇ.

ರಾಜ್ಯ ಸರ್ಕಾರ ಸಿದ್ಧಪಡಿಸಿರುವ ಒಬಿಸಿ ಪಟ್ಟಿಯಲ್ಲಿ ಬೇರೆ ಬೇರೆ ವರ್ಗೀಕರಣ ಇದೆ. ಅಂದರೆ, ರಾಜ್ಯ ಸರ್ಕಾರದ ಪ್ರಕಾರ ರಾಜ್ಯದ ಒಬಿಸಿ ಸಮುದಾಯಗಳಲ್ಲಿಯೇ ಹಿಂದುಳಿದವರು ಹಾಗೂ ಅತಿ ಹಿಂದುಳಿದವರು ಇದ್ದಾರೆ. ಆದರೆ, ಕೇಂದ್ರ ಸರ್ಕಾರದ ಪಟ್ಟಿಯಲ್ಲಿ ಈ ಬಗೆಯ ವರ್ಗೀಕರಣ ಇಲ್ಲ. ಈ ಪಟ್ಟಿಯಲ್ಲಿ ಬಹಳ ಪರಿಷ್ಕರಣೆಗಳೂ ಆಗಿಲ್ಲ. 199 ಜಾತಿಗಳನ್ನು ಸಮಾನ ನೆಲೆಯಲ್ಲಿ ಸ್ಪರ್ಧೆಗೆ ಇಳಿಸಿದರೆ, ಜಾತಿಗಳಲ್ಲಿನ ಪ್ರಬಲರು ಮಾತ್ರ ಗೆಲುವು ಸಾಧಿಸಬಲ್ಲರು. ಒಳವರ್ಗೀಕರಣ ಇಲ್ಲದೆ ಮೀಸಲಾತಿ ಕಲ್ಪಿಸುವುದು, ಮೀಸಲಾತಿಯ ತತ್ವಕ್ಕೆ ವಿರುದ್ಧ.

ಒಬಿಸಿ ಸಮುದಾಯ ಕೂಡ ಏಕರೂಪದ್ದಲ್ಲ. ಅಲ್ಲಿ ಕೂಡ ಹಿಂದುಳಿದವರು, ಹೆಚ್ಚು ಹಿಂದುಳಿದವರು, ಅತಿ ಹಿಂದುಳಿದವರು ಎಂಬ ಒಳವರ್ಗೀಕರಣಗಳು ಇವೆ. ಹೀಗಾಗಿ ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಸೀಮಿತವಾಗಿ ಅಥವಾ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಕ್ಕೆ ಸೀಮಿತವಾಗಿ ಸಿದ್ಧಪಡಿಸಿರುವ ಪಟ್ಟಿಯಲ್ಲಿ ಒಳವರ್ಗೀಕರಣ ಅಗತ್ಯ ಇದೆ – ರಾಜ್ಯದ 199 ಜಾತಿಗಳಲ್ಲಿ ಶಕ್ತರು, ಅಶಕ್ತರು ಯಾರು ಎಂಬುದನ್ನು ಗುರುತಿಸುವ ಕೆಲಸ ಆಗಬೇಕು. ಈ ಕೆಲಸ ಇದುವರೆಗೂ ಆಗಿಲ್ಲ.

ಕೇಂದ್ರ ಸರ್ಕಾರವು ರಾಜ್ಯಗಳಿಗೆ ಸೀಮಿತವಾಗಿ ಸಿದ್ಧಪಡಿಸಿರುವ ಒಬಿಸಿ ಪಟ್ಟಿಯಲ್ಲಿ ಒಳವರ್ಗೀಕರಣ ಆಗದೆ ಇದ್ದರೆ, ಒಬಿಸಿ ಸಮುದಾಯಗಳಲ್ಲಿನ ಶಕ್ತರಿಗೆ ಮಾತ್ರ ಮೀಸಲಾತಿಯ ಪ್ರಯೋಜನ ಸಿಗುತ್ತದೆ. ಒಳವರ್ಗೀಕರಣ ಬೇಕು ಎಂಬುದನ್ನು ನ್ಯಾಯಾಲಯಗಳು ಕೂಡ ಒಪ್ಪಿವೆ. ಒಳವರ್ಗೀಕರಣದ ಅಗತ್ಯ ಇದೆ ಎಂಬ ಕಾರಣಕ್ಕೆ ನ್ಯಾಯಮೂರ್ತಿ ರೋಹಿಣಿ ಅವರ ಅಧ್ಯಕ್ಷತೆಯ ಈ ಆಯೋಗದ ರಚನೆ ಆಯಿತು.

ಮಂಡಲ್ ಆಯೋಗವು ಒಬಿಸಿ ಸಮುದಾಯಗಳ ಸ್ಥಿತಿ-ಗತಿಯ ಬಗ್ಗೆ ವರದಿ ನೀಡಲು ಕೇಂದ್ರ ಸರ್ಕಾರವು ಸಂವಿಧಾನದ 340ನೇ ವಿಧಿಯ ಪ್ರಕಾರ ನೇಮಿಸಿದ್ದ ರಾಷ್ಟ್ರೀಯ ಆಯೋಗ. ಈ ಆಯೋಗವು 1979ರಲ್ಲಿ ರಚನೆಯಾಗಿ, 1980ರಲ್ಲಿ ವರದಿ ನೀಡಿತು. ವಿ.ಪಿ.ಸಿಂಗ್ ನೇತೃತ್ವದ ಕೇಂದ್ರ ಸರ್ಕಾರವು 1990ರ ಆಗಸ್ಟ್‌ನಲ್ಲಿ ಈ ವರದಿಯ ಜಾರಿಗೆ ತೀರ್ಮಾನಿಸಿತು. ಆದರೆ, ತೀರ್ಮಾನವನ್ನು ಅನುಷ್ಠಾನಕ್ಕೆ ತರಲು ಸರ್ಕಾರಕ್ಕೆ ತಕ್ಷಣಕ್ಕೆ ಆಗಲಿಲ್ಲ. ಕೇಂದ್ರದ ತೀರ್ಮಾನವನ್ನು ಸುಪ್ರೀಂ ಕೋರ್ಟ್‌ನಲ್ಲಿ ಇಂದಿರಾ ಸಹಾನಿ ಪ್ರಕರಣದಲ್ಲಿ ಪ್ರಶ್ನಿಸಲಾಯಿತು. ಆ ಪ್ರಕರಣದ ತೀರ್ಪು 1992ರಲ್ಲಿ ಪ್ರಕಟವಾದ ನಂತರವಷ್ಟೇ ಒಬಿಸಿ ಸಮುದಾಯಗಳಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡಲು ದಾರಿ ಸುಗಮವಾಯಿತು. ಸಂವಿಧಾನ ಜಾರಿಗೆ ಬಂದಿದ್ದು 1950ರಲ್ಲಿ. ಒಬಿಸಿ ವರ್ಗಗಳಿಗೆ ಮೀಸಲಾತಿ ಕೊಡಬೇಕು ಎಂಬುದು ಸಂವಿಧಾನದ ಆಶಯ. ಆದರೆ ಸಂವಿಧಾನ ಜಾರಿಗೆ ಬಂದ 42 ವರ್ಷಗಳ ನಂತರದಲ್ಲಿ ಒಬಿಸಿ ವರ್ಗಗಳಿಗೆ ಮೀಸಲಾತಿ ಸೌಲಭ್ಯ ದೊರೆಯಿತು.

ಕೇಂದ್ರದ ಅಧೀನಕ್ಕೆ ಒಳಪಟ್ಟ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಒಬಿಸಿ ಸಮುದಾಯಗಳಿಗೆ ಮೀಸಲಾತಿ ನೀಡಲು ಅರ್ಜುನ್ ಸಿಂಗ್ ಅವರು ಕೇಂದ್ರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಾಗಿದ್ದಾಗ ಸಂವಿಧಾನಕ್ಕೆ ತಿದ್ದುಪಡಿ ತಂದರು. ಆ ಮೂಲಕ ಕೇಂದ್ರದ ಅಧೀನಕ್ಕೆ ಒಳಪಟ್ಟ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಒಬಿಸಿ ಸಮುದಾಯಗಳಿಗೆ ಮೀಸಲಾತಿ ಕಲ್ಪಿಸಲಾಯಿತು. ಆದರೆ, ಒಬಿಸಿ ಸಮುದಾಯಗಳು ಮೀಸಲಾತಿಗೆ ಕಾಯುವುದು ಅಲ್ಲಿಗೆ ನಿಲ್ಲಲಿಲ್ಲ. ಸಂವಿಧಾನ ತಿದ್ದುಪಡಿಯ ಅನುಸಾರ 2006ರಲ್ಲಿ ತಂದ ವಿಶೇಷ ಕಾಯ್ದೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಯಿತು. ಆ ಪ್ರಕರಣದಲ್ಲಿ ಕೇಂದ್ರದ ಪರವಾಗಿ 2008ರಲ್ಲಿ ತೀರ್ಪು ಬಂತು. ಆನಂತರ ಶಿಕ್ಷಣ ಕ್ಷೇತ್ರದಲ್ಲಿ ಒಬಿಸಿ ಸಮುದಾಯಗಳಿಗೆ ಮೀಸಲಾತಿ ನೀಡಲು ಸಾಧ್ಯವಾಯಿತು.

ನ್ಯಾಯಮೂರ್ತಿ ರೋಹಿಣಿ ಆಯೋಗಕ್ಕೆ 11 ತಿಂಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ಆಯೋಗ ರಚನೆ ಮಾಡುವಾಗ ವಹಿಸಿದ ಪ್ರಮುಖ ಜವಾಬ್ದಾರಿ ಎಂದರೆ ಕೇಂದ್ರದ ಒಬಿಸಿ ಪಟ್ಟಿಯಲ್ಲಿ ಅರ್ಹತೆಗೆ ಅನುಗುಣವಾಗಿ ಒಳವರ್ಗೀಕರಣ ನಿರ್ಧರಿಸುವುದು. ರೋಹಿಣಿ ಆಯೋಗದ ಕರೆ ಮೇರೆಗೆ ಈ ಲೇಖಕ ದೆಹಲಿಯಲ್ಲಿ ಹಾಗೂ ಪುಣೆಯಲ್ಲಿ ಚರ್ಚೆಯಲ್ಲಿ ಭಾಗಿಯಾಗಿ ಲಿಖಿತ ಸಲಹೆಗಳನ್ನು ನೀಡಿಯಾಗಿದೆ. ಈ ಆಯೋಗದ ಅವಧಿಯನ್ನು ಹಲವು ಬಾರಿ ವಿಸ್ತರಣೆ ಮಾಡಲಾಗಿದೆ. ಈಗ ವಿಳಂಬವಾಗಿಯಾದರೂ, ವರದಿ ಸಲ್ಲಿಕೆ ಆಗಿದೆ. ಈಗಲಾದರೂ ವರದಿಯನ್ನು ಪರಿಗಣಿಸಿ, ಅದನ್ನು ಆದಷ್ಟು ಬೇಗ ಜಾರಿಗೆ ತರಬೇಕು.

ಇದನ್ನು ಜಾರಿಗೆ ತರದೇ ಇದ್ದರೆ, ಒಳವರ್ಗೀಕರಣ ಇಲ್ಲದೆ ಮೀಸಲಾತಿಯ ಪ್ರಯೋಜನವನ್ನು ಶಕ್ತ ಜಾತಿಗಳು ಮಾತ್ರ ಪಡೆಯುವುದು ಮುಂದುವರಿಯುತ್ತದೆ. ರಾಜ್ಯ ಸರ್ಕಾರವು ತಾನು ನೀಡುವ ಮೀಸಲಾತಿ ಸೌಲಭ್ಯಕ್ಕಾಗಿ ಸಿದ್ಧಪಡಿಸಿರುವ ಒಬಿಸಿ ಪಟ್ಟಿಯಲ್ಲಿ ಇರುವ ಎಲ್ಲ ಜಾತಿ ಸಮುದಾಯಗಳು ಕೇಂದ್ರವು ಕರ್ನಾಟಕಕ್ಕೆ ಸೀಮಿತವಾಗಿ ಸಿದ್ಧಪಡಿಸಿರುವ ಒಬಿಸಿ ಪಟ್ಟಿಯಲ್ಲಿ ಸ್ಥಾನ ಪಡೆದಿಲ್ಲ ಎಂಬ ವಿವಾದವೊಂದು ಇದೆ. ಆದರೆ ಅದು ಪ್ರತ್ಯೇಕ ವಿಚಾರ. ವರದಿ ಸ್ವೀಕರಿಸಿದ ನಂತರದಲ್ಲಿ, ಅದನ್ನು ಜಾರಿಗೆ ತರದೇ ಇದ್ದರೆ, ಕಣ್ಣೊರೆಸುವ ತಂತ್ರವಾಗಿ ಇದನ್ನು ರಚಿಸಿದಂತೆ ಆಗುತ್ತದೆ. ಆ ರೀತಿ ಆಗಬಾರದು.

ಕೇಂದ್ರದ ಶಿಕ್ಷಣ ಸಚಿವ ಸುಭಾಷ್ ಸರ್ಕಾರ್ ಅವರು ಸಂಸತ್ತಿನಲ್ಲಿ ಇತ್ತೀಚೆಗೆ ನೀಡಿರುವ ಹೇಳಿಕೆ ಪ್ರಕಾರ ಕೇಂದ್ರ ಸರ್ಕಾರದ ಅಧೀನದ 45 ವಿಶ್ವವಿದ್ಯಾಲಯಗಳಲ್ಲಿ ಕೇವಲ 5 ಮಂದಿ ಕುಲಪತಿಗಳು, ಶೇ 4ರಷ್ಟು ಪ್ರೊಫೆಸರ್‌ಗಳು, ಶೇ 6ರಷ್ಟು ಸಹ ಪ್ರಾಧ್ಯಾಪಕರು ಒಬಿಸಿ ಸಮುದಾಯಗಳಿಗೆ ಸೇರಿದವರು. ಇದು ಪರಿಶಿಷ್ಟ ಜಾತಿಗಳ ಪ್ರಾತಿನಿಧ್ಯ ಪ್ರಮಾಣಕ್ಕಿಂತ ಕಡಿಮೆ ಎಂದು ಸಚಿವರು ಹೇಳಿದ್ದಾರೆ. ಈ ಶಿಕ್ಷಣ ಸಂಸ್ಥೆಗಳಲ್ಲಿ ಸಾಮಾನ್ಯ ವರ್ಗಕ್ಕೆ ಸೇರಿದ ಪ್ರೊಫೆಸರ್‌ಗಳ ಪ್ರಮಾಣ ಶೇ 85ರಷ್ಟು, ಸಹಾಯಕ ಪ್ರಾಧ್ಯಾಪಕರ ಪ್ರಮಾಣ ಶೇ 82ರಷ್ಟು. ಉಪನ್ಯಾಸಕೇತರ ಹುದ್ದೆಗಳಲ್ಲಿ ಒಬಿಸಿ ಪ್ರಾತಿನಿಧ್ಯ ಶೇ 12ರಷ್ಟು. ಅಂದರೆ, ಒಬಿಸಿ ವರ್ಗಗಳಿಗೆ ಶೇ 27ರಷ್ಟು ಮೀಸಲಾತಿ ಎಂಬುದು ಪೂರ್ಣವಾಗಿ ಜಾರಿಯಾಗಿಲ್ಲ ಎಂದಿದ್ದಾರೆ.

ಪರಿಹಾರವಿಲ್ಲದ ಸಮಸ್ಯೆಗಳಿಲ್ಲ ಎಂಬ ಮಾತು ಬರೀ ಕಾಗದದ ಮೇಲೆ ಉಳಿಯಿತೆ? ಒಳವರ್ಗೀಕರಣ ವಿಳಂಬವಾದಲ್ಲಿ ಒಬಿಸಿ ಮೀಸಲಾತಿ ಹಂಚಿಕೆಯಲ್ಲಿ ಆಗುತ್ತಿರುವ ಅನ್ಯಾಯ ಮುಂದುವರಿಯುತ್ತದೆ. ತಳಸಮುದಾಯಗಳಿಗೆ ಸಾಮಾಜಿಕ ಭದ್ರತೆಯನ್ನು ನೀಡುವುದೇ ಮೀಸಲಾತಿಯ ಪರಮೋದ್ದೇಶ. ಎಲ್ಲಿಯವರೆಗೆ ಸಾಮಾಜಿಕ ಭದ್ರತೆ, ಸಮಾನತೆ ಇರುವುದಿಲ್ಲವೋ ಅಲ್ಲಿಯವರೆಗೆ ಸಮಾಜದಲ್ಲಿ ಅಮಾನವೀಯ ಕೃತ್ಯಗಳಿಗೆ ತಡೆ ಇರುವುದಿಲ್ಲ.

ಲೇಖಕ: ಹಿರಿಯ ವಕೀಲ, ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಅಧ್ಯಕ್ಷ

ಚುರುಮುರಿ

'ಈ ಸಲ ಕಪ್ ನಮ್ದೇ!'

• ಸುಮಂಗಲಾ

'ಬಿಜೆಪಿ ಅನ್ನೂ ಪದದೊಳಗೆ ಜೆ ಅಕ್ಷರ ಎದಕ್ಕ ಐತಿ, ಅದರ ಮಹತ್ವ ಏನು ಅಂತ ಗೊತ್ತೈತೇನ್ ನಿನಗ' ಬೆಕ್ಕಣ್ಣ ಮುಗುಮ್ಮಾಗಿ ಕೇಳಿತು.

ನಾನು ಪೆಂಗಳಂತೆ ತಲೆ ಅಲ್ಲಾಡಿಸಿದೆ.

'ಬಿಜೆಪಿ ಪದದ ಮಧ್ಯದಲ್ಲಿ ಜೆ ಅಕ್ಷರ ಐತಿ, ಅಂದರೆ ಬಿಜೆಪಿ ಮತ್ತು ಜೆಡಿಎಸ್ ಅಗತ್ಯವಿದ್ದಾಗ ಪರಸ್ಪರರ 'ಬಿ' ಟೀಂ ಆಗಬೌದು ಅಂತ ಅರ್ಥ. ಯೆಡ್ಯೂರಜ್ಜಾರು, ಕುಮಾರಣ್ಣ ಸುತ್ತೀಬಳಸಿ ಅದನ್ನೇ ಹೇಳ್ಯಾರೆ, ಅಷ್ಟೂ ಗೊತ್ತಾಗಂಗಿಲ್ಲೇನ್' ಎಂದು ನನ್ನ ತಲೆಗೆ ಮೊಟಕಿತು.

'ಕೈಪಕ್ಷದೋರು ಇಡೀ ರಾಜ್ಯ ಲೂಟಿ ಹೊಡೆಯಾಕೆ ಹತ್ಯಾರ. ಅವರ ಲೂಟಿ ನಿಲ್ಲಿಸಿ, ರಾಜ್ಯ ರಕ್ಷಣೆ ಮಾಡೂ ಘನಂದಾರಿ ಉದ್ದೇಶಕ್ಕೆ ಒಗ್ಗಟ್ಟಾಗತೀವಿ ಅಂತ ಅಂದಾರೆ'.

'ಅದೇ ಮತ್ತ... ಬರೇ ಕೈಪಕ್ಷದೋರು ಲೂಟಿ ಹೊಡೆದರೆ ಹೆಂಗ? ಲೂಟಿ ಹೊಡೆಯೂ ಹಕ್ಕು ತಮಗೂ ಐತಿ. ಒಬ್ಬೊಬ್ಬರೇ ಲೂಟಿ ಹೊಡಿಯೂಣು ಅಂದ್ರ ಬಹುಮತ ಬಂದಿಲ್ಲ, ಹಿಂಗಾಗಿ ಒಗ್ಗಟ್ಟಾಗಿ ಕುರ್ಚಿ ಏರಿ, ಲೂಟಿ ಹೊಡೆಯೂ ಪ್ಲಾನ್ ಮಾಡ್ಯಾರೆ'.

'ಇಂಡಿಯಾ ಹೆಸರನ್ನ ಭಾರತ ಅಂತ ಬದಲಿ ಮಾಡ್ತಾರ ಅಂತ ಹೇಳ್ತಿದಾರಲ್ಲ, ಹಂಗೇ ಈ ಎರಡೂ ಪಕ್ಷ ಸೇರಿಸಿ, ಬಿಜೆಡಿಪಿ ಅಂದ್ರ ಭಾರತೀಯ ಜನತಾ ದಳ ಪಕ್ಷ ಅಂತ ಹೊಸ ಹೆಸರು ಇಟ್ಟರೆ ಮತದಾರರಿಗೂ ಗೊಂದಲ ಆಗಂಗಿಲ್ಲ, ತೆನೆಯಕ್ಕನೂ ಸೆಕ್ಯುಲರ್ ಪದದ ಹೊರೆಯನ್ನು ಅತ್ತಾಗೆ ಬಿಸಾಕಿ, ಬಿಡುಬೀಸಾಗಿ ಕಮಲಕ್ಕನ ಜೊತೆ ಸೇರಬೌದು, ಹೌದಿಲ್ಲೋ' ಎಂದೆ.

'ಅಪರೂಪಕ್ಕೊಮ್ಮೆ ಮಸ್ತ್ ಐಡಿಯಾ ಹೇಳೀ ನೋಡು. ತೆನೆಯಕ್ಕ ತಲಿಮ್ಯಾಗಿನ ರಾಗಿ ಹೊರೆ ಕೆಳಗಿಳಿಸಿ, ಕಮಲದ ಹೂ ಮುಡಕೊಂಡು ಎಷ್ಟು ಚಂದ ಕಾಣಬೌದು'.

'ಅದೆಲ್ಲ ಇರಲಿ, ಬಿಜೆಪಿ ಇನ್ನೂ ವಿರೋಧ ಪಕ್ಷದ ನಾಯಕನ್ನೇ ಆರಿಸಿಲ್ಲವಲ್ಲ'.

'ವಿರೋಧ ಪಕ್ಷದ ನಾಯಕ ಎದಕ್ಕ ಬೇಕು? ಇನ್ನು ಸ್ವಲ್ಪೇ ತಿಂಗಳದಾಗೆ ಬಿಜೆಡಿಪಿ ಹೆಂಗಾನ ಮಾಡಿ ಅಧಿಕಾರಕ್ಕೆ ಬರತೈತಿ. ನಮ್ ಕುಮಾರಣ್ಣನೇ ಮುಖ್ಯಮಂತ್ರಿ!' ಬೆಕ್ಕಣ್ಣ ಕನಸು ಕಾಣತೊಡಗಿತು.

ಸಂಗತ

ಹತ್ತಿಕ್ಕಿದ ವಿಮರ್ಶೆ: ಉಳಿದೀತೆ ವಿಶ್ವಾಸಾರ್ಹತೆ?

ಅಭಿಪ್ರಾಯ ಮಂಡಿಸುವ ಮುಕ್ತ ಸ್ವಾತಂತ್ರ್ಯವು ಸಿನಿಮಾ ಅಥವಾ ಪುಸ್ತಕ ವಿಮರ್ಶಕರಿಗೆ ಇರಬೇಕಿರುವುದು ಅಪೇಕ್ಷಣೀಯ

• ಎಚ್.ಕೆ.ಶರತ್

'ಸೂಪರ್', 'ಸಖತ್ತಾಗಿದೆ', 'ಪೈಸಾ ವಸೂಲ್', 'ಒಂದ್ಸಲ ಖಂಡಿತ ನೋಡಬಹುದು' ಅಂತ ಸಿನಿಮಾಗಳಿಗೂ 'ಚೆನ್ನಾಗಿದೆ', 'ಅದ್ಭುತವಾಗಿದೆ', 'ಸರಾಗವಾಗಿ ಓದಿಸಿಕೊಂಡು ಹೋಗುತ್ತೆ' ಅಂತ ಪುಸ್ತಕಗಳಿಗೂ ಹೇಳುವುದನ್ನೇ ವಿಮರ್ಶೆ ಎಂದು ಭಾವಿಸಬೇಕೆ? ನೋಡಿದ ಸಿನಿಮಾ ಅಥವಾ ಓದಿದ ಪುಸ್ತಕದ ಕುರಿತು ತಮಗೆ ಅನಿಸಿದ್ದನ್ನು ಮುಕ್ತವಾಗಿ ಹೇಳಿಕೊಳ್ಳುವ, ಬರೆಯುವ ಸ್ವಾತಂತ್ರ್ಯ ನೋಡುಗರು ಹಾಗೂ ಓದುಗರಿಗೆ ಇರಬೇಕಲ್ಲವೇ?

ವಿಮರ್ಶಾ ಮಾನದಂಡಗಳನ್ನು ಇಟ್ಟುಕೊಂಡು 'ಇದು ಚೆನ್ನಾಗಿದೆ', 'ಚೆನ್ನಾಗಿಲ್ಲ', 'ಹೀಗಿರಬೇಕಿತ್ತು', 'ಹೀಗಿರಬಾರದಿತ್ತು' ಅಂತೆಲ್ಲ ಅಭಿಪ್ರಾಯ ಮಂಡಿಸುವ ಮುಕ್ತ ಸ್ವಾತಂತ್ರ್ಯ ವಿಮರ್ಶಕರಿಗೆ ಇರಬೇಕಿರುವುದು ಅಪೇಕ್ಷಣೀಯ. ವಿಮರ್ಶಾ ಮೀಮಾಂಸೆಗಳ ಕುರಿತು ಅರಿವಿಲ್ಲದ ಸಾಮಾನ್ಯ ನೋಡುಗ, ಓದುಗನಿಗೆ ಕೂಡ ತನಗೆ ಅನಿಸಿದ್ದನ್ನು ಹೇಳುವ ಮುಕ್ತ ಅವಕಾಶ ಇರಬೇಕು. ವಿಮರ್ಶಕರಾದವರು ಎಲ್ಲದಕ್ಕೂ 'ಚೆನ್ನಾಗಿದೆ' ಎಂಬ ಮುದ್ರೆ ಒತ್ತುತ್ತಾ ಹೋದ ಮಾತ್ರಕ್ಕೆ, ಜನ ಮುಗಿಬಿದ್ದು ಸಿನಿಮಾ ನೋಡುವರೇ ಅಥವಾ ಪುಸ್ತಕ ಕೊಳ್ಳುವರೇ? 'ಟೋಬಿ' ಹೆಸರಿನ ಕನ್ನಡ ಸಿನಿಮಾ ಕುರಿತು ನಕಾರಾತ್ಮಕ ಅಭಿಪ್ರಾಯ ವ್ಯಕ್ತಪಡಿಸಿದ ಮಹಿಳೆಯೊಬ್ಬರೊಂದಿಗೆ ಕೆಲವರು ನಡೆದುಕೊಂಡ ರೀತಿ ಇತ್ತೀಚೆಗೆ ಬಹಳಷ್ಟು ಚರ್ಚೆಗೆ ಗ್ರಾಸವಾಯಿತು. ಆನಂತರ, ಚಿತ್ರತಂಡದ ಭಾಗವಾಗಿದ್ದ ಕೆಲವರು ಕ್ಷಮೆ ಕೋರಿದ್ದೂ ನಡೆಯಿತು.

ಕೆಲವೊಮ್ಮೆ ಸಿನಿಮಾಗೆ ಹೂಡುವ ಕೋಟಿಗಳ ಲೆಕ್ಕದ ಬಂಡವಾಳವನ್ನೇ ಗುರಾಣಿಯಾಗಿಸಿಕೊಂಡು ವಿಮರ್ಶಾ ದನಿಗಳನ್ನು ಅಡಗಿಸುವ ಪ್ರಯತ್ನ ಮಾಡಲಾಗುತ್ತದೆ. ಅದರಲ್ಲೂ ಪ್ರಯೋಗಾತ್ಮಕವೆಂದು ಗುರುತಿಸಿಕೊಳ್ಳುವ, ಮೆಚ್ಚುಗೆ ಪಡೆಯುವ ಸಿನಿಮಾಗಳಲ್ಲಿನ ಸಮಸ್ಯಾತ್ಮಕ ಅಂಶಗಳ ಕುರಿತು ಯಾರಾದರೂ ಬೆಟ್ಟು ಮಾಡತೊಡಗಿದರೆ, 'ಕೂದಲು ಸೀಳುವ ವಿಮರ್ಶೆ ಮಾಡುವುದು ಸದ್ಯಕ್ಕೆ ಬೇಡ. ಚಿತ್ರತಂಡ ತುಂಬಾ ಕಷ್ಟಪಟ್ಟು ಸಿನಿಮಾ ಮಾಡಿದೆ. ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶನ ಕಾಣುವುದು ನಿಂತ ಮೇಲೆ ಬೇಕಿದ್ದರೆ ವಿಮರ್ಶೆ ಮಾಡೋಣ' ಎನ್ನುವ ಸಲಹೆ ಅವರಿಗೆ ದೊರೆಯುವುದು ಅಪರೂಪವೇನಲ್ಲ.

ಟೀಕೆ-ಟಿಪ್ಪಣಿ, ವಿಮರ್ಶೆ-ವಿಶ್ಲೇಷಣೆಗಳನ್ನು ಸಹಜವೆಂದು ಭಾವಿಸುವ ಮನೋಭಾವದ ಅನುಪಸ್ಥಿತಿ ಚಿತ್ರರಂಗದಂತೆ ಸಾಹಿತ್ಯ ವಲಯದಲ್ಲೂ ಗಾಢವಾಗಿಯೇ ಇದೆ. ಸಾಹಿತ್ಯಕ ನಿಯತಕಾಲಿಕವೊಂದಕ್ಕೆ ಪುಸ್ತಕ ವಿಮರ್ಶೆ ಬರೆದುಕೊಡಲು ಸಮ್ಮತಿ ಸೂಚಿಸಿದ್ದ ಪರಿಚಿತರೊಬ್ಬರು, ಹೋದ ವರ್ಷ ಪ್ರಕಟವಾದ ಕಾದಂಬರಿಯೊಂದನ್ನು ವಿಮರ್ಶಿಸಲು ನಿರ್ಧರಿಸಿ ಓದತೊಡಗಿದರು. ಆರಂಭದ ಕೆಲ ಅಧ್ಯಾಯಗಳನ್ನು ಓದಿದ ಅವರಿಗೆ, ಪುಸ್ತಕ ಇಷ್ಟವಾಗಲಿಲ್ಲ. ಅದಾಗಲೇ ಹಲವರು ಆ ಪುಸ್ತಕದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿ ಅಲ್ಲಲ್ಲಿ ಟಿಪ್ಪಣಿಗಳನ್ನು ಬರೆದಿದ್ದರು. ಅದಾಗಲೇ ಹಲವರ ಹೊಗಳಿಕೆಗೆ ಪಾತ್ರವಾಗಿದ್ದ ಪುಸ್ತಕದಲ್ಲಿನ ಸವಕಲು ಹಾಗೂ ನಕಾರಾತ್ಮಕ ಅಂಶಗಳನ್ನು ಉಲ್ಲೇಖಿಸಿ ವಿಮರ್ಶೆ ಬರೆದರೆ, ಅದಕ್ಕೆ ವ್ಯಕ್ತವಾಗಬಹುದಾದ ಟೀಕೆ ಹಾಗೂ ವ್ಯಕ್ತಿಗತ ದಾಳಿಗಳನ್ನು ಅಂದಾಜಿಸಿ ಅವರು ಬರೆಯದೆ ಸುಮ್ಮನಾದರು.

ತಮ್ಮ ಪುಸ್ತಕಗಳಿಗೆ ಬರೆಸಿಕೊಳ್ಳುವ ಮುನ್ನುಡಿ ಹಾಗೂ ಬೆನ್ನುಡಿಗಳಲ್ಲಿ ನಕಾರಾತ್ಮಕ ಅಂಶಗಳಿದ್ದರೆ, ಅವನ್ನು ಕತ್ತರಿಸಿ ಪ್ರಕಟಿಸುವ ಪರಿಪಾಟವೂ ಇದೆ. ಏಳು ವರ್ಷಗಳ ಹಿಂದೆ, ಆಗಷ್ಟೇ ಪ್ರಾರಂಭವಾದ ಪ್ರಕಾಶನ ಸಂಸ್ಥೆಯೊಂದು ಕಥಾಸ್ಪರ್ಧೆ ಏರ್ಪಡಿಸಿ, ಸ್ಪರ್ಧೆಗೆ ಬಂದ ಕಥೆಗಳ ಪೈಕಿ ಕೆಲವನ್ನು ಆರಿಸಿ ಪುಸ್ತಕ ರೂಪದಲ್ಲಿ ಹೊರತರಲು ಮುಂದಾಗಿತ್ತು. ಈ ಕಥಾ ಸಂಕಲನಕ್ಕೆ ಮುನ್ನುಡಿ ಬರೆದು ಕೊಟ್ಟಿದ್ದ ಹಿರಿಯ ಕಥೆಗಾರರೊಬ್ಬರು 'ಲೇಖಕರು ತುಸುವಾದರೂ ಇನ್‌ಕ್ಲೂಸಿವ್ ಆಗಿ ಆಲೋಚಿಸುತ್ತಾರೆ ಎಂಬ ನನ್ನ ನಂಬಿಕೆಯನ್ನೇ ಈ ಕಥೆಯ (ಮತ್ತು ಇಂತಹ ಕೆಲವು ಕಥೆಗಳ) ಹಲವಾರು ಪದ ಪ್ರಯೋಗಗಳು ಬುಡಮೇಲು ಮಾಡಿದವು' ಎಂದು ಅಭಿಪ್ರಾಯಪಟ್ಟಿದ್ದರು. ಪುಸ್ತಕವನ್ನು ಮುದ್ರಣಕ್ಕೆ ಕಳಿಸುವ ಮುನ್ನ ಮುನ್ನುಡಿಯನ್ನು ಪ್ರಕಾಶಕರು ಕಥೆಗಾರರಿಗೆ ಕಳಿಸಿಕೊಟ್ಟರು. ಮುನ್ನುಡಿಯಲ್ಲಿನ ಟೀಕೆ ಟಿಪ್ಪಣಿ ಓದಿ ಆಕ್ರೋಶಗೊಂಡ ಇಬ್ಬರು ಕಥೆಗಾರರು, ಯಾವುದೇ ಕಾರಣಕ್ಕೂ ಆ ಮುನ್ನುಡಿಯನ್ನು ಯಥಾವತ್ತಾಗಿ ಪ್ರಕಟಿಸಬಾರದೆಂದು ಪ್ರಕಾಶಕರ ಮೇಲೆ ಒತ್ತಡ ಹೇರಿದರು. ಕೊನೆಗೆ, ಪ್ರಕಾಶಕರು ಮುನ್ನುಡಿಯ ಕೆಲ ಭಾಗಗಳಿಗೆ ಕತ್ತರಿ ಪ್ರಯೋಗಿಸಿದರು.



ವಿಮರ್ಶೆಗೆ ಮುಕ್ತ ಅವಕಾಶವಿರದ ವಾತಾವರಣ ನಿರ್ಮಿಸುವುದರಿಂದ ದೀರ್ಘಾವಧಿಯಲ್ಲಿ ಯಾರಿಗೂ ಒಳಿತಾಗಲಾರದು. ಕಡೆಗೂ ನೋಡುಗನಿಗೆ, ಓದುಗನಿಗೆ ಆಯಾ ಸಿನಿಮಾ ಅಥವಾ ಪುಸ್ತಕದ ಗುಣಮಟ್ಟ ಹಾಗೂ ಹೂರಣ ಎಂತಹದ್ದು ಎಂಬುದರ ಅರಿವಾಗುತ್ತದೆ. ವಿಮರ್ಶೆಯಲ್ಲಿ ಕಾಣಸಿಗದ ಮಿತಿಗಳು ಓದುಗರು, ನೋಡುಗರ ಅನುಭವಕ್ಕೆ ಬರತೊಡಗಿದರೆ, ವಿಮರ್ಶೆಗಳು ಬಹುಬೇಗನೆ ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತವೆ. ಒಂದಷ್ಟು ಜನ 'ಚೆನ್ನಾಗಿದೆ, ಅದ್ಭುತವಾಗಿದೆ' ಅಂತೆಲ್ಲ ಹೊಗಳಿದ ಮಾತ್ರಕ್ಕೆ ಅದನ್ನು ನಂಬಿ ಸಿನಿಮಾ ನೋಡುವ, ಪುಸ್ತಕ ಕೊಂಡು ಓದುವ ಉಮೇದು ಕೂಡ ಕರಗುತ್ತದೆ.

ಮಿತಿಗಳು ಇದ್ದರೂ, ಆ ಕುರಿತು ಇತರರು ಮಾತನಾಡುತ್ತಿದ್ದರೂ ನೋಡಿ ಅಥವಾ ಓದಿಯೇ ನಿರ್ಧರಿಸೋಣ ಎನ್ನುವ ವಿವೇಕ ಸಾಮಾನ್ಯ ಓದುಗ, ನೋಡುಗನಲ್ಲಿ ಇರುವುದಿಲ್ಲವೇ? ವಿಮರ್ಶೆಗೆ ಒಡ್ಡಿಕೊಳ್ಳದೆ, ಹೊಗಳಿಕೆಗಳಿಗೆ ಪುಳಕಗೊಳ್ಳುತ್ತಾ ಮೈಮರೆಯುವ ಸೃಜನಶೀಲ ವ್ಯಕ್ತಿತ್ವಗಳು ಬಹುಬೇಗನೆ ಜಡ್ಡುಗಟ್ಟಲಾರವೇ? ತಮ್ಮ ನೋಟಕ್ರಮದಲ್ಲಿನ ಮಿತಿಗಳನ್ನು ಮೀರಲು ನೆರವಾಗಬಹುದಾದ ವಿಮರ್ಶೆಗೆ ಬೆನ್ನು ತೋರಲು ಸೃಜನಶೀಲ ವ್ಯಕ್ತಿತ್ವಗಳು ಏಕೆ ಮುತುವರ್ಜಿ ತೋರುತ್ತಿವೆ?

ವಾಚಕರ ವಾಣಿ

ಎಲ್ಲರ ಗುರಿಯೂ ಅಧಿಕಾರ...

'ಎಲ್ಲಾರು ಮಾಡುವುದು ಹೊಟ್ಟೆಗಾಗಿ ಮತ್ತು ಗೇಣು ಬಟ್ಟೆಗಾಗಿ' ಎಂದು ದಾಸರು ಹೇಳಿದ್ದರು. ಆದರೆ, ಈಗ ರಾಜಕೀಯದಲ್ಲಿ ಎಲ್ಲ ಮಾಡುವುದು ಅಧಿಕಾರಕ್ಕಾಗಿ ಅಲ್ಲವೇ? ಬಿಜೆಪಿ- ಜೆಡಿಎಸ್ ಮೈತ್ರಿ ಕುರಿತು ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಲ್ಲವೂ ಅಧಿಕಾರಕ್ಕಾಗಿ ಎಂದು ಹೇಳಿದ್ದಾರೆ (ಪ್ರ.ವಾ., ಸೆ.10). ಹಾಗಾದರೆ, ವಿರೋಧ ಪಕ್ಷಗಳು 'ಇಂಡಿಯಾ' ಹೆಸರಿನಲ್ಲಿ ಮೈತ್ರಿಕೂಟ ರಚಿಸಿಕೊಂಡಿರುವುದು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬರುವ ಉದ್ದೇಶದಿಂದ ಅಲ್ಲವೇ? ಅದಿಲ್ಲದಿದ್ದರೆ ಅವುಗಳ ಮುಂದೆ ಮತ್ತ್ಯಾವ ಕಾರ್ಯಸೂಚಿ ಇದೆ?

ಎಚ್.ವಿ.ಶ್ರೀಧರ್, ಬೆಂಗಳೂರು

ನಾಮನಿರ್ದೇಶನ: ಗಂಭೀರವಾಗಿ ಪರಿಗಣಿಸಿ

'ಜಂಟಿ ಖಾತೆಗೇಕೆ ನಾಮನಿರ್ದೇಶನದ ಗೊಡವೆ?' ಎಂದು ಪ್ರಶ್ನಿಸಿದ್ದಾರೆ ಬಿ.ಎನ್.ಭರತ್ (ವಾ.ವಾ., ಆ. 28). ಆಲಮಟ್ಟಿಯಲ್ಲಿ ಎಂಜಿನಿಯರಾಗಿ ಕೆಲಸ ನಿರ್ವಹಿಸುತ್ತಿದ್ದ ಸ್ನೇಹಿತರೊಬ್ಬರು ಸುಮಾರು ಹತ್ತು ವರ್ಷಗಳ ಹಿಂದೆ ಕುಟುಂಬಸಮೇತ ಶಿರಡಿಗೆ ಹೋಗುವಾಗ ಮಾರ್ಗಮಧ್ಯೆ ಅಪಘಾತದಲ್ಲಿ ಪತ್ನಿಸಮೇತರಾಗಿ ಪ್ರಾಣ ಕಳೆದುಕೊಂಡರು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿಜಯಪುರದಲ್ಲಿ ಮನೆ ಮಾಡಿದ್ದ ತುರುವೇಕೆರೆ ಮೂಲದ ಅವರು ಅಗಲಿದ್ದು ಒಬ್ಬ ಮಗಳು ಮತ್ತು ಒಬ್ಬ ಮಗನನ್ನು. ಮಗ ಇನ್ನೂ ಬಾಲಕನಾಗಿದ್ದ. ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿದ್ದ ಅವರ ಜಂಟಿ ಖಾತೆಗಳಿಗೆ ನಾಮನಿರ್ದೇಶನ ಇರಲಿಲ್ಲ. ಅಲ್ಲದೆ ಎಂಜಿನಿಯರರ ಜಂಟಿಯಲ್ಲದ ಠೇವಣಿಗಳಿಗೆ ಅವರ ಪತ್ನಿ ನಾಮಿನಿಯಾಗಿದ್ದರೆ, ಪತ್ನಿಯ ಹೆಸರಿನಲ್ಲಿದ್ದ ಠೇವಣಿಗಳಿಗೆ ಪತಿಯದೇ ನಾಮನಿರ್ದೇಶನ.

ಠೇವಣಿ ಹಾಗೂ ಬಡ್ಡಿ ಹಣವನ್ನು ಮರಳಿ ಪಡೆಯಲು ಬ್ಯಾಂಕಿನ ಜಟಿಲ ನಿಯಮಾವಳಿಗಳ ಮಧ್ಯೆ ನಾಲ್ಕೈದು ವರ್ಷಗಳ ಕಾಲ ಅವರ ಮಕ್ಕಳು ಪಟ್ಟಪಾಡು ಅಷ್ಟಿಷ್ಟಲ್ಲ. ದೂರದ ತುರುವೇಕೆರೆಯಿಂದ ನಿಕಟ ಸಂಬಂಧಿಗಳೊಂದಿಗೆ ವಿಜಯಪುರಕ್ಕೆ ಅವರು ಆ ಕಾರಣಕ್ಕಾಗಿ ಹತ್ತಾರು ಸಲ ಅಲೆದಾಡಿದ್ದನ್ನು ಕಣ್ಣಾರೆ ಕಂಡಾಗ, ಜಂಟಿ ಖಾತೆಗಳಿಗೂ ಇರಬೇಕಾದ ನಾಮನಿರ್ದೇಶನದ ಮಹತ್ವ ತಿಳಿಯಿತು. ಸಾಧ್ಯವಿದ್ದೆಡೆ ಒಬ್ಬ ವ್ಯಕ್ತಿಗಿಂತಲೂ ಇಬ್ಬರ ಹೆಸರಿನಲ್ಲಿ ನಾಮನಿರ್ದೇಶನ ಮಾಡಿದರೆ ಇನ್ನೂ ಉತ್ತಮ.

ಆರ್.ಜಿ.ಬ್ಯಾಕೋಡ, ವಿಜಯಪುರ

ಮಳೆ... ಹೊಳೆ...!

ಭಾರತ-ಪಾಕ್
ಕ್ರಿಕೆಟ್ ಪಂದ್ಯ
ಮೊನ್ನೆ ರದ್ದಾಗಿತ್ತು
ಕಾರಣ, ಮಳೆ!
ಕ್ರಿಕೆಟ್ ಅಭಿಮಾನಿಗಳು
ಸಂಭ್ರಮದಿ ಮಿಂದೆದ್ದರು
ರೋಹಿತ್- ಗಿಲ್ ಜೋಡಿ
ಹರಿಸಿತು ರವಿವಾರ
ರನ್ ಹೊಳೆ!

ಮ.ಗು.ಬಸವಣ್ಣ
ನಂಜನಗೂಡು

ಗುಡಿಸಲುಮುಕ್ತ ರಾಜ್ಯವಾಗಲಿ

ಬೆಂಗಳೂರಿನ ಸರ್ವಜ್ಞ ನಗರದ ಚಟ್ಟಪ್ಪ ಗಾರ್ಡನ್ ಮತ್ತು ಹೆಬ್ಬಾಳದ ಕುಂತಿ ನಗರದ ಕೊಳೆಗೇರಿ ನಿವಾಸಿಗಳು ಸೂರು ಕಟ್ಟಿಕೊಡುವಂತೆ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರ ಮುಂದೆ ಅಲವತ್ತುಕೊಂಡ ಕಣ್ಣೀರಿನ ಕಥೆಯನ್ನು ಪತ್ರಿಕೆಯಲ್ಲಿ ಓದಿ ಬೇಸರವಾಯಿತು. ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ರೂಪಿಸಿರುವ ಪ್ರಧಾನಮಂತ್ರಿ ಆವಾಸ್ ವಸತಿ ಯೋಜನೆಯು ಎರಡು ವರ್ಷಗಳಾದರೂ ಇನ್ನೂ ಪೂರ್ಣಗೊಳ್ಳದೆ ಮನೆಗಳು ಅರ್ಧಕ್ಕೇ ನಿಂತಿರುವುದು ವಿಪರ್ಯಾಸವೇ ಸರಿ. ಕಾಂಗ್ರೆಸ್ ನೇತೃತ್ವದ ಸರ್ಕಾರ ಇತ್ತ ಗಮನಹರಿಸಿ, ರಾಜ್ಯವನ್ನು ಗುಡಿಸಲುಮುಕ್ತ, ಜೋಪಡಿಮುಕ್ತ ಮಾಡಲಿ.

ಉದಂತ ಶಿವಕುಮಾರ್, ಬೆಂಗಳೂರು

ಜಾತ್ಯತೀತ ಮೌಲ್ಯ ಗೌಣವಾಯಿತೇ?

ತೀರಾ ಈಚೆಗಷ್ಟೇ ನಡೆದ ವಿಧಾನಸಭಾ ಚುನಾವಣೆಯಲ್ಲಿ ಜಾತ್ಯತೀತ ಮೌಲ್ಯದ ಕುರಿತು ಜೆಡಿಎಸ್ ಮತ್ತು ಬಿಜೆಪಿ ಪರಸ್ಪರ ಹಂಗಿಸಿಕೊಂಡಿದ್ದವು. ಆದರೆ ಇದೀಗ ಅದನ್ನು ಮರೆತು ಮೈತ್ರಿ ಮಾಡಿಕೊಳ್ಳುತ್ತಿರುವುದು ಈ ಎರಡೂ ಪಕ್ಷಗಳ ರಾಜಕೀಯ ಅಸಹಾಯಕತೆಯನ್ನೂ ಹಾಗೆಯೇ ಮೌಲ್ಯರಹಿತ ರಾಜಕೀಯದ ಹಪಹಪಿಯನ್ನೂ ತೋರಿಸುತ್ತದೆ. ದಶಕಗಳ ಹಿಂದೆ ಜನತಾ ಪಕ್ಷದಿಂದ ಹೊರಬಂದ ಗುಂಪು ಬಿಜೆಪಿಯನ್ನು ರಚಿಸಿಕೊಂಡಾಗಲೂ ಜಾತ್ಯತೀತ ರಾಜಕೀಯ ಚರ್ಚೆಗೆ ಒಳಗಾಗಿತ್ತು. ನಂತರ ಜನತಾ ಪಕ್ಷ ಮತ್ತೊಮ್ಮೆ ವಿಭಜನೆಯಾದಾಗಲೂ ಜಾತ್ಯತೀತ ಎಂಬ ಮೌಲ್ಯವೇ ಜನತಾದಳದ ಹೆಸರಿನೊಂದಿಗೆ ಲಗತ್ತಾದದ್ದೂ ಉಂಟು. ಈಗ ಇದೆಲ್ಲವನ್ನೂ ಕಡೆಗಣಿಸಿ ಈ ಎರಡೂ ಪಕ್ಷಗಳು ಮೈತ್ರಿ ಮಾಡಿಕೊಳ್ಳುತ್ತಿರುವುದು ಜಾತ್ಯತೀತ ಮೌಲ್ಯವನ್ನೇ ಅಪಹಾಸ್ಯಕ್ಕೆ ಗುರಿ ಮಾಡುತ್ತಿರುವುದರ ಸ್ಪಷ್ಟ ಲಕ್ಷಣವಾಗಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ತೃಣಧಾನ್ಯ ಬಡವರ ಕೈಗೆಟುಕಲಿ

ನವದೆಹಲಿಯಲ್ಲಿ ನಡೆದ ಜಿ20 ರಾಷ್ಟ್ರಗಳ ಶೃಂಗಸಭೆಗೆ ಆಗಮಿಸಿದ ಸಾಗರೋತ್ತರ ನಾಡುಗಳ ಅತಿಥಿಗಳ ಆತಿಥ್ಯಕ್ಕೆ ಉಣಬಡಿಸಿದ ದೇಶದ ಸಾಂಪ್ರದಾಯಿಕ ಸಿರಿಧಾನ್ಯದ ಖಾದ್ಯವು ಚಿನ್ನದ ತಟ್ಟೆಯಲ್ಲಿ ಕೂಡುವ ಭಾಗ್ಯ ಪಡೆದದ್ದು ಯೋಗಾನುಯೋಗವೇ ಸರಿ. ಈ ಹುಲು ಧಾನ್ಯಕ್ಕೆ ಇಷ್ಟೊಂದು ಮಹತ್ವ ಬರುತ್ತದೆ ಎಂದು ಯಾರೂ ಊಹಿಸಿರಲಿಲ್ಲವೇನೊ.

ದಶಕಗಳ ಹಿಂದೆ ನವಣೆ, ಸಾಮೆ, ಬರಗು, ಕೊರಲೆ, ಹಾರಕದಂತಹ ಧಾನ್ಯಗಳನ್ನು ದೈನಂದಿನ ಬದುಕಿನಲ್ಲಿ ಯಾರಾದರೂ ಬಳಸುತ್ತಾರೆಂದರೆ ಅವರು ಖಂಡಿತವಾಗಿಯೂ ಬಡವರು, ಕೂಲಿಕಾರರಾಗಿರುತ್ತಾರೆ ಎಂಬ ಭಾವನೆಯಿತ್ತು. ಈಗ ನೋಡಿದರೆ ತನ್ನ ಕಿರೀಟಕ್ಕೆ ಚಿನ್ನದ ಗರಿಯನ್ನು ಸಿಕ್ಕಿಸಿಕೊಂಡಿರುವ ಈ ತೃಣಧಾನ್ಯದ ಬೆಲೆ ಬಡವರ ಕೈಗೆ ಎಟುಕದಷ್ಟು ಎತ್ತರಕ್ಕೆ ಹೋಗುತ್ತಿದೆ. ಹಣವು ತೂಕ ಕಳೆದುಕೊಳ್ಳುತ್ತಿದೆ, ತೃಣಧಾನ್ಯದ ಮೌಲ್ಯವರ್ಧನೆಗೊಳ್ಳುತ್ತಿದೆ. ಅದರ ಜೊತೆಗೆ, ಸಿರಿಧಾನ್ಯ ಬೆಳೆಯುವ ರೈತನ ಜೀವನಮಟ್ಟವೂ ಸುಧಾರಿಸಲಿ ಎಂದು ಆಶಿಸೋಣ.

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತೊಗರಿ ಬೇಳೆ ಗಗನಮುಖಿ ಬೆಲೆ

ಕ್ವಿಂಟಲ್‌ಗೆ ₹12,746 ಮುಟ್ಟಿದ ದರ

ಕಲಬುರಗಿಯ ಗಂಜ್‌ನ ಎಪಿಎಂಸಿ ಮಾರುಕಟ್ಟೆಯಲ್ಲಿ ಕಾರ್ಮಿಕ ಮಹಿಳೆಯೊಬ್ಬರು ತೊಗರಿಯನ್ನು ಸ್ವಚ್ಛಗೊಳಿಸುತ್ತಿರುವುದು ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

• ಮನೋಜಕುಮಾರ್ ಗುದ್ದಿ



ಕಲ್ಯಾಣ ಕರ್ನಾಟಕದ ಪ್ರಮುಖ ಬೆಳೆಯಾದ ತೊಗರಿಯ ಬೆಲೆಯು ಈಗ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹12,746ಕ್ಕೆ ತಲುಪಿದೆ. ಸಾರ್ವಕಾಲಿಕ ಗರಿಷ್ಠ ಬೆಲೆ ಇದು. ಇದರ ನೇರ ಪರಿಣಾಮ ಗ್ರಾಹಕರ ಮೇಲಾಗಿದ್ದು, ಪ್ರತಿ ಕೆ.ಜಿ. ತೊಗರಿ ಬೇಳೆಗೆ ₹160 ಕೊಟ್ಟು ಖರೀದಿಸಬೇಕಾಗಿದೆ. 15 ದಿನಗಳ ಹಿಂದಷ್ಟೇ ರಿಟೇಲ್ ಮಾರುಕಟ್ಟೆಯಲ್ಲಿ ತೊಗರಿ ಬೇಳೆ ದರ ₹120ರ ಆಸುಪಾಸಿನಲ್ಲಿತ್ತು. ಒಮ್ಮೆಲೇ ₹40ರಷ್ಟು ಹೆಚ್ಚಳವಾಗಿದೆ.

ರಾಜ್ಯದಲ್ಲಿ ಅತಿ ಹೆಚ್ಚು ತೊಗರಿ ಬೆಳೆಯುವ ಜಿಲ್ಲೆಗಳ ಪೈಕಿ ಕಲಬುರಗಿ ಅಗ್ರಸ್ಥಾನದಲ್ಲಿದೆ. ರೈತರ ಬಳಿ ಇದ್ದ ತೊಗರಿ ಈಗಾಗಲೇ ಮಾರಾಟವಾಗಿದೆ. ಮಾರುಕಟ್ಟೆಗೆ ಮುಂದಿನ ಬೆಳೆ ಬರುವವರೆಗೂ ತೊಗರಿ ಪೂರೈಕೆ ಆಗುವುದಿಲ್ಲ. ಹಾಗಾಗಿ, ಬೆಲೆ ಏರುಗತಿಯಲ್ಲೇ ಇರಲಿದೆ. ಬೆಲೆಯು ಪ್ರತಿ ಕ್ವಿಂಟಲ್‌ಗೆ ಗರಿಷ್ಠ ₹15 ಸಾವಿರದಿಂದ ₹16 ಸಾವಿರ ತಲುಪಬಹುದು. ಹಾಗಾದರೆ, ತೊಗರಿ ಬೇಳೆ ದರ ಕೆ.ಜಿ.ಗೆ ₹200 ದಾಟಬಹುದು ಎಂದು ಮಾರುಕಟ್ಟೆ ತಜ್ಞರು ಅಂದಾಜು ಮಾಡುತ್ತಿದ್ದಾರೆ.

ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳ ಮಣ್ಣಿನಲ್ಲಿರುವ ಸುಣ್ಣದ ಕಲ್ಲಿನ ಅಂಶವು ತೊಗರಿಗೆ ಅಗತ್ಯವಾದ ಖನಿಜಾಂಶಗಳನ್ನು ಪೂರೈಸುತ್ತದೆ. ಇದರಿಂದಾಗಿಯೇ ಉಳಿದ ಭಾಗಗಳಲ್ಲಿ ಬೆಳೆದ ತೊಗರಿಗೆ ಹೋಲಿಸಿದರೆ ಕಲಬುರಗಿ ಸೀಮೆಯ ತೊಗರಿ ಬೇಳೆಯು ಗಾತ್ರದಲ್ಲಿ ದಪ್ಪವಾಗಿರುತ್ತದೆ. ಇದನ್ನೇ ಮಾರುಕಟ್ಟೆಯಲ್ಲಿ ಪಟಗಾ ತೊಗರಿ (ಉತ್ಕೃಷ್ಟ ಗುಣಮಟ್ಟ) ಎಂದು ಮಾರಾಟ ಮಾಡಲಾಗುತ್ತದೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ ಕ್ವಿಂಟಲ್‌ಗೆ ಗರಿಷ್ಠ ₹8,273ಕ್ಕೆ ತೊಗರಿ ಮಾರಾಟವಾಗಿತ್ತು. ಇದು ಆವರೆಗಿನ ದಾಖಲೆಯ ಬೆಲೆ ಆಗಿತ್ತು. ನಂತರ ₹7,000ದಿಂದ ₹7,500ಕ್ಕೆ ಮಾರಾಟವಾಗಿತ್ತು. ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ವ್ಯಾಪಕವಾಗಿ ನೆಟೆ ರೋಗ ಕಾಣಿಸಿಕೊಂಡಿದ್ದರಿಂದ ತೊಗರಿ ಇಳುವರಿ ಗಣನೀಯವಾಗಿ ಕುಸಿದಿತ್ತು. ಇದರಿಂದಾಗಿಯೇ ನೆಟೆ ರೋಗಕ್ಕೆ ಪರಿಹಾರ ನೀಡಬೇಕು ಎಂಬ ಕೂಗು ರೈತ ಸಮುದಾಯದಿಂದ ವ್ಯಾಪಕವಾಗಿ ಕೇಳಿಬಂದಿತ್ತು. ಗಾಯದ ಮೇಲೆ ಬರೆ ಎಳೆದಂತೆ ಕಳೆದ ಅಕ್ಟೋಬರ್‌ನಲ್ಲಿ ಸುರಿದ ಮಳೆಯಿಂದಾಗಿ ತೊಗರಿ ಬೆಳೆಯು ಸಂಪೂರ್ಣವಾಗಿ ಜಲಾವೃತವಾಯಿತು.

ನೆಟೆ ರೋಗದ ಹೊಡೆತದಿಂದ ಕಂಗಾಲಾಗಿದ್ದ ರೈತರಿಗೆ ಅತಿವೃಷ್ಟಿಯು ಶಾಪವಾಗಿ ಪರಿಣಮಿಸಿತು. ಇದರಿಂದಾಗಿ ಉತ್ಪಾದನೆಯ ಮೇಲೆ ಗಂಭೀರ ಪರಿಣಾಮ ಉಂಟಾಯಿತು.

ಕಳೆದ ವರ್ಷ ಕಲಬುರಗಿ ಜಿಲ್ಲೆಯೊಂದರಲ್ಲೇ 4.87 ಲಕ್ಷ ಹೆಕ್ಟೇರ್‌ನಲ್ಲಿ ತೊಗರಿಯನ್ನು ಬೆಳೆಯಲಾಗಿತ್ತು. ನೆಟೆ ರೋಗ ಮತ್ತು ಅತಿವೃಷ್ಟಿಯಿಂದಾಗಿ 2.37 ಲಕ್ಷ ಹೆಕ್ಟೇರ್ ತೊಗರಿ ಬೆಳೆ ಸಂಪೂರ್ಣ ನಾಶವಾಯಿತು. 2.5 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆದ ಬೆಳೆ ಮಾತ್ರ ರೈತರ ಕೈಗೆ ಸಿಕ್ಕಿತು. ಕೃಷಿ ಇಲಾಖೆಯ ಅಂದಾಜಿನ ಪ್ರಕಾರ 4.87 ಲಕ್ಷ ಹೆಕ್ಟೇರ್‌ನಲ್ಲಿ ಉತ್ತಮ ಇಳುವರಿ ಬಂದಿದ್ದರೆ 50 ಲಕ್ಷ ಕ್ವಿಂಟಲ್ ತೊಗರಿ ಉತ್ಪಾದನೆ ಆಗುತ್ತಿತ್ತು. ಆದರೆ, 33 ಲಕ್ಷ ಕ್ವಿಂಟಲ್ ಮಾತ್ರ ಉತ್ಪಾದನೆಯಾಗಿದೆ. ಇದರ ಪರಿಣಾಮ ಬೆಲೆಯಲ್ಲಿ ವಿಪರೀತ ಏರಿಕೆಯಾಗುತ್ತಿದೆ ಎನ್ನುತ್ತವೆ ಎಪಿಎಂಸಿ ಮೂಲಗಳು.

ತೊಗರಿ ಬೆಳೆ ಬಂದ ಕೂಡಲೇ ಹೆಚ್ಚಿನ ರೈತರು ತಮ್ಮಲ್ಲಿದ್ದ ಬಹುತೇಕ ದಾಸ್ತಾನನ್ನು ಮಾರಾಟ ಮಾಡಿದ್ದಾರೆ. ಹೀಗಾಗಿ, ಹೆಚ್ಚಿನ ದಾಸ್ತಾನೂ ಇಲ್ಲ. ಮೊದಲೆಲ್ಲ ದಿನವೊಂದಕ್ಕೆ ಹತ್ತು ಸಾವಿರ ಕ್ವಿಂಟಲ್‌ಗೂ ಅಧಿಕ ತೊಗರಿ ಆವಕವಾಗುತ್ತಿದ್ದರೆ, ಇತ್ತೀಚಿನ ದಿನಗಳಲ್ಲಿ ಆವಕದ ಪ್ರಮಾಣ ಸರಾಸರಿ 1,500 ಕ್ವಿಂಟಲ್‌ಗೆ ಕುಸಿದಿದೆ. ಮತ್ತೊಂದೆಡೆ ಕಲಬುರಗಿ ನಗರದಲ್ಲಿ 150ಕ್ಕೂ ಅಧಿಕ ದಾಲ್ ಮಿಲ್‌ಗಳಿದ್ದು, ಅವುಗಳಿಗೆ ಅಗತ್ಯವಿರುವಷ್ಟು ತೊಗರಿ ಪೂರೈಕೆಯಾಗುತ್ತಿಲ್ಲ. ಒಂದೊಂದು ಮಿಲ್‌ಗೆ ಸರಾಸರಿ 15 ಸಾವಿರ ಕ್ವಿಂಟಲ್‌ಗಳಷ್ಟು ತೊಗರಿ ಅಗತ್ಯವಿದೆ. ಇದೇ ಲೆಕ್ಕಾಚಾರದ ಪ್ರಕಾರದ ಎಲ್ಲ ದಾಲ್ ಮಿಲ್‌ಗಳಿಗೆ 22 ಲಕ್ಷ ಕ್ವಿಂಟಲ್‌ಗೂ ಅಧಿಕ ತೊಗರಿ ಅಗತ್ಯವಾಗಿದೆ.

ಪ್ರತಿ ಕೆ.ಜಿಗೆ. ₹120ರಂತೆ ಸಗಟು ಮಾರಾಟಗಾರರಿಂದ ಖರೀದಿಸಿ, ತೊಗರಿ ಬೇಳೆಯನ್ನು ಕೆ.ಜಿ.ಗೆ ₹160ರಂತೆ ಮಾರಾಟ ಮಾಡಿದರೂ ಲಾಭ ಗಿಟ್ಟುವುದಿಲ್ಲ. ಸರ್ಕಾರದ ಸಮರ್ಪಕ ಪ್ರೋತ್ಸಾಹ ಇಲ್ಲದಿರುವುದರಿಂದ ಮಿಲ್‌ಗಳು ಮುಚ್ಚುತ್ತಿದ್ದು, ತೊಗರಿ ಬೆಲೆ ಏರಿಕೆಯಿಂದ ಇನ್ನಷ್ಟು ಸಂಕಷ್ಟ ಎದುರಾಗಿದೆ ಎನ್ನುತ್ತಾರೆ ಗುಲಬರ್ಗಾ ದಾಲ್ ಮಿಲ್ಲರ್ಸ್ ಅಸೋಸಿಯೇಶನ್ ಅಧ್ಯಕ್ಷ ಶಿವಶರಣಪ್ಪ ನಿಗ್ಗುಡಗಿ. ‘ಇತ್ತೀಚೆಗೆ ಬರುತ್ತಿರುವ ತೊಗರಿಯ ಗುಣಮಟ್ಟವೂ ಚೆನ್ನಾಗಿಲ್ಲ’ ಎಂದು ಅವರು ಹೇಳುತ್ತಾರೆ.

ರೈತರಿಗೆ ಸಿಗದ ಬೆಲೆ ಏರಿಕೆ ಲಾಭ: ತೊಗರಿ ಬೆಲೆ ಏರಿಕೆ ಕಂಡರೂ ಅದರ ಲಾಭ ಮಾತ್ರ ರೈತರಿಗೆ ಸಿಕ್ಕಿಲ್ಲ ಎಂಬ ಆರೋಪ ರೈತ ಸಂಘಟನೆಗಳದ್ದು. ತೊಗರಿ ಬೆಳೆ ಬಂದ ಕೂಡಲೇ ಬಿತ್ತನೆ ಸಂದರ್ಭದಲ್ಲಿ ಮಾಡಿದ್ದ ಬೀಜ, ಗೊಬ್ಬರದ ಸಾಲವನ್ನು ತೀರಿಸಲು ರೈತರು ಬೆಳೆ ಮಾರಾಟ ಮಾಡಿದ್ದಾರೆ. ಆಗ ಅವರಿಗೆ ಅಬ್ಬಬ್ಬಾ ಎಂದರೆ ಕ್ವಿಂಟಲ್‌ಗೆ ₹7 ಸಾವಿರ ದರ ಸಿಕ್ಕಿದೆ. ಅದನ್ನೇ ಸಂಗ್ರಹ ಮಾಡಿಕೊಂಡಿರುವ ವರ್ತಕರು ಇದೀಗ ಹೆಚ್ಚಿನ ಬೆಲೆಗೆ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿದ್ದಾರೆ.

ಮತ್ತೊಂದೆಡೆ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯು (ಮೊದಲಿನ ತೊಗರಿ ಅಭಿವೃದ್ಧಿ ಮಂಡಳಿ) ‘ಭೀಮಾ ಪಲ್ಸ್’ ಹೆಸರಿನಲ್ಲಿ ಕಡಿಮೆ ದರದಲ್ಲಿ ಗ್ರಾಹಕರಿಗೆ ತೊಗರಿ ಬೇಳೆ ಪೂರೈಸುವುದಾಗಿ ಘೋಷಣೆ ಮಾಡಿತ್ತು. ಆದರೆ, ಅದಿನ್ನೂ ಮಾರುಕಟ್ಟೆಗೆ ಬಿಡುಗಡೆಯಾಗಿಲ್ಲ. ಹೀಗಾಗಿ, ವ್ಯಾಪಾರಿಗಳಿಂದಲೇ ದುಬಾರಿ ಬೆಲೆಗೆ ಖರೀದಿ ಮಾಡಬೇಕಿದೆ.

50 ಲಕ್ಷ ಕ್ವಿಂಟಲ್ ನಿರೀಕ್ಷಿಸಿದ್ದ ತೊಗರಿ ಉತ್ಪಾದನೆ

33 ಲಕ್ಷ ಕ್ವಿಂಟಲ್ ಉತ್ಪಾದನೆಯಾದ ತೊಗರಿ

₹8,273 2022ರಲ್ಲಿ ಕ್ವಿಂಟಲ್‌ಗೆ ದೊರಕಿದ್ದ ಗರಿಷ್ಠ ಬೆಲೆ

₹12,746 ಪ್ರತಿ ಕ್ವಿಂಟಲ್‌ಗೆ ಈಗ ಇರುವ ಬೆಲೆ

ಗ್ರಾಹಕರ ಸಹಾಯಕ್ಕೆ ಬಾರದ ಮಂಡಳಿ

ರೈತರು ಹಾಗೂ ಗ್ರಾಹಕರ ಮಧ್ಯೆ ಕೊಂಡಿಯಂತೆ ಕೆಲಸ ಮಾಡಬೇಕಿದ್ದ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯು ತೊಗರಿ ಖರೀದಿಸಲಾಗದೇ ಇರುವುದರಿಂದ ರಿಯಾಯಿತಿ ದರದಲ್ಲಿ ತೊಗರಿ ಬೇಳೆ ವಿತರಣೆಯೂ ನಡೆಯುತ್ತಿಲ್ಲ.

ಜನವರಿ, ಫೆಬ್ರುವರಿ ತಿಂಗಳಲ್ಲಿ ಹೊಸದಾಗಿ ತೊಗರಿ ಉತ್ಪನ್ನ ಬಂದಾಗಲೇ ತನ್ನಲ್ಲಿ ನೋಂದಾಯಿಸಿಕೊಂಡ ರೈತರಿಗೆ ಮುಕ್ತ ಮಾರುಕಟ್ಟೆ ಬೆಲೆಗಿಂತ ಪ್ರತಿ ಕ್ವಿಂಟಲ್‌ಗೆ ₹100 ಹೆಚ್ಚುವರಿಯಾಗಿ ಪಾವತಿಸಿ ಖರೀದಿಸುವುದಾಗಿ ಮಂಡಳಿ ತಿಳಿಸಿತ್ತು. ಆದರೆ, ನಿರ್ದಿಷ್ಟ ಗುಣಮಟ್ಟದ ತೊಗರಿಯನ್ನು ಮಾತ್ರ ಖರೀದಿಸುವುದಾಗಿ ಷರತ್ತು ವಿಧಿಸಿತ್ತು. ಇದರಿಂದಾಗಿ ರೈತರು ಮಂಡಳಿಗೆ ತೊಗರಿ ಮಾರಾಟ ಮಾಡಲೇ ಇಲ್ಲ. ಹೀಗಾಗಿ, ತೊಗರಿಯನ್ನು ಬೇಳೆಯಾಗಿ ಸಂಸ್ಕರಿಸಿ ‘ಭೀಮಾ ಪಲ್ಸ್’ ಹೆಸರಿನಲ್ಲಿ ಬಿಡುಗಡೆ ಮಾಡುವ ಯತ್ನ ಕೈಗೂಡಲಿಲ್ಲ ಎನ್ನುತ್ತಾರೆ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಅಂಥೋನಿ ಮಾರಿಯಾ ಇಮ್ಯಾನುವೆಲ್.

₹10 ಸಾವಿರ ಬೆಂಬಲ ಬೆಲೆಗೆ ಬೇಡಿಕೆ

ಕಲಬುರಗಿ ಜಿಲ್ಲೆಯ ತೊಗರಿಯು ಸುಣ್ಣದ ಕಲ್ಲುಗಳಿರುವ ಜಮೀನಿನಲ್ಲಿ ಬೆಳೆಯುವುದರಿಂದ ಹೇರಳವಾಗಿ ಪ್ರೊಟೀನ್ ಹೊಂದಿರುತ್ತದೆ. ಹೀಗಾಗಿ, ಜಿಲ್ಲೆಯಲ್ಲಿ ತೊಗರಿ ಬೆಳೆಯುವ ಪ್ರದೇಶ ವಿಸ್ತರಣೆಯಾಗಬೇಕಿದ್ದರೆ ಉತ್ತಮ ದರ ಸಿಗಬೇಕು. ಆದ್ದರಿಂದ ಸರ್ಕಾರ ಕನಿಷ್ಠ ಬೆಂಬಲ ಬೆಲೆಯನ್ನು ₹10 ಸಾವಿರಕ್ಕೆ ನಿಗದಿಪಡಿಸಬೇಕು ಎಂದು ರೈತ ಸಂಘಟನೆಗಳು ಒತ್ತಾಯಿಸಿವೆ. ಜೊತೆಗೆ, ಎಂ.ಎಸ್. ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಬೇಕು ಎಂದು ಆಗ್ರಹಿಸಿವೆ. ಆದರೆ, ಬೆಂಬಲ ಬೆಲೆ ನಿಗದಿಪಡಿಸುವ ಕೇಂದ್ರ ಸರ್ಕಾರವು ಈ ಬೇಡಿಕೆಯನ್ನು ಈಡೇರಿಸುವ ಗೋಜಿಗೆ ಹೋಗಿಲ್ಲ.

ಕಳೆದ ವರ್ಷ ಪ್ರತಿ ಕ್ವಿಂಟಲ್ ತೊಗರಿಗೆ ಕನಿಷ್ಠ ಬೆಂಬಲ ಬೆಲೆ ₹6,600 ನಿಗದಿಪಡಿಸಲಾಗಿತ್ತು. ತಮಾಷೆಯೆಂದರೆ ಅದಾಗಲೇ ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ₹7,000 ಇತ್ತು. ಹೀಗಾಗಿ, ರೈತರು ಕನಿಷ್ಠ ಬೆಂಬಲ ಬೆಲೆಯಡಿ ಮಾರಾಟ ಮಾಡಲು ಮುಂದಾಗಲಿಲ್ಲ.

‘ಸರ್ಕಾರ ಬೆಂಬಲ ಬೆಲೆಯನ್ನು ₹10 ಸಾವಿರ ನಿಗದಿಪಡಿಸಿದರೆ ಇದರಿಂದ ಆಕರ್ಷಿತರಾಗುವ ರೈತರು ಹೆಚ್ಚು ತೊಗರಿ ಬೆಳೆಯಲು ಮುಂದಾಗುತ್ತಾರೆ. ಉತ್ಪಾದನೆ ಹೆಚ್ಚಾದರೆ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಯೋಜನೆಗೂ ಅಧಿಕ ಪ್ರಮಾಣದಲ್ಲಿ ತೊಗರಿ ಬೇಳೆಯನ್ನು ನೀಡಬಹುದು. ಪಡಿತರದ ಮೂಲಕವೂ ವಿತರಿಸಬಹುದು’ ಎನ್ನುತ್ತಾರೆ ರೈತ ಚಳವಳಿಯಲ್ಲಿ ಗುರುತಿಸಿಕೊಂಡಿರುವ ಆಳಂದ ಶಾಸಕ ಬಿ.ಆರ್. ಪಾಟೀಲ.

ವಿಭಿನ್ನ ಗೆಟಪ್‌ನಲ್ಲಿ ರಮೇಶ್ ಅರವಿಂದ್

ರಮೇಶ್ ಅರವಿಂದ್

ನಟ ರಮೇಶ್ ಅರವಿಂದ್ ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಳ್ಳುತ್ತಿರುವ ನೂತನ ಚಿತ್ರಕ್ಕೆ ‘ದೈಜಿ’ ಎಂದು ಹೆಸರಿಡಲಾಗಿದೆ. ನಟ ರಮೇಶ್ ‘ಶಿವಾಜಿ ಸುರತ್ಕಲ್’ ಸಿನಿಮಾ ನಿರ್ದೇಶಿಸಿದ್ದ ಆಕಾಶ್ ಶ್ರೀವತ್ಸ ಜೊತೆ ಈ ಚಿತ್ರಕ್ಕಾಗಿ ಮತ್ತೆ ಕೈಜೋಡಿಸಿದ್ದಾರೆ.

‘ಚಿತ್ರದ ಶೀರ್ಷಿಕೆ ‘ದೈಜಿ’ಗೆ ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಅರ್ಥಗಳಿವೆ. ಕೊಂಕಣಿಯಲಿ ‘ದೈಜಿ’ ಎಂದರೆ ರಕ್ತ ಸಂಬಂಧ. ಜಪಾನೀ ಭಾಷೆಯಲ್ಲಿ ‘ದೈಜಿ’ ಎಂದರೆ ಬಹಳ ಕಾಳಜಿ ವಹಿಸಬೇಕಾದ ವಿಚಾರ. ಮಿಸ್ಟರಿ ಅಥವಾ ಹಾರರ್ ಕಥೆಯುಳ್ಳ ಚಿತ್ರ. ಹಿಂದೆಂದೂ ಕಾಣಿಸಿಕೊಳ್ಳದಂತಹ ಒಂದು ಪಾತ್ರದಲ್ಲಿ ನಟ ರಮೇಶ್ ಕಾಣಿಸಿಕೊಳ್ಳುತ್ತಿದ್ದಾರೆ’ ಎನ್ನುತ್ತಾರೆ ನಿರ್ದೇಶಕ ಆಕಾಶ್ ಶ್ರೀವತ್ಸ.

ವಿಭಾ ಕಶ್ಯಪ್ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ರವಿ ಕಶ್ಯಪ್ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಡಿಸೆಂಬರ್ ಅಥವಾ ಜನವರಿ ತಿಂಗಳಿನಲ್ಲಿ ಚಿತ್ರೀಕರಣ ಪ್ರಾರಂಭವಾಗಲಿದ್ದು, ಬಹುತೇಕ ಅಮೆರಿಕದಲ್ಲಿಯೇ ನಡೆಯುವ ಕಥೆ ಎಂದಿದೆ ಚಿತ್ರತಂಡ.

ಚಕ್ರವರ್ತಿ ಚಂದ್ರಚೂಡ್, ನಾಗಶೇಖರ್, ಛಲವಾದಿ ಕುಮಾರ್

ನಾಗಶೇಖರ್ ಹೊಸ ಚಿತ್ರ ‘ಭೀಮಾ ಕೋರೆಗಾಂವ’

ಪ್ರೀತಿ, ಪ್ರೇಮದ ಕಥೆ ಹೇಳುತ್ತಿದ್ದ ನಿರ್ದೇಶಕ ನಾಗಶೇಖರ್ ಗಂಭೀರವಾದ ಕಥಾವಸ್ತುವುಳ್ಳ ವಿಷಯವೊಂದನ್ನು ಕೈಗೆತ್ತಿಕೊಂಡಿದ್ದಾರೆ. ಅದಕ್ಕೊಂದು ಬಲವಾದ ಕಾರಣವೂ ಇದೆ. ಅದನ್ನು ವಿವರಿಸುವ ವೇದಿಕೆಯಾಗಿತ್ತು ‘ಭೀಮಾ ಕೋರೆಗಾಂವ’ ಶೀರ್ಷಿಕೆ ಅನಾವರಣ ಸಮಾರಂಭ. ‘1818 ರ ಜ.1 ರಂದು ಸಮಾಜದಲ್ಲಿನ ಅಸಮಾನತೆಯ ವಿರುದ್ಧ ನಡೆದ ‘ಭೀಮಾ ಕೋರೆಗಾಂವ’ ಹೋರಾಟವನ್ನೇ ಕಥೆಯಾಗಿ ಹೊಂದಿರುವ ಚಿತ್ರವಿದು. ಶೋಷಿತರ ಧ್ವನಿಯಾಗಿ ಈ ಚಿತ್ರ ಮೂಡಿಬರಲಿದೆ. ನಾನು ಕೂಡ ಬದುಕಿನ ಒಂದು ಹಂತದಲ್ಲಿ ಶೋಷಿತನಾಗಿದ್ದೆ. ನನ್ನೊಳಗಿನ ನೋವಿನ ಕಥೆಯೂ ಹೌದು. ಮುಂದಿನ ವರ್ಷದ ವೇಳೆಗೆ ಚಿತ್ರೀಕರಣಕ್ಕೆ ಹೋಗುತ್ತೇವೆ. ₹120 ಕೋಟಿ ಬಜೆಟ್‌ನ ಚಿತ್ರವಾಗಿದ್ದು ಸ್ಟಾರ್ ನಟರೊಬ್ಬರು ನಾಯಕನಾಗಿರುತ್ತಾರೆ. ದೀಪಿಕಾ ಪಡುಕೋಣೆಯನ್ನು ನಾಯಕಿಯಾಗಿ ಕರೆತರುವ ಆಲೋಚನೆ ಇದೆ’ ಎಂದರು ಚಿತ್ರದ ನಿರ್ದೇಶಕ ನಾಗಶೇಖರ್.

ಚಕ್ರವರ್ತಿ ಚಂದ್ರಚೂಡ್ ಕಥೆ ಇರುವ ಚಿತ್ರವನ್ನು ನಾಗಶೇಖರ್ ಮೂವೀಸ್ ಹಾಗೂ ಪವಿತರ ಇಂಟರ್ ನ್ಯಾಷನಲ್ ಮೂವೀಮೇಕರ್ಸ್ ಅಡಿ ಛಲವಾದಿ ಕುಮಾರ್ ಅವರು ನಿರ್ಮಿಸುತ್ತಿದ್ದಾರೆ. ‘ಇತಿಹಾಸದ ಪುಟಗಳಲ್ಲಿ ದಾಖಲಾಗಿರುವ ಈ ಘಟನೆಯನ್ನು ನಮ್ಮ ಜನರಿಗೆ ತಿಳಿಸಬೇಕು ಎಂದು ನಿರ್ಧರಿಸಿ ನಿರ್ಮಾಣಕ್ಕೆ ಮುಂದಾಗಿದ್ದೇನೆ’ ಎಂದರು ನಿರ್ಮಾಪಕರು.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಮುಕೇಶ್ ಅಂಬಾನಿ ಬರ್ತಡೇ ಆಫರ್. ಜಿಯೊ ಕಂಪನಿಯು ಭಾರತದ ಎಲ್ಲಾ ಬಳಕೆದಾರರಿಗೆ ₹239 ಮೌಲ್ಯದ 28 ದಿನಗಳ ಅವಧಿಯ ರೀಚಾರ್ಜ್ ಅನ್ನು ಉಚಿತವಾಗಿ ನೀಡುತ್ತಿದೆ. ಈ ಸಂದೇಶದ ಜತೆಗಿನ ನೀಲಿ ಬಣ್ಣದ ಲಿಂಕ್ ಅನ್ನು ಕ್ಲಿಕ್ ಮಾಡಿ, ಉಚಿತ ರೀಚಾರ್ಜ್ ಪಡೆದುಕೊಳ್ಳಿ’ ಎಂಬ ಸಂದೇಶ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಜತೆಗೆ myphoneoffer.com ಎಂಬ ಲಿಂಕ್ ಹಂಚಿಕೊಳ್ಳಲಾಗಿದೆ. ಆದರೆ ಇದು ಸುಳ್ಳು ಮತ್ತು ಹಣದೋಚುವ ಉದ್ದೇಶದ ಸಂದೇಶ.

ಇಂತಹ ಕೊಡುಗೆ ಜಾರಿ ಮಾಡಿರುವ ಬಗ್ಗೆ ಜಿಯೊ ಕಂಪನಿಯು ಎಲ್ಲಿಯೂ ಘೋಷಿಸಿಲ್ಲ, ಯಾವುದೇ ಪ್ರಕಟಣೆ ನೀಡಿಲ್ಲ. ಈ ಸಂದೇಶದಲ್ಲಿ ಇರುವ ಲಿಂಕ್ ಅನ್ನು ಕಠಿಣವಾದ ಭದ್ರತಾ ವ್ಯವಸ್ಥೆ ಇರುವ ಕಂಪ್ಯೂಟರ್‌ನ ಬ್ರೌಸರ್‌ನಲ್ಲಿ ತೆರೆಯಲು ಯತ್ನಿಸಲಾಯಿತು. ಆ ಭದ್ರತಾ ವ್ಯವಸ್ಥೆಯು, ‘ಇದೊಂದು ಹಣದೋಚುವ ಉದ್ದೇಶದ ವಂಚಕ ಲಿಂಕ್’ ಎಂದು ಎಚ್ಚರಿಕೆ ನೀಡಿತು. ಭದ್ರತಾ ವ್ಯವಸ್ಥೆ ಇಲ್ಲದ ಕಂಪ್ಯೂಟರ್ ಅಥವಾ ಸ್ಮಾರ್ಟ್‌ಫೋನ್‌ನಲ್ಲಿ ಈ ಲಿಂಕ್ ಅನ್ನು ತೆರೆದರೆ, ವಂಚಕರು ಹಣ ದೋಚುವ ಅಪಾಯವಿರುತ್ತದೆ. ಈ ಎಚ್ಚರಿಕೆಯನ್ನು ಒಳಗೊಂಡ ಪ್ರಕಟಣೆಯನ್ನು ಈಚೆಗೆ ರಾಯಚೂರು ಸೈಬರ್ ಪೊಲೀಸರು ಹೊರಡಿಸಿದ್ದರು. ಹೀಗಾಗಿ ಇಂತಹ ಸಂದೇಶದೊಂದಿಗೆ ಬರುವ ಲಿಂಕ್ ಅನ್ನು ಒತ್ತದೇ ಇರುವುದು ಉತ್ತಮ.

ಗುಂಡಣ್ಣ



ನುಡಿ ಬೆಳಗು

ಆರದ ಬೆಳಕಾಗಬೇಕು, ನಾವು ಮಾಡುವ ಕಾಯಕ



ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಪ್ರಪಂಚ ಕಂಡ ಬಹುದೊಡ್ಡ ದಾರ್ಶನಿಕ ಗೌತಮ ಬುದ್ಧ, ಬೋಧಿ ವೃಕ್ಷದಡಿಯಲ್ಲಿ ತನಗೆ ಸಿಕ್ಕಂತಹ ಜ್ಞಾನದ ಬೆಳಕನ್ನು, ದೇಶದಾದ್ಯಂತ ಪ್ರವಾಸ ಮಾಡಿ ಎಲ್ಲ ಕಡೆಯಲ್ಲೂ ಪಸರಿಸುತ್ತಿದ್ದ. ಬುದ್ಧ ಒಂದೆಡೆಯಲ್ಲಿ ನೆಲೆ ನಿಂತು ಪ್ರವಚನ ನೀಡುತ್ತಿದ್ದ ಸ್ಥಳಗಳಿಗೆ ‘ವಿಹಾರ’ ಎನ್ನುತ್ತಿದ್ದರು. ಇಂದಿನ ‘ಬಿಹಾರ’ ರಾಜ್ಯದಲ್ಲಿ ಅತೀ ಹೆಚ್ಚಿನ ಸಂಖ್ಯೆಯ ವಿಹಾರಗಳಿದ್ದವು. ಹೀಗಾಗಿ ಆ ಪ್ರದೇಶಕ್ಕೆ ‘ಬಿಹಾರ’ ಎಂಬ ಹೆಸರು ಬಂತು ಎಂಬುದಾಗಿಯೂ ಹೇಳುತ್ತಾರೆ. ಇಂತಹ ಒಂದು ವಿಹಾರದಲ್ಲಿ ಬುದ್ಧನ ಪ್ರವಚನ ಮಾಲಿಕೆ ಸಾಗಿತ್ತು.

ಸಾಧಾರಣವಾಗಿ ಬುದ್ಧನ ಪ್ರವಚನ ಸಂಜೆಯ ವೇಳೆ ಇರುತ್ತಿದ್ದುದರಿಂದ ಅದನ್ನು ಆಲಿಸಲು ಬರುತ್ತಿದ್ದ ಶ್ರಾವಕರು ಅಲ್ಲಿಗೆ ದೀಪಗಳನ್ನು ತಂದು ಬೆಳಗಿಸುತ್ತಿದ್ದರು. ತಮ್ಮ ತಮ್ಮ ಶ್ರೀಮಂತಿಕೆ, ಪ್ರತಿಷ್ಠೆಗಳಿಗೆ ಅನುಸಾರವಾಗಿ ಚಿನ್ನ, ಬೆಳ್ಳಿ, ತಾಮ್ರ ಮುಂತಾದ ದುಬಾರಿ ಬೆಲೆಯ ದೀಪಗಳನ್ನು ಅಲ್ಲಿಗೆ ಬರುವ ಬುದ್ಧಾನುಯಾಯಿಗಳು ತರುತ್ತಿದ್ದರು.

ಆ ಊರಿನಲ್ಲಿ ಒಬ್ಬಳು ಹಣ್ಣು ಹಣ್ಣು ಮುದುಕಿ ಇದ್ದಳು. ಆಕೆ ಬುದ್ಧನ ಪರಮ ಭಕ್ತೆ. ಅವಳಿಗೂ ಬುದ್ಧನ ಕಾರ್ಯಕ್ರಮದಲ್ಲಿ ದೀಪ ಹಚ್ಚಿಡಬೇಕೆಂಬ ಆಸೆ. ತಾನು ಕಷ್ಟಪಟ್ಟು ಗಳಿಸಿ ಉಳಿಸಿದ ಹಣದಲ್ಲಿ ಆಕೆ ಒಂದು ಮಣ್ಣಿನ ಪ್ರಣತಿಯನ್ನು ಖರೀದಿಸಿದಳು. ಅದಕ್ಕೆ ಹೇಗೋ ಮಾಡಿ ಎಣ್ಣೆ ದೀಪಗಳನ್ನು ಹೊಂದಿಸಿದಳು. ಅದನ್ನು ಬುದ್ಧನ ಪ್ರವಚನ ನಡೆಯುವ ವಿಹಾರಕ್ಕೆ ಒಯ್ದು ಒಂದು ಮೂಲೆಯಲ್ಲಿ ಹಚ್ಚಿಟ್ಟು ತನ್ನಷ್ಟಕ್ಕೆ ತಾನು ಬುದ್ಧನ ಪ್ರವಚನವನ್ನು ತನ್ಮಯತೆಯಿಂದ ಆಲಿಸಿ, ಅಲ್ಲಿಂದ ಹೊರಟು ಹೋದಳು.

ಕಾರ್ಯಕ್ರಮ ಮುಗಿದ ಮೇಲೆ ಕಾರ್ಯಕರ್ತರು ಒಂದೊಂದಾಗಿ ದೀಪಗಳನ್ನು ಆರಿಸುತ್ತಾ ಬಂದರು. ಕೊನೆಗೆ ನಮ್ಮ ಅಜ್ಜಿ ಹಚ್ಚಿಟ್ಟ ದೀಪದ ಬಳಿ ಬಂದು ಉಫ್ ಎಂದು ಊದಿದರು. ದೀಪ ಆರಲಿಲ್ಲ! ಕೈಯಲ್ಲಿ ಬೀಸಿ ಆರಿಸುವ ಪ್ರಯತ್ನವನ್ನು ಮಾಡಿದರು ಆಗಲೂ ದೀಪ ಆರಲಿಲ್ಲ! ಕೊನೆಗೆ ತಮ್ಮ ವಸ್ತ್ರದಿಂದ ಗಾಳಿ ಹಾಕಿ ಅದನ್ನು ಆರಿಸುವ ಪ್ರಯತ್ನ ಮಾಡಿದರು. ಏನಾಶ್ಚರ್ಯ, ದೀಪ ಆರುತ್ತಿಲ್ಲ! ಇದನ್ನು ದೂರದಿಂದ ಗಮನಿಸುತ್ತಾ ಕುಳಿತಿದ್ದ ಬುದ್ಧದೇವ ಅಲ್ಲಿಂದಲೇ ಹೇಳಿದ, ‘ಅದನ್ನು ಆರಿಸುವ ಪ್ರಯತ್ನವನ್ನು ಬಿಟ್ಟುಬಿಡಿ. ಅದು ಅತ್ಯಂತ ಶ್ರದ್ಧೆಯಿಂದ, ಭಕ್ತಿಯಿಂದ, ಪ್ರಾಮಾಣಿಕತೆಯಿಂದ ಹಾಗೂ ಪ್ರೀತಿಯಿಂದ ಹಚ್ಚಿದ ದೀಪ ಅದೆಂದಿಗೂ ಆರದ ಬೆಳಕು’.

ಯಾವ ಕಾಯಕವನ್ನು ನಾವು ಶ್ರದ್ಧೆ ಭಕ್ತಿ ಪ್ರಾಮಾಣಿಕತೆ ಹಾಗೂ ಪ್ರೀತಿಯಿಂದ ಮಾಡುತ್ತೇವೆಯೋ ಅಂತಹ ಕಾಯಕ ಸಮಾಜಕ್ಕೆ ಆರದ ಬೆಳಕಾಗುತ್ತದೆ. ಕಾಯಕ ಯಾವುದೇ ಇರಲಿ ಶರಣರು ಹೇಳಿದಂತೆ ‘ಕಾಯಕವೇ ಕೈಲಾಸ’ ಎಂದುಕೊಂಡು ಮಾಡಿದರೆ ಮಾಡುವ ಕೆಲಸ ಪರಿಪೂರ್ಣವಾಗಿ ಮೂಡಿಬರುತ್ತದೆ. ಒಂದು ಸುಸಜ್ಜಿತ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡುವ ಪರಿಣತ ವೈದ್ಯನ ಕಾಯಕದಷ್ಟೇ ಶ್ರೇಷ್ಠವಾದದ್ದು ಆ ಆಸ್ಪತ್ರೆಯ ಕಸಗುಡಿಸಿ, ಒರೆಸಿ ಸ್ವಚ್ಛವಾಗಿರಿಸುವ ಕೆಲಸಗಾರನದ್ದು. ಮಾಡುವ ಕೆಲಸದಲ್ಲಿ ತನ್ಮಯತೆ ಇರದಿದ್ದರೆ ಅದು ಎಷ್ಟೇ ದೊಡ್ಡ ಕೆಲಸವಾಗಿದ್ದರೂ ಪರಿಪೂರ್ಣವಾಗಿ ಮೂಡಿಬರಲು ಸಾಧ್ಯವಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಸೆಪ್ಟೆಂಬರ್ 11, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ದ್ವಾದಶಿ ಗಂ. 23-53 ನಕ್ಷತ್ರ: ಪುಷ್ಯ ಗಂ. 20-01 ಯೋಗ: ಪರಿಘ ಗಂ. 24-13 ಕರಣ: ಕೌಲವ ಗಂ. 10-40, ಸಿಂಹ ಮಾಸದ 25 ನೇ ದಿನ, ಮಳೆನಕ್ಷತ್ರ: ಪೂರ್ವ ಫಲ್ಗುಣಿ 4. ರಾಹುಕಾಲ : ಬೆಳಿಗ್ಗೆ 07-30 – 09-00, ಸೂರ್ಯೋದಯ : 06-23 ಸೂರ್ಯಾಸ್ತ : 06-31
ಮುಸ್ಲಿಂ ದಿನಾಂಕ : 25 ಸಫರ್
ಅದೃಷ್ಟ ಸಂಖ್ಯೆ : 3, 11

ಮೇಷ: ಅಕ್ಕಪಕ್ಕದಲ್ಲಿ ಮತ್ತು ವ್ಯವಹಾರದಲ್ಲಿ ಅನಗತ್ಯ ವಿಷಯಗಳತ್ತ ಗಮನಹರಿಸದೇ ಇರುವಂಥ ತೀರ್ಮಾನ ತೆಗೆದುಕೊಳ್ಳುವುದು ಉತ್ತಮ. ಇಂದಿನ ದಿನಚರಿಯಲ್ಲಿ ಯಾವುದೇ ಅಡೆತಡೆ ಇಲ್ಲದೆ ಕೆಲಸ ಸಾಗುತ್ತದೆ.

ವೃಷಭ: ಗುರು ಹಿರಿಯರ ತಾಳ್ಮೆಯನ್ನು ಪರೀಕ್ಷಿಸುವ ಕೆಲಸಕ್ಕೆ ಕೈ ಹಾಕದಿರಿ. ನ್ಯಾಯವಾದಿಗಳಿಗೆ ತಮ್ಮ ವೃತ್ತಿಯಿಂದ ಆದಾಯ ಗಳಿಕೆಯಾದರೂ ಆತ್ಮಸಾಕ್ಷಿ ಒಪ್ಪಿಕೊಳ್ಳಲಾಗದ ಘಟನೆ ನಡೆಯಬಹುದು.

ಮಿಥುನ: ಪ್ರಾಮಾಣಿಕವಾಗಿ ನಡೆಯುವ ನಿಮಗೆ ವ್ಯವಹಾರದಲ್ಲಿ ಲಾಭಾಂಶ ಕಡಿಮೆ ಇದ್ದರೂ ನೆಮ್ಮದಿ ಇರುವುದು. ಸಿನಿಮಾ ಕಲಾವಿದರಿಗೆ ಅಪೇಕ್ಷೆ ಪಟ್ಟಂತೆ ಅವಕಾಶಗಳು ಸಿಗುವುವು. ದ್ವಿ ಚಕ್ರ ವಾಹನ ಖರೀದಿಯ ಯೋಗವಿದೆ.

ಕರ್ಕಾಟಕ: ಪೌಷ್ಠಿಕಾಂಶ ಆಹಾರ ಮತ್ತು ಆಯಾಸ ನೀಗುವಷ್ಟು ವಿಶ್ರಾಂತಿಯನ್ನು ತೆಗೆದುಕೊಳ್ಳುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದು. ವಾತಾವರಣದ ಅನುಕೂಲತೆಯಿಂದ ಕೃಷಿ ಕಾರ್ಯಗಳು ಭರದಿಂದ ಸಾಗಲಿದೆ.

ಸಿಂಹ: ಕಟ್ಟಡ ಕಾರ್ಮಿಕರಿಗೆ ಮತ್ತು ದಿನಕೂಲಿಗಾರರಿಗೆ ಅಭಿವೃದ್ಧಿಯ ಬದುಕಿಗೆ ಬೇಕಾದ ಸಾಕಷ್ಟು ಅವಕಾಶಗಳು ಸಿಗುವುದು. ಬಂಗಾರದ ಮೇಲೆ ಬಂಡವಾಳ ಹಾಕಲು ದಿನ ಉತ್ತಮವಾಗಿದೆ. ಕಾಸ್ಮೆಟಿಕ್ ವ್ಯಾಪಾರಿಗಳಿಗೆ ಲಾಭದ ದಿನ.

ಕನ್ಯಾ: ಬುದ್ಧಿವಂತಿಕೆಗೆ ಅಕ್ಕಪಕ್ಕದವರಿಂದ ಅಥವಾ ನಿಮ್ಮ ಪಾಲುದಾರರಿಂದ ಉತ್ತಮ ಪ್ರೋತ್ಸಾಹ ಲಭಿಸಲಿದೆ. ಮನಃಶಾಸ್ತ್ರ ವಿಚಾರದ ಅಧ್ಯಯನ ನಿರತರಿಗೆ ಅನುಕೂಲಕರ ದಿನ. ವಿನ್ಯಾಸದ ಉಡುಪುಗಳ ರಫ್ತಿನಿಂದ ಲಾಭ ಗಳಿಸುವಿರಿ.

ತುಲಾ: ಉತ್ತಮ ವರಮಾನವನ್ನು ಪಡೆಯುವ ಮುಖ್ಯ ಆಕಾಂಕ್ಷೆಯಿಂದ ಸುಲಭದ ಮತ್ತು ಹತ್ತಿರದ ಕೆಲಸವನ್ನು ತಿರಸ್ಕರಿಸಬೇಡಿ. ಸಾವಧಾನದಿಂದ ದಿನದ ಕೆಲಸ ಮಾಡಿ ಮುಗಿಸುವಿರಿ. ನಿಮ್ಮ ನಿಷ್ಠೂರದಿಂದ ಧನಾರ್ಜನೆಗೆ ಅಡ್ಡಿ.

ವೃಶ್ಚಿಕ: ವ್ಯವಹಾರದಲ್ಲಿ ಮಾತಿಗಿಂತ ಕೃತಿ ಮುಖ್ಯ ಎನ್ನುವ ರೀತಿಯಲ್ಲಿ ಸಾಮರ್ಥ್ಯ ತೋರಿಸುವ ಬಗ್ಗೆ ನಿಮ್ಮ ಶ್ರಮವಿರಲಿ. ಸೋಲೊಪ್ಪಿಕೊಳ್ಳದ ನಿಮ್ಮ ಗುಣವು ಸಹಚರರಲ್ಲಿ ಭಿನ್ನಾಭಿಪ್ರಾಯ ಮೂಡಿಸುವುದು.

ಧನು: ಮನೆ ನಿರ್ಮಾಣದ ಕಾರ್ಯ ಅಡ್ಡಿ-ಆತಂಕಗಳಿಲ್ಲದೆ ಸರಾಗವಾಗಿ ನಡೆಯುವುದು ಹಾಗೂ ಯೋಚನೆಗಿಂತ ಅಧಿಕ ಮಟ್ಟದಲ್ಲಿ ಹಣ ವ್ಯಯವಾಗುತ್ತದೆ. ವೃತ್ತಿ ಪರವಾಗಿ ಇರುವ ಸ್ಪರ್ಧೆಗಳಲ್ಲಿ ಮುನ್ನಡೆ ಇರುವುದು.

ಮಕರ: ಸ್ನೇಹಿತರೊಂದಿಗೆ ಜಂಟಿಯಾಗಿ ವ್ಯವಹರಿಸಿದಲ್ಲಿ ಆದಾಯವನ್ನು ದ್ವಿಗುಣಗೊಳಿಸಿಕೊಳ್ಳುವುದಕ್ಕೆ ಸಹಾಯವಾಗುವುದು. ದುಬಾರಿ ಜೀವನ ಶೈಲಿಯನ್ನು ಇಷ್ಟ ಪಡುವ ನಿಮಗೆ ತಕ್ಕಂಥ ಸೌಕರ್ಯ ಸಿಗುವುದು.

ಕುಂಭ: ದಿನಸಿ ವರ್ತಕರು ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚಿನ ಬಂಡವಾಳ ಹಾಕುವ ಬಗ್ಗೆ ಸಂಶಯ ಬೇಡ. ಸಂತಾನ ಅಪೇಕ್ಷಿಗಳಿಗೆ ಫಲ ಪ್ರಾಪ್ತಿಯಾದ ಕಾರಣದಿಂದಾಗಿ ಮನೆಯಲ್ಲಿ ಸಂತಸದ ವಾತಾವರಣ ಇರುವುದು.

ಮೀನ: ತಾಂತ್ರಿಕ ವಿದ್ಯಾಭ್ಯಾಸದ ಅಂತಿಮ ಹಂತ ತಲುಪಿದವರಿಗೆ ಉತ್ತಮ ಹೆಸರುವಾಸಿ ಕಂಪನಿಯಲ್ಲಿ ಉದ್ಯೋಗ ದೊರಕುವುದು. ಈ ದಿನದ ಸುಖಕ್ಕಿಂತ ಹೆಚ್ಚಾಗಿ ಭವಿಷ್ಯದ ಕುರಿತು ಗಂಭೀರ ಆಲೋಚನೆ ಮಾಡುವುದು ಸೂಕ್ತ.

ಪದಬಂಧ 5438 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅನಿರೀಕ್ಷಿತವಾಗಿ ಬಂದ ವ್ಯಕ್ತಿ (4)
3. ಕೊನೆಗೆ ಹಾರವನ್ನಿಟ್ಟು ಹೋಗಲಾಡಿಸುವುದು (4)
5.ಸರ ಧರಿಸಿದ ಸತಿ ಹಚ್ಚಿರುವ ಪಾಳಿ! (3)
6.ವನದ ಕೊನೆಗೆ ಮಾಡಿದ ಹೋಮ (3)
8.ಅತ್ತಿಂದಿತ್ತ ತೂಗಾಡುವ ವಸ್ತು (3)
9.ಒಳ್ಳೆಯ ಸ್ನೇಹಿತ ಇಲ್ಲಿದ್ದಾನೆ (3)
10.ಬನದ ಹತ್ತಿರ ನೀಡಿರುವ ಮುತ್ತು (3)
11.ಧಾನ್ಯವನ್ನು ಶೇಖರಿಸುವ ಸ್ಥಳ (3)
12.ಹೆಚ್ಚು ಪದದ ವಿರುದ್ಧ ಪದ (3)
14.ವರನಲ್ಲಿರುವ ವಾಗ್ಮಿ (3)
16.ಹೂಳಿಟ್ಟ ನಿಧಿಯು ಕರದೊಳಗಿದೆ! (4)
17.ಮಧ್ಯರಾತ್ರಿಯಿದು (4)

ಮೇಲಿಂದ ಕೆಳಕ್ಕೆ
1.ಕೊನೆಗೆ ಗ್ರಹ ಬಿಡಿದಾಗಲೇ ಈ ಹಟ! (3)
2.ಕನಸಲ್ಲಿ ಕಾಣಿಸಿದ ಕೊಳೆ (2)
3.ಪದಾತಿ ಜೊತೆಯಿರುವ ಗಂಡ (2)
4.ರಸ ಸ್ವಾದನೆಯನ್ನು ಬಲ್ಲವನು (3)
7.ತಾರೆಗಳ ಗುಂಪು (5)
8.ಅಯಸ್ಕಾಂತವನ್ನು ಹೀಗೂ ಕರೆವರು (5)
11.ತಿರುಗಿಸಿ ನೋಡಿದರೂ ಇದು ಚಿನ್ನ! (3)
13.ಮಸ್ತಿಷ್ಕ ಇಲ್ಲಿ ಕಾಣುತ್ತಿದೆ (3)
14.ಈತ ಮದುವೆಯ ಗಂಡು (2)
15.ನಗರದಲ್ಲಿರುವ ಮನುಷ್ಯ ತಿರುಗಿದ್ದಾನಲ್ಲಾ? (2)



5437ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹರಾಹುರಿ 3.ಕಕ್ಕುಲತೆ
5.ಪುಢಾರಿ 7.ಉರ
8.ಪತಿ 10.ಕುಸುಮ
11.ಸಂಪ್ರತಿ 13.ರಸ
15.ಸ್ಥಾನ 16.ಜಾತಕ
18.ಕಡಿವಾಣ 19.ರತ್ನಾಕರ

ಮೇಲಿಂದ ಕೆಳಕ್ಕೆ:
1.ಹಸ್ತಕ್ಷೇಪ 2.ರಿಪು 3.ಕರಿ
4.ತೆಪರ 6.ಢಾಳಿಸು
7.ಉಪಚಾರ 9.ತಿರೋಧಾನ
12.ಪ್ರಪಾತ 14.ಸರೋವರ
15.ಸ್ಥಾಪಕ 16.ಜಾಣ
17.ಕರ

ಸುಡೊಕು 5824

				5		7		2
	9		6		7		8	1
		7		3		6		9
	6			1		8		7
7		9	5		3		1	
	8			9		3		5
	7		3		1			
5		6		2			7	
	3		9		5			8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5823 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	100 ಮೊಟ್ಟೆಗೆ	₹495
	12 ಮೊಟ್ಟೆಗೆ	₹68
ಮೈಸೂರು	100 ಮೊಟ್ಟೆಗೆ	₹495

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹200-523
ದ್ವಿತಳಿ (ಬಿ.ವಿ) ₹333-668

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಎಸ್. ದಯಾನಂದ
1946 - 2023
ಶ್ರೀ ಎಸ್. ದಯಾನಂದ ಅವರು 09.09.2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಎಂದು ಪ್ರಾರ್ಥಿಸುತ್ತೇವೆ.
ಇಂತಿ ದುಃಖತಪ್ತ, ಸಹಪಾಠಿ ಮಿತ್ರ
ವಿ. ಲಕ್ಷ್ಮೀನಾರಾಯಣ್
ವ್ಯವಸ್ಥಾಪಕ ನಿರ್ದೇಶಕರು
ನಿರ್ಮಾಣ್ ಶೆಲ್ಟರ್ಸ್ (ಬೆಂ.) ಪ್ರೈ.ಲಿಮಿಟೆಡ್

ಸಚಿವೆ ನಿರ್ಮಲಾ ಸೀತಾರಾಮನ್ ಮಾಹಿತಿ

ವಿದೇಶಿ ಸಾಲ ₹51.92 ಲಕ್ಷ ಕೋಟಿ



ನವದೆಹಲಿ (ಪಿಟಿಐ): 2023ರ ಮಾರ್ಚ್ ಅಂತ್ಯಕ್ಕೆ ಭಾರತದ ವಿದೇಶಿ ಸಾಲವು ₹51.92 ಲಕ್ಷ ಕೋಟಿ ಆಗಿದ್ದು, ಸಾಲ ಮರುಪಾವತಿಸಲು ಲಭ್ಯವಿರುವ ನಗದು ಪ್ರಮಾಣವು ಶೇ 5.3ರಷ್ಟಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಸಾಲದ ಪ್ರಮಾಣ ಇಷ್ಟಿರುವುದು ಹೊರೆಯಲ್ಲ ಎಂದು ನಿರ್ಮಲಾ ಹೇಳಿದ್ದಾರೆ. 'ಭಾರತದ ವಿದೇಶಿ ಸಾಲ: 2022-23' ಸ್ಥಿತಿ ವರದಿಯು ಈಚೆಗೆ ಬಿಡುಗಡೆ ಆಗಿದ್ದು, ಆ ವರದಿಯ ಮುನ್ನುಡಿಯಲ್ಲಿ ನಿರ್ಮಲಾ ಅವರು ಈ ಮಾತು ಹೇಳಿದ್ದಾರೆ.

ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ) ಹಾಗೂ ವಿದೇಶಿ ಸಾಲದ ಅನುಪಾತವು 2021-22ರ ಮಾರ್ಚ್ ಅಂತ್ಯದಲ್ಲಿ ಶೇ 20ರಷ್ಟು ಇದ್ದಿದ್ದು, 2022-23ರ ಮಾರ್ಚ್ ಅಂತ್ಯಕ್ಕೆ ಶೇ 18.9ಕ್ಕೆ ಇಳಿಕೆ ಕಂಡಿದೆ ಎಂದು ತಿಳಿಸಿದ್ದಾರೆ.

ಇತರ ದೇಶಗಳೊಂದಿಗೆ ಹೋಲಿಸಿ ನೋಡುವುದಾದರೆ, ಭಾರತದ ಬಾಹ್ಯ ಸಾಲವು ಕಡಿಮೆ ಮತ್ತು ಮಧ್ಯಮ ಆದಾಯ ಹೊಂದಿರುವ ಬಹುತೇಕ ದೇಶಗಳಿಗಿಂತಲೂ ಉತ್ತಮ ಮಟ್ಟದಲ್ಲಿದೆ. ಇದಕ್ಕೆ ಒಟ್ಟು ಬಾಹ್ಯ ಸಾಲದಲ್ಲಿ ಅಲ್ಪಾವಧಿ ಸಾಲದ ಪ್ರಮಾಣ, ಸರ್ಕಾರದ ಆದಾಯಕ್ಕೆ ಬಾಹ್ಯ ಸಾಲದ ಪ್ರಮಾಣ, ಬಾಹ್ಯ ಸಾಲಕ್ಕೆ ವಿದೇಶಿ ವಿನಿಮಯ ಮೀಸಲಿನ ಪ್ರಮಾಣ ಹಾಗೂ ರಫ್ತಿಗೆ ಬಾಹ್ಯ ಸಾಲದ ಪ್ರಮಾಣವನ್ನು ಆಧಾರವಾಗಿ ಪರಿಗಣಿಸಲಾಗಿದೆ ಎಂದು ನಿರ್ಮಲಾ ತಿಳಿಸಿದ್ದಾರೆ.

ಸಾಲ ಮರುಪಾವತಿಸಲು ಲಭ್ಯ ಇರುವ ನಗದು ಪ್ರಮಾಣವು 2021-22ರಲ್ಲಿ ಶೇ 5.2ರಷ್ಟು ಇತ್ತು. ಇದಕ್ಕೆ ಹೋಲಿಸಿದರೆ 2022-23ರಲ್ಲಿ ಶೇ 5.3ಕ್ಕೆ ಅಲ್ಪ ಏರಿಕೆ ಕಂಡಿದೆ ಎಂದು ವರದಿಯು ತಿಳಿಸಿದೆ.

ಭಾರತದ ವಿದೇಶಿ ಸಾಲವು 2022ರ ಮಾರ್ಚ್ ಅಂತ್ಯಕ್ಕೆ ಹೋಲಿಸಿದರೆ 2023ರ ಮಾರ್ಚ್ ಅಂತ್ಯದಲ್ಲಿ ಶೇ 0.9ರಷ್ಟು ಅಲ್ಪ ಏರಿಕೆ ಕಂಡಿದೆ. ಮೌಲ್ಯದ ಲೆಕ್ಕದಲ್ಲಿ ₹46,547 ಕೋಟಿಯಷ್ಟು ಎಂದು ವರದಿಯು ತಿಳಿಸಿದೆ.

ವಿದೇಶಿ ವಿನಿಮಯ ಮೀಸಲಿನ ಮೊತ್ತವು ಒಟ್ಟು ವಿದೇಶಿ ಸಾಲದ ಶೇ 92.6ರಷ್ಟಕ್ಕೆ ಸರಿಹೊಂದುವಂತೆ ಇದೆ ಎಂದು ವರದಿ ಹೇಳಿದೆ.

ಇಳಿಕೆ ಕಂಡ ಸಾಲದಾತರ ವೆಚ್ಚ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಜಾರಿಗೊಳಿಸಿರುವ ಕೆಲವು ಕ್ರಮಗಳಿಂದಾಗಿ ಸಾಲ ನೀಡುವ ಸಂಸ್ಥೆಗಳು ಹೊಸ ಗ್ರಾಹಕರನ್ನು ಸೆಳೆಯುವ ವೆಚ್ಚವು ಶೇ 70ರಷ್ಟು ಕಡಿಮೆ ಆಗಿದೆ ಎಂದು ಆರ್‌ಬಿಐನ ಕಾರ್ಯನಿರ್ವಾಹಕ ನಿರ್ದೇಶಕ ಅಜಯ್ ಕುಮಾರ್ ಚೌಧರಿ ಹೇಳಿದ್ದಾರೆ.

ಸಾಲ ನೀಡುವ ಸಂಸ್ಥೆಗಳಿಗೆ ಮಾಹಿತಿ ಸುಲಭವಾಗಿ ಲಭ್ಯವಾಗುವಂತೆ ಮಾಡುವ ವ್ಯವಸ್ಥೆಯೊಂದನ್ನು ಆರ್‌ಬಿಐನ ಅಂಗಸಂಸ್ಥೆ ರಿಸರ್ವ್ ಬ್ಯಾಂಕ್ ಇನೊವೇಷನ್ ಹಬ್ ರೂಪಿಸಿದೆ. ಹಣಕಾಸು ಸಂಸ್ಥೆಗಳಿಗೆ ಸುಲಭವಾಗಿ ಸಾಲ ವಿತರಣೆ ಮಾಡಲು ಇದು ನೆರವಾಗುತ್ತದೆ.

ಆರಂಭಿಕ ಹಂತದಲ್ಲಿ ತಮಿಳುನಾಡು ಮತ್ತು ಮಧ್ಯಪ್ರದೇಶದಲ್ಲಿ ಏಪ್ರಿಲ್‌ನಲ್ಲಿ ಡಿಜಿಟಲ್ ಕಿಸಾನ್ ಕ್ರೆಡಿಟ್ ಕಾರ್ಡ್ ಮೂಲಕ ಸಾಲ ನೀಡುವುದನ್ನು ಜಾರಿಗೊಳಿಸಲಾಯಿತು. ನಂತರ ಆಗಸ್ಟ್ 17ರಿಂದ ಕರ್ನಾಟಕ, ಮಹಾರಾಷ್ಟ್ರ, ಉತ್ತರ ಪ್ರದೇಶ ಮತ್ತು ಗುಜರಾತ್‌ನ ಡೇರಿ ಫಾರ್ಮ್‌ಗಳಿಗೂ ವಿಸ್ತರಿಸಲಾಗಿದೆ.

ಆರಂಭಿಕ ಹಂತದಲ್ಲಿ ರೈತರಿಗೆ ಸುಲಭವಾಗಿ ಸಾಲ ಸಿಗುವಂತೆ ಮಾಡಿದ್ದರಿಂದ ಕಾರ್ಯಾಚರಣೆ ವೆಚ್ಚವು ಶೇ 70ಕ್ಕಿಂತಲೂ ಅಧಿಕ ಪ್ರಮಾಣಲದಲ್ಲಿ ಇಳಿಕೆಯಾಗಿದೆ ಎಂದು ಅಜಯ್ ಅವರು ಜಾಗತಿಕ ಫಿನ್‌ಟೆಕ್ ಸಮಾವೇಶದಲ್ಲಿ ತಿಳಿಸಿದ್ದಾರೆ.

ಲಾರ್ಜ್ ಕ್ಯಾಪ್ ಫಂಡ್ ಯಾರಿಗೆ?

ಬಂಡವಾಳ ಮಾರುಕಟ್ಟೆ
ಕಾವ್ಯ ಡಿ.

ಭಾರತದ ಅತ್ಯುತ್ತಮ ಕಂಪನಿಗಳ ಮೇಲೆ ಹಣ ಹೂಡಿಕೆ ಮಾಡಿ ಲಾಭ ಗಳಿಸಬೇಕು ಎನ್ನುವ ಬಯಕೆ ಪ್ರತಿ ಹೂಡಿಕೆದಾರನಿಗೂ ಇರುತ್ತದೆ. ಆದರೆ ನೇರವಾಗಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ಹಲವರು ಭಯಪಡುತ್ತಾರೆ. ಅಂತಹ ಹೂಡಿಕೆಗದಾರರಿಗೆ ಉತ್ತಮ ಆಯ್ಕೆ ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್.

ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳು ಷೇರು ಮಾರುಕಟ್ಟೆಯ ಅಗ್ರಮಾನ 100 ಕಂಪನಿಗಳ ಮೇಲೆ ಹೂಡಿಕೆ ಮಾಡುತ್ತವೆ. ಅಂದರೆ ಈ ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ ದೇಶದ ಟಾಪ್ 100 ಕಂಪನಿಗಳಲ್ಲಿ ನೀವೂ ಒಂದಿಷ್ಟು ಪಾಲು ಪಡೆದುಕೊಂಡಂತೆ! ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್ ಅಂದರೆ ಏನು? ಇವುಗಳಲ್ಲಿ ಹೂಡಿಕೆ ಯಾರಿಗೆ ಸೂಕ್ತ? ತಿಳಿಯೋಣ.

ಷೇರು ಮಾರುಕಟ್ಟೆಯಲ್ಲಿರುವ 100 ಅಗ್ರಮಾನ್ಯ ಕಂಪನಿಗಳನ್ನು ಲಾರ್ಜ್ ಕ್ಯಾಪ್ ಕಂಪನಿಗಳು ಎಂದು ಕರೆಯುತ್ತೇವೆ. ಇಂತಹ ಕಂಪನಿಗಳಲ್ಲಿ ಹೂಡಿಕೆ ಮಾಡುವ ಮ್ಯೂಚುವಲ್ ಫಂಡ್‌ಗಳನ್ನು ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳು ಎಂದು ಕರೆಯಲಾಗುತ್ತದೆ. ಎಚ್‌ಡಿಎಫ್‌ಸಿ ಬ್ಯಾಂಕ್, ಟೈಟನ್, ಬ್ರಿಟಾನಿಯಾ, ರಿಲಯನ್ಸ್ , ಹಿಂದೂಸ್ತಾನ್ ಯುನಿಲಿವರ್, ಏಷ್ಯನ್ ಪೇಂಟ್ಸ್, ಐಟಿಸಿ ಸೇರಿ ಹೆಸರಾಂತ ಕಂಪನಿಗಳು ಲಾರ್ಜ್ ಕ್ಯಾಪ್ ಫಂಡ್ ವ್ಯಾಪ್ತಿಗೆ ಬರುತ್ತವೆ. ಇಂತಹ ಕಂಪನಿಗಳ ಮಾರುಕಟ್ಟೆ ಮೌಲ್ಯ ಸುಮಾರು ₹20 ಸಾವಿರ ಕೋಟಿಗೂ ಹೆಚ್ಚಿಗೆ ಇರುತ್ತದೆ.

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ನಿಯಮದ ಪ್ರಕಾರ ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್ ಕಂಪನಿಗಳು ಹೂಡಿಕೆದಾರರು ತೊಡಗಿಸುವ ಶೇ 80ರಷ್ಟು ಹಣವನ್ನು ಅತ್ಯುತ್ತಮ ಎನಿಸುವ ಪ್ರಮುಖ 100 ಕಂಪನಿಗಳ ಮೇಲೆ ತೊಡಗಿಸಬೇಕು. ಇನ್ನುಳಿದ ಶೇ 20ರಷ್ಟು ಹಣವನ್ನು ಮಿಡ್ ಕ್ಯಾಪ್ ಕಂಪನಿಗಳ ಮೇಲೆ ತೊಡಗಿಸಲು ಅವಕಾಶವಿದೆ. ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳು ಹೂಡಿಕೆದಾರರ ಹಣದ ಬಹುಪಾಲನ್ನು ದೊಡ್ಡ ಕಂಪನಿಗಳ ಮೇಲೆ ಹೂಡಿಕೆ ಮಾಡುವುದರಿಂದ ಮಿಡ್ ಕ್ಯಾಪ್ ಅಥವಾ ಸ್ಮಾಲ್ ಕ್ಯಾಪ್ ಕಂಪನಿಗಳಲ್ಲಿರುವ ಅನಿಶ್ಚಿತತೆ ಇಲ್ಲಿ ಕಂಡುಬರುವುದಿಲ್ಲ. ದೀರ್ಘಾವಧಿ ಮತ್ತು ಮಧ್ಯಮ ಅವಧಿಯಲ್ಲಿ ಈ ಫಂಡ್ ಗಳು ಹೂಡಿಕೆದಾರರಿಗೆ ಉತ್ತಮ ಲಾಭ ತಂದುಕೊಡುತ್ತವೆ.

ಈಕ್ವಿಟಿ ಮ್ಯೂಚುವಲ್ ಫಂಡ್ ಹೂಡಿಕೆಗೆ ಹೊಸಬರು, ಹೆಚ್ಚು ರಿಸ್ಕ್ ತೆಗೆದುಕೊಳ್ಳಲು ತಯಾರಿಲ್ಲದವರು ಲಾರ್ಜ್ ಕ್ಯಾಪ್ ಫಂಡ್‌ಗಳನ್ನು ಪರಿಗಣಿಸಬಹುದು. ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳಿಗೆ ಹೋಲಿಸಿದರೆ ಲಾರ್ಜ್ ಕ್ಯಾಪ್ ಕಂಪನಿಗಳಲ್ಲಿ ಅನಿಶ್ಚಿತತೆ ಕಡಿಮೆ. ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳು ಸಾಮಾನ್ಯವಾಗಿ ಉತ್ತಮ ಕಂಪನಿಗಳ ಮೇಲೆ ಹೆಚ್ಚು ಹಣ ತೊಡಗಿಸುವ ಕಾರಣ, ನಿಶ್ಚಿತ ಲಾಭ ಸಿಗುವ ಸಾಧ್ಯತೆ ಹೆಚ್ಚು. 5 ವರ್ಷಗಳ ಹೂಡಿಕೆ ಅವಧಿಯೊಂದಿಗೆ ಲಾರ್ಜ್ ಕ್ಯಾಪ್ ಫಂಡ್‌ಗಳಲ್ಲಿ ತೊಡಗಿಸಿದರೆ ಉತ್ತಮ ಲಾಭದ ಸಾಧ್ಯತೆ ಹೆಚ್ಚಿರುತ್ತದೆ.

ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳಿಗೆ ಹೋಲಿಕೆ ಮಾಡಿ ನೋಡಿದಾಗ ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳಲ್ಲಿ ಲಾಭದ ಪ್ರಮಾಣ ಕೊಂಚ ಕಡಿಮೆ. ಈ ಫಂಡ್‌ಗಳು ಕಳೆದ ಐದು ವರ್ಷಗಳ ಅವಧಿಯಲ್ಲಿ ವಾರ್ಷಿಕ ಶೇ 12.67ರಷ್ಟು ಸರಾಸರಿ ಲಾಭ ತಂದುಕೊಟ್ಟಿವೆ. ಮಿಡ್ ಕ್ಯಾಪ್ ಫಂಡ್‌ಗಳು ಇದೇ ಅವಧಿಯಲ್ಲಿ ಶೇ 18.36ರಷ್ಟು ಲಾಭ ನೀಡಿದ್ದರೆ ಸ್ಮಾಲ್ ಕ್ಯಾಪ್ ಫಂಡ್‌ಗಳು ಶೇ 21.4ರಷ್ಟು ಲಾಭ ಒದಗಿಸಿವೆ.

ಯಾವ ಲಾರ್ಜ್ ಕ್ಯಾಪ್ ಫಂಡ್ ಉತ್ತಮ ಎಂದು ತೀರ್ಮಾನಿಸುವ ಮುನ್ನ ಅಲ್ಲಿನ ಕಮಿಷನ್ ದರ ಎಷ್ಟಿದೆ ಎನ್ನುವುದನ್ನೂ ನೋಡಿಕೊಳ್ಳಿ. ಫಂಡ್ ಆಯ್ಕೆ ನಿಮಗೆ ತಿಳಿಯದಿದ್ದರೆ ವೃತ್ತಿಪರ ಹೂಡಿಕೆ ತಜ್ಞರ ನೆರವು ಪಡೆಯಿರಿ. ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದ ಒಂದು ವರ್ಷದ ಒಳಗಾಗಿ ನಗದೀಕರಣಕ್ಕೆ ಮುಂದಾದರೆ ಗಳಿಕೆಯ ಮೇಲೆ ಶೇ 15ರಷ್ಟು ತೆರಿಗೆ ಕಟ್ಟಬೇಕಾಗುತ್ತದೆ. ಹೂಡಿಕೆ ಮಾಡಿದ ಒಂದು ವರ್ಷದ ಬಳಿಕ ನಗದೀಕರಣಕ್ಕೆ ಮುಂದಾಗಿ ಲಾಭವು ₹1 ಲಕ್ಷದ ಒಳಗಿದ್ದರೆ ತೆರಿಗೆ ಇಲ್ಲ. ₹1 ಲಕ್ಷ ಮೀರಿದ ಲಾಭಕ್ಕೆ ಶೇ 10ರಷ್ಟು ತೆರಿಗೆ ಕಟ್ಟಬೇಕಾಗುತ್ತದೆ.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಸತತ ಎರಡನೇ ವಾರವೂ ಜಿಗಿತ

ಸೆಪ್ಟೆಂಬರ್ 8ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. 66,598 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.85ರಷ್ಟು ಹೆಚ್ಚಳವಾಗಿದೆ. 19,820 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.97ರಷ್ಟು ಜಿಗಿದಿದೆ. ಸತತ ಎರಡನೇ ವಾರ ಷೇರುಪೇಟೆ ಸೂಚ್ಯಂಕಗಳು ಗಣನೀಯ ಹೆಚ್ಚಳ ಕಂಡಿವೆ. ಅಮೆರಿಕ ಫೆಡರಲ್ ಬ್ಯಾಂಕ್ ಬಡ್ಡಿ ದರ ಹೆಚ್ಚಳ ಸ್ಥಗಿತಗೊಳಿಸುತ್ತದೆ ಎಂಬ ಆಶಾಭಾವ, ದೇಶಿ ಹೂಡಿಕೆದಾರರಿಂದ ಉತ್ತಮ ಖರೀದಿ ಸೇರಿದಂತೆ ಕೆಲವು ಅಂಶಗಳು ಮಾರುಕಟ್ಟೆಗೆ ಪೂರಕವಾಗಿ ವರ್ತಿಸಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 5ರಷ್ಟು, ಕ್ಯಾಪಿಟಲ್ ಗೂಡ್ಸ್ ಸೂಚ್ಯಂಕ ಶೇ 5ರಷ್ಟು, ಎನರ್ಜಿ ಸೂಚ್ಯಂಕ ಶೇ 4.7ರಷ್ಟು ಮತ್ತು ಬಿಎಸ್‌ಇ ಪವರ್ ಸೂಚ್ಯಂಕ ಶೇ 4.7ರಷ್ಟು ಜಿಗಿದಿವೆ.

ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹9,321.41 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹4,527.14 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಕೋಲ್ ಇಂಡಿಯಾ, ನೈಕಾ, ಶ್ರೀ ಸಿಮೆಂಟ್ಸ್, ಲಾರ್ಸನ್ ಆ್ಯಂಡ್ ಟೂಬ್ರೊ ಮತ್ತು ಎಚ್‌ಸಿಎಲ್ ಟೆಕ್ನಾಲಜೀಸ್ ಉತ್ತಮ ಗಳಿಕೆ ಕಂಡಿವೆ. ಬಿಎಸ್‌ಇ ಮಿಡ್ ಕ್ಯಾಪ್‌ನಲ್ಲಿ ಪವರ್ ಫೈನಾನ್ಸ್ ಕಾರ್ಪೊರೇಷನ್, ಐಡಿಬಿಐ ಬ್ಯಾಂಕ್, ಪೆಟ್ರೋನೆಟ್ ಎಲ್‌ಎನ್‌ಜಿ, ಆರ್‌ಇಸಿ, ಅದಾನಿ ಪವರ್, ಜೆಎಸ್‌ಡಬ್ಲ್ಯು ಎನರ್ಜಿ, ಬಾಯೇರ್ ಕ್ರಾಪ್ ಸೈನ್ಸ್ ಮತ್ತು ಟ್ಯೂಬ್ ಇನ್ವೆಸ್ಟ್‌ಮೆಂಟ್ಸ್ ಶೇ 10ರಿಂದ ಶೇ 18ರಷ್ಟು ಜಿಗಿದಿವೆ.

ಮುನ್ನೋಟ: ಮಾರುಕಟ್ಟೆ ತಜ್ಞರ ಪ್ರಕಾರ ನಿಫ್ಟಿ ಸದ್ಯದಲ್ಲೇ 20 ಸಾವಿರದ ಗಡಿ ದಾಟುವ ಸಾಧ್ಯತೆಯಿದೆ. ಜಿ–20 ಸಮಾವೇಶದಲ್ಲಿ ವಿಶ್ವದ ಪ್ರಮುಖ ನಾಯಕರು ಕೈಗೊಳ್ಳುವ ನಿರ್ಣಯಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಸಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆಯಿದೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶಿ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸುಡಾನ್: ಡ್ರೋನ್ ದಾಳಿ, ಕನಿಷ್ಠ 43 ಮಂದಿ ಸಾವು

ಕೈರೊ (ಎ.ಪಿ): ಸುಡಾನ್‌ನ ರಾಜಧಾನಿಯಲ್ಲಿ ಸೇನೆ ಮತ್ತು ಅರೆಸೇನಾ ಪಡೆಗಳ ನಡುವಿನ ಸಂಘರ್ಷ ಮುಂದುವರಿದಿದೆ. ಖಾರ್ಟೂಮ್‌ನಲ್ಲಿ ಮಾರುಕಟ್ಟೆಯೊಂದರ ಮೇಲೆ ಭಾನುವಾರ ಡ್ರೋನ್ ದಾಳಿ ನಡೆದಿದ್ದು, ಕನಿಷ್ಠ 43 ಜನರು ಮೃತಪಟ್ಟಿದ್ದಾರೆ.

ಅಲ್ಲದೆ, 55ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ರಕ್ಷಣಾ ಕಾರ್ಯಕರ್ತರು ತಿಳಿಸಿದ್ದಾರೆ.

ದೇಶದ ಮೇಲೆ ಹಿಡಿತಕ್ಕೆ ಸೇನೆ ಮುಖ್ಯಸ್ಥ ಜನರಲ್ ಅಬ್ದೆಲ್ ಫಟ್ಟಾ ಬುರ್ಹಾನ್, ಅರೆಸೇನಾ ಪಡೆಯ ಮುಖ್ಯಸ್ಥ ಜನರಲ್ ಮೊಹಮ್ಮದ್ ಹಮ್ದನ್ ಡಗಲೊ ಅವರು ಸಂಘರ್ಷ ನಡೆಸಿದ್ದಾರೆ. ಪರಿಣಾಮ ಈ ವರ್ಷದ ಏಪ್ರಿಲ್ ಮಧ್ಯಭಾಗದಿಂದಲೂ ಬಿಗುವಿನ ಸ್ಥಿತಿ ಇದೆ. ಹಲವೆಡೆ ಹೆಚ್ಚಿನ ಪಡೆಗಳನ್ನು ಭದ್ರತೆಗೆ ನಿಯೋಜಿಸಲಾಗಿದೆ.

ಮೊರೊಕ್ಕೊ ಭೂಕಂಪನ: ವಿವಿಧ ದೇಶಗಳಿಂದ ನೆರವಿನ ಭರವಸೆ

2,100 ದಾಟಿದ ಸಾವಿನ ಸಂಖ್ಯೆ

ಭೂಕಂಪ ಪೀಡಿತ ಮೊರೊಕ್ಕೊದ ಮಾರುಕೇಶ್ ನಗರದ ಬಳಿಯ ಗ್ರಾಮವೊಂದರಲ್ಲಿ ಮೊರೊಕ್ಕೊದ ರಾಯಲ್ ಸೇನಾ ಪಡೆಯ ಸಿಬ್ಬಂದಿ ರಕ್ಷಣಾ ಕಾರ್ಯದಲ್ಲಿ ತೊಡಗಿರುವುದು –ಎಎಫ್‌ಪಿ ಚಿತ್ರ

ಮಾರುಕೇಶ್, ಮೊರೊಕ್ಕೊ (ಎ.ಪಿ): ತೀವ್ರ ಭೂಕಂಪನ ಸಂಭವಿಸಿದ್ದ ಮೊರೊಕ್ಕೊದಲ್ಲಿ ಮೃತಪಟ್ಟವರ ಸಂಖ್ಯೆ ಭಾನುವಾರ 2,100ರ ಗಡಿ ದಾಟಿದೆ.

ಮೊರೊಕ್ಕೊವಿನ ಒಳಾಡಳಿತ ಸಚಿವಾಲಯದ ಪ್ರಕಾರ, ಶನಿವಾರ ಮೃತರ ಸಂಖ್ಯೆ ಶನಿವಾರ 2,122ಕ್ಕೆ ತಲುಪಿತ್ತು. ಅವಶೇಷಗಳಡಿ ಸಿಲುಕಿದವರ ಶೋಧ ಕಾರ್ಯ ನಡೆದಿದೆ. ಮೃತರ ಸಂಖ್ಯೆಯು ಇನ್ನಷ್ಟು ಏರಬಹುದು.

ಗರಿಷ್ಠ ಸಂಖ್ಯೆಯಲ್ಲಿ ಅಲ್ ಹೌಜ್ ಪ್ರಾಂತ್ಯದಲ್ಲಿ ಅಂದರೆ, ಸುಮಾರು 1,293 ಜನ ಸತ್ತಿದ್ದರೆ, ಟರೌಡಂಟ್‌ನಲ್ಲಿ 452 ಜನರು ಸತ್ತಿದ್ದಾರೆ. 2,059 ಜನರು ಗಾಯಗೊಂಡಿದ್ದು, ಈ ಪೈಕಿ 1,404 ಜನರ ಸ್ಥಿತಿಯು ಗಂಭೀರವಾಗಿದೆ.

ಪ್ರಾಕೃತಿಕ ವಿಕೋಪದ ಹಿನ್ನೆಲೆ ಹಾಗೂ ಮೃತರ ಗೌರವಾರ್ಥ ಸರ್ಕಾರ ಮೂರು ದಿನ ರಾಷ್ಟ್ರೀಯ ಶೋಕ ಘೋಷಿಸಿದೆ. ಉತ್ತರ ಆಫ್ರಿಕಾದ ದೇಶ ಮೊರೊಕ್ಕೊದಲ್ಲಿ ಶುಕ್ರವಾರ ರಾತ್ರಿ 6.8 ತೀವ್ರತೆಯ ಭೂಕಂಪನ ಬಾಧಿಸಿತ್ತು. 120 ವರ್ಷದ ಇತಿಹಾಸದಲ್ಲೇ ಇದು ಗಂಭೀರವಾದುದು.

ನೆರವಿಗೆ ಎಂಎಸ್‌ಎಫ್ ಸಜ್ಜು: ಡಾಕ್ಟರ್ಸ್ ವಿತ್‌ಔಟ್ ಬಾರ್ಡರ್ಸ್ ಅಥವಾ ಎಂಎಸ್‌ಎಫ್ ಸಂಘಟನೆಯು ಕೂಡಾ ಭೂಕಂಪನ ಪೀಡಿತ ಮೊರೊಕ್ಕೊದಲ್ಲಿ ಅಗತ್ಯ ನೆರವು ಒದಗಿಸಲು ಸಜ್ಜಾಗಿದ್ದೇವೆ ಎಂದು ಭರವಸೆ ನೀಡಿದೆ.

ಪೋಪ್ ಕಳವಳ: ಪೋಪ್ ಫ್ರಾನ್ಸಿಸ್ ಅವರು, ಪ್ರಕೃತಿ ವಿಕೋಪದ ಪರಿಣಾಮ ಕುರಿತು ಕಳವಳ ವ್ಯಕ್ತಪಡಿಸಿದ್ದು, ಬಾಧಿತ ಜನರ ಜೊತೆಗೆ ನಾವಿದ್ದೇವೆ ಎಂದಿದ್ದಾರೆ ಫ್ರಾನ್ಸಿಸ್ ಅವರು 2019ರಲ್ಲಿ ಮೊರೊಕ್ಕೊಗೆ ಭೇಟಿ ನೀಡಿದ್ದರು.

ನೆರವಿನ ಅಭಯ: ಭೂಕಂಪನದ ತೀವ್ರತೆ, ಸಾವು ನೋವು ಕುರಿತು ಕಳವಳ ವ್ಯಕ್ತಪಡಿಸಿರುವ ವಿವಿಧ ದೇಶಗಳ ಮುಖಂಡರು, ಮೊರೊಕ್ಕೊಗೆ ಅಗತ್ಯ ನೆರವು ನೀಡುವ ಭರವಸೆಯನ್ನು ನೀಡಿವೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್, 'ಮೊರೊಕ್ಕೊ ಆಡಳಿತದ ಜೊತೆಗೆ ಅಧಿಕಾರಿಗಳು ಸಂಪರ್ಕದಲ್ಲಿದ್ದಾರೆ' ಎಂದಿದ್ದಾರೆ. ಭೂಕಂಪನದಲ್ಲಿ ಇದೇ ವರ್ಷ ಅಸಂಖ್ಯ ಜನರ ಕಳೆದುಕೊಂಡಿದ್ದ ಟರ್ಕಿಯೆ ಕೂಡಾ ನೆರವಿನ ಅಭಯ ನೀಡಿದೆ. ಫ್ರಾನ್ಸ್, ಜರ್ಮನಿ, ಇಸ್ರೇಲ್ ದೇಶಗಳೂ ನೆರವಿಗೆ ಮುಂದೆಬಂದಿವೆ.

ಬ್ರಿಟಿಷ್ ಚಾನಲ್ 4 ಆರೋಪದ ತನಿಖೆ: ಶ್ರೀಲಂಕಾ

ಕೊಲಂಬೊ (ಪಿಟಿಐ): 2019ರ ಈಸ್ಟರ್ ದಿನದಂದು ಇಲ್ಲಿ ನಡೆದಿದ್ದ ಭಯೋತ್ಪಾದಕರ ದಾಳಿ ಕೃತ್ಯ ಕುರಿತು ಬ್ರಿಟಿಷ್ ಚಾನಲ್ 4 ಮಾಡಿರುವ ಆರೋಪಗಳಿಗೆ ಸಂಬಂಧಿಸಿ ತನಿಖೆ ನಡೆಸಲಾಗುವುದು ಎಂದು ಶ್ರೀಲಂಕಾದ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಭಾನುವಾರ ತಿಳಿಸಿದರು.

ಇಸ್ಲಾಮಿಸ್ಟ್ ಉಗ್ರರ ಸಂಘಟನೆಯು ಅಂದು ಇಲ್ಲಿನ ಚರ್ಚ್‌ಗಳು ಹಾಗೂ ತಾರಾ ಹೋಟೆಲ್‌ಗಳಲ್ಲಿ ಏಕಕಾಲದಲ್ಲಿ ದಾಳಿ ನಡೆಸಿತ್ತು. ಈ ಕೃತ್ಯದಲ್ಲಿ 11 ಮಂದಿ ಭಾರತೀಯರು ಸೇರಿದಂತೆ ಒಟ್ಟು 270 ಜನರು ಸತ್ತಿದ್ದರು.

ಕೃತ್ಯ ಕುರಿತಂತೆ ಕಳೆದ ಮಂಗಳವಾರ ಸಾಕ್ಷ್ಯಚಿತ್ರ ಪ್ರಸಾರ ಮಾಡಿದ್ದ ಬ್ರಿಟನ್‌ನ ಚಾನಲ್ 4, 'ಅಪರಾಧ ಕೃತ್ಯದಲ್ಲಿ ಗುಪ್ತದಳ ಸೇವೆಯ ಮುಖ್ಯಸ್ಥರು ಸೇರಿದಂತೆ ಸರ್ಕಾರದ ಕೆಲ ಅಧಿಕಾರಿಗಳ ಪಾತ್ರವೂ ಇದೆ. ಇದು, ಯೋಜಿತ ಕೃತ್ಯ' ಎಂದು ಆರೋಪಿಸಿತ್ತು.

ಬಿಜೆಪಿ ಕಾರ್ಯಶೈಲಿಯಲ್ಲಿ ಹಿಂದೂ ಎಂಬುದಿಲ್ಲ: ರಾಹುಲ್

ಲಂಡನ್ (ಪಿಟಿಐ): 'ಅಧಿಕಾರಕ್ಕಾಗಿ ಆಡಳಿತರೂಢ ಬಿಜೆಪಿ ಯಾವುದೇ ಕ್ರಮಕ್ಕೆ ಮುಂದಾಗಲಿದೆ. ಆ ಪಕ್ಷದ ಕಾರ್ಯಚಟುವಟಿಕೆಯಲ್ಲಿ ನಿರ್ದಿಷ್ಟವಾಗಿ ಹಿಂದೂ ಎಂಬುದೇನೂ ಇಲ್ಲ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಟೀಕಿಸಿದರು.

ಪ್ಯಾರಿಸ್‌ನ ಸೈನ್ಸ್ ಪಿ.ಒ ಯುನಿವರ್ಸಿಟಿಯಲ್ಲಿ ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ಕ್ಷೇತ್ರದ ಪ್ರಮುಖರ ಜೊತೆಗೆ ನಡೆದ ಸಂವಾದದಲ್ಲಿ ಅವರು, ತಾವು ಕೈಗೊಂಡಿದ್ದ 'ಭಾರತ್ ಜೋಡೊ' ಯಾತ್ರೆ, ಪ್ರತಿಪಕ್ಷಗಳ ಮೈತ್ರಿಕೂಟ 'ಇಂಡಿಯಾ' ಕುರಿತು ಅಭಿಪ್ರಾಯ ಹಂಚಿಕೊಂಡರು.

'ಭಾರತದ ಆತ್ಮವನ್ನು ರಕ್ಷಿಸುವ ಹೋರಾಟವನ್ನು ಮುಂದುವರಿಸಲು 'ಇಂಡಿಯಾ' ಬದ್ಧವಾಗಿದೆ. ಪ್ರಸ್ತುತ ಆವರಿಸಿರುವ ಪ್ರಕ್ಷುಬ್ಧ ವಾತಾವರಣದಿಂದ ದೇಶವು ಹೊರಬರಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ನಾನು 'ಗೀತಾ' ಓದಿದ್ದೇನೆ. ಉಪನಿಷತ್‌ನ ಹಲವು ಭಾಗಗಳನ್ನು ಓದಿದ್ದೇನೆ. ಹಲವಾರು ಹಿಂದೂ ಪುಸ್ತಕಗಳನ್ನೂ ಓದಿದ್ದೇನೆ. ಬಿಜೆಪಿಯ ಯಾವುದೇ ಕಾರ್ಯಚಟುವಟಿಕೆಯಲ್ಲಿ ಹಿಂದೂ ಎಂಬುದಿಲ್ಲ, ಖಂಡಿತವಾಗಿ ಏನೂ ಇಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ನೀವು ಭಯ ಮೂಡಿಸಬೇಕು, ದುರ್ಬಲಗೊಳಿಸಲು ಜನರಿಗೆ ತೊಂದರೆ ಕೊಡಬೇಕು ಎಂದು ಯಾವುದೇ ಹಿಂದೂ ಪುಸ್ತಕದಲ್ಲಿ ನಾನು ಓದಿಲ್ಲ. ಹಿಂದೂ ರಾಷ್ಟ್ರೀಯವಾದ ಎಂಬುದೇ ಸರಿಯಾದ ಬಳಕೆಯಲ್ಲ. ಹಿಂದುತ್ವಕ್ಕೂ ಅವರಿಗೂ ಸಂಬಂಧವಿಲ್ಲ' ಎಂದು ವ್ಯಾಖ್ಯಾನಿಸಿದರು.

'ದೇಶದಲ್ಲಿ ಶೇ 60ರಷ್ಟು ಮತದಾರರು ವಿರೋಧಪಕ್ಷಗಳಿಗೆ ಮತ ನೀಡಿದ್ದಾರೆ. ಶೇ 40ರಷ್ಟು ಮತದಾರರಷ್ಟೇ ಬಿಜೆಪಿಗೆ ಮತ ನೀಡಿದ್ದಾರೆ. ಹೀಗಾಗಿ, ಬಹುಸಂಖ್ಯಾತರು ಬಿಜೆಪಿಗೆ ಮತ ನೀಡುತ್ತಾರೆ ಎಂಬುದೂ ತಪ್ಪು ಗ್ರಹಿಕೆ' ಎಂದು ಪ್ರತಿಪಾದಿಸಿದರು.

ಹಸ್ತಕ್ಷೇಪ: ಚೀನಾ ಎದುರು ಬ್ರಿಟನ್ ಆಕ್ಷೇಪ

ಲಂಡನ್ (ಪಿಟಿಐ): ಬ್ರಿಟನ್‌ನ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚೀನಾವು ಹಸ್ತಕ್ಷೇಪ ನಡೆಸುತ್ತಿದೆ ಎಂಬ ಆರೋಪಗಳ ಕುರಿತಂತೆ ಬ್ರಿಟನ್ ಸರ್ಕಾರವು ಚೀನಾದ ವಿದೇಶಾಂಗ ಸಚಿವರ ಎದುರು ತನ್ನ ಆಕ್ಷೇಪವನ್ನು ದಾಖಲಿಸಿದೆ.

'ಜಿ20 ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದ ಚೀನಾದ ವಿದೇಶಾಂಗ ಸಚಿವ ಲಿ ಕ್ವಿಯಾಂಗ್ ಅವರ ಭೇಟಿ ಸಂದರ್ಭದಲ್ಲಿ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು ಭಾನುವಾರ ಬ್ರಿಟನ್‌ನ ಕಳವಳ ಕುರಿತು ಗಮನಸೆಳೆದರು' ಎಂದು 10 ಡೌನಿಂಗ್ ಸ್ಟ್ರೀಟ್‌ನ ವಕ್ತಾರರು ತಿಳಿಸಿದ್ದಾರೆ.

ಚೀನಾದ ಪರವಾಗಿ ಇಬ್ಬರು ವ್ಯಕ್ತಿಗಳು ಗೂಢಚಾರಿಕೆ ನಡೆಸಿದ್ದಾರೆ. ಅವರನ್ನು ಬ್ರಿಟನ್‌ನ ಅಧಿಕೃತ ರಹಸ್ಯ ಕಾಯ್ದೆಯಡಿ ಬಂಧಿಸಲಾಗಿದೆ ಎಂದು ಬ್ರಿಟನ್‌ನ 'ದ ಸಂಡೇ ಟೈಮ್ಸ್' ದೈನಿಕ ಇತ್ತೀಚೆಗೆ ವರದಿ ಮಾಡಿತ್ತು.

'ಟ್ಯಾಬ್ಲೆಟ್ ಬೇಡ: ಪುಸ್ತಕ ಓದಿಸಿ, ಬರೆಯಿಸಿ'

ಸಾಂಕೇತಿಕ ಚಿತ್ರ

ಸ್ಟಾಕ್‌ಹೋಂ, ಸ್ವೀಡನ್ (ಎ.ಪಿ): ಪ್ರಾಥಮಿಕ ಹಂತದ ವಿದ್ಯಾರ್ಥಿಗಳಲ್ಲಿ ಪಠ್ಯವನ್ನು ಓದುವ ಮತ್ತು ಕೈಬರಹದ ಅಭ್ಯಾಸಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು ಎಂದು ಸ್ವೀಡನ್ ಸರ್ಕಾರವು ಶಿಕ್ಷಕರಿಗೆ ಸೂಚಿಸಿದೆ.

ಆನ್‌ಲೈನ್ ಸಂಶೋಧನೆ, ಕೀ ಬೋರ್ಡ್ ಕೌಶಲ, ಟ್ಯಾಬ್ಲೆಟ್‌ಗಳಲ್ಲಿ ಹೆಚ್ಚು ಸಮಯ ಕಳೆಯುವುದನ್ನು ತಪ್ಪಿಸಬೇಕು' ಎಂದು 11 ತಿಂಗಳ ಹಿಂದೆ ಅಸ್ತಿತ್ವಕ್ಕೆ ಬಂದಿರುವ ಮೈತ್ರಿ ಸರ್ಕಾರದಲ್ಲಿನ ಶಿಕ್ಷಣ ಸಚಿವ ಲೊಟ್ಟಾ ಎಡ್ಹೋಮ್ ಅವರು ಸೂಚಿಸಿದ್ದರು.

'ಸ್ವೀಡನ್‌ನಲ್ಲಿ ನರ್ಸರಿ ಹಂತದಲ್ಲೇ ಟ್ಯಾಬ್ಲೆಟ್ ಪರಿಚಯಿಸಲಾಗಿದೆ. ಇದರಿಂದ ಕಲಿಕೆಗೆ ಸಂಬಂಧಿಸಿ ಮಕ್ಕಳಲ್ಲಿ ಪ್ರಾಥಮಿಕ ಕೌಶಲವು ಕುಗ್ಗಲಿದೆ' ಎಂದು ರಾಜಕಾರಣಿಗಳು ಹಾಗೂ ಶಿಕ್ಷಣ ಕ್ಷೇತ್ರದ ಹಲವು ಪರಿಣತರು ವಿರೋಧ ವ್ಯಕ್ತಪಡಿಸಿದ್ದರು. 'ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ಹೆಚ್ಚು ಬೇಕು. ಕಲಿಕೆಗೆ ಭೌತಿಕ ಪಠ್ಯಪುಸ್ತಕಗಳು ಮುಖ್ಯ' ಎಂದು ಸಚಿವ ಎಡ್ಹೋಮ್ ಮಾರ್ಚ್‌ನಲ್ಲಿ ಹೇಳಿದ್ದರು.

ಡಿಜಿಟಲ್ ಪರಿಕರವನ್ನು ಕಡ್ಡಾಯಗೊಳಿಸಿರುವ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ನಿರ್ಧಾರ ಕೈಬಿಡಬೇಕು. ಆರು ವರ್ಷದೊಳಗಿನ ಮಕ್ಕಳಲ್ಲಿ ಡಿಜಿಟಲ್ ಪರಿಕರಗಳ ಬಳಕೆಯನ್ನು ಸಂಪೂರ್ಣ ತಪ್ಪಿಸುವುದು ಸರ್ಕಾರದ ಉದ್ದೇಶ ಎಂದು ಸಚಿವರು ಹೇಳಿದ್ದರು.

ಯುನೆಸ್ಕೊ ಕಳೆದ ತಿಂಗಳು ಬಿಡುಗಡೆ ಮಾಡಿದ್ದ ವರದಿಯಲ್ಲೂ, 'ಶಿಕ್ಷಣದಲ್ಲಿ ತಂತ್ರಜ್ಞಾನವನ್ನು ಸೂಕ್ತ ರೀತಿಯಲ್ಲಿ ಬಳಸುವ ತುರ್ತು ಇದೆ. ಶಾಲೆಗಳಿಗೆ ಇಂಟರ್‌ನೆಟ್ ಸಂಪರ್ಕವನ್ನು ತ್ವರಿತವಾಗಿ ಒದಗಿಸಲು ರಾಷ್ಟ್ರಗಳು ಆದ್ಯತೆ ನೀಡಬೇಕು. ಅದೇ ಸಂದರ್ಭದಲ್ಲಿ ತಂತ್ರಜ್ಞಾನವು ಸಾಂಪ್ರದಾಯಿಕ ಶಿಕ್ಷಣ ಕ್ರಮವನ್ನೇ ಬದಲಿಸದಂತೆ ಎಚ್ಚರಿಕೆ ವಹಿಸಬೇಕು' ಎಂದು ಸಲಹೆ ಮಾಡಿತ್ತು.

'ಸ್ವೀಡನ್‌ನ ಮಕ್ಕಳ ಓದುವ ಸಾಮರ್ಥ್ಯವು ಐರೋಪ್ಯ ರಾಷ್ಟ್ರಗಳಲ್ಲಿನ ಸರಾಸರಿಗಿಂತ ಹೆಚ್ಚಾಗಿಯೇ ಇದೆ. ಆದರೆ, 2016 ಮತ್ತು 2021ರ ಅವಧಿಯಲ್ಲಿ ಕುಸಿದಿದೆ' ಎಂದು ನಾಲ್ಕನೇ ತರಗತಿಯ ಮಕ್ಕಳ ಸಾಮರ್ಥ್ಯದ ಸಮೀಕ್ಷೆ ನಡೆಸಿದ್ದ ಅಂತರರಾಷ್ಟ್ರೀಯ ಸಂಸ್ಥೆಯೊಂದು ಹೇಳಿತ್ತು.

ಮಕ್ಕಳಲ್ಲಿನ ಓದುವ ಸಾಮರ್ಥ್ಯಕ್ಕೆ ಸಂಬಂಧಿಸಿದ ಈ ಸಮೀಕ್ಷೆಯ ಪ್ರಕಾರ, ಸ್ವೀಡನ್‌ನಲ್ಲಿ ಮಕ್ಕಳ ಸರಾಸರಿ ಪಾಯಿಂಟ್ 2016ರಲ್ಲಿ 555 ಇದ್ದರೆ, ಅದು 2021ರಲ್ಲಿ 544ಕ್ಕೆ ಕುಸಿದಿದೆ ಎಂದು ಈ ವರದಿಯು ಉಲ್ಲೇಖಿಸಿತ್ತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. ರೂ.12,000- 17,000. 8951315839, 9880120052

ಬೇಕಾಗಿದ್ದಾರೆ. SSLC, PUC, DEGREE ಯುವಕ ಯುವತಿಯರು ಬೇಕಾಗಿದ್ದಾರೆ.15,500/- ರಿಂದ 35,000/- Ph. 8861041526, 9945721526

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9148525233, 7899235388

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್,ಟಯೋಟಾ, ಬ್ರಿಟಾನಿಯಾ, ಟಿ.ವಿ.ಎಸ್, MNCಗಳಿಗೆ SSLC, PUC, Degree, Diplomaದವರು 18,000- 56,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 8105161292

Wanted

ಡ್ರೈ ಕ್ಲೀನಿಂಗ್ ಶೋರೂಮ್ ನ ಜಯನಗರ ಮತ್ತು ಗಾಂಧಿಬಜಾರ್ ಶಾಖೆಗಳಿಗೆ ಶಾಪ್ ಹೆಲ್ಪರ್ಸ್ ಬೇಕಾಗಿದ್ದಾರೆ.ವಯಸ್ಸು 18-40 ವರ್ಷ, ಸಂಬಳ 15,000/- ಬೆಂಗಳೂರು ಜಯನಗರ ಆಸುಪಾಸಿನ ಅಭ್ಯರ್ಥಿಗಳಿಗೆ ಆದ್ಯತೆ. ಕಡ್ಡಾಯವಾಗಿ ಕನ್ನಡದಲ್ಲಿ ಮಾತನಾಡುವ ಪರಿಣಿತಿ ಹೊಂದಿರಬೇಕು. ಸಂಪರ್ಕಿಸಿ: 9880266007

Drivers

ಆಟೋ ಚಾಲಕರು ಬೇಕಾಗಿದ್ದಾರೆ ಇಲೆಕ್ಟ್ರಿಕ್ ಆಟೋ ಬಾಡಿಗೆಗೆ ಲಭ್ಯವಿದೆ (ಬ್ಯಾಟರಿ ವೆಚ್ಚ ಕಂಪನಿ ಬರಿಸುತ್ತದೆ) ಪಾರ್ಟ್ ಟೈಮ್ /ಫುಲ್ ಟೈಮ್ ಹಾಗು ನೈಟ್ ಶಿಫ್ಟ್ ಲಭ್ಯವಿದೆ ಆಕರ್ಷಕ ಸಂಬಳ 20000/- ವರೆಗು ಪಡೆಯಿರಿ ಕೂಡಲೇ ಸೇರಿಕೊಳ್ಳೋವವರಿಗೆ ಆಕರ್ಷಕ ಬೋನಸ್ ನೀಡಲಾಗುಹುದು ಆಸಕ್ತಿ ಉಳ್ಳವರು ಮಿಸ್ ಕಾಲ್ ನೀಡಿ - 08068960971

ಪ್ರವಾಸ

Travel

ಚೈತನ್ಯದಾಯಕ ವಿಶೇಷ ಪ್ರವಾಸಗಳು: ಹೈಮಾಚಲ ಚಾರ್ ಧಾಮ್ 06.10.2023 ರಿಂದ 14 ದಿನಗಳು. ಕುಟ್ರಾಲಂಫಾಲ್ಸ್ ಕನ್ಯಾಕುಮಾರಿ ಟ್ರಿವೇಂಡ್ರಮ್ ಮುನ್ನಾರ್,ಅಲೆಪ್ಪಿ 7 ದಿನಗಳು. ದಾಂಡೇಲಿ,ಸೌದತ್ತಿ ಗೋಕಾಕ್ ಫಾಲ್ಸ್ ಬಿಜಾಪುರ ಬಾದಾಮಿ,ಹಂಪಿ 6 ದಿನಗಳು 21.10.2023 26.10.2023 ರಿಂದ. ಸೋಮನಾಥ್,ದ್ವಾರಕಾ ಮಾತೃಗಯಾ ಉಜ್ಜಯಿನಿ,ಓಂಕಾರೇಶ್ವರ 16.11.2023 30.11.2023 ರಿಂದ 15/10 ದಿನಗಳು. ವಿಜಯವಾಡ,ಭದ್ರಾಚಲಂ ವಾಸವಿಪೆನುಗೊಂಡ ಸಿಂಹಾಚಲಂ 30.10.2023 ರಿಂದ 9 ದಿನಗಳು. ಸಂಪರ್ಕಿಸಿ 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

10.10.2023ಮತ್ತು 10.11.2023 6ದಿನಗಳು ವಿಮಾನದಲ್ಲಿ ಅಲಹಾಬದ್,ಕಾಶಿ, ಗಯಾ,ಅಯೋಧ್ಯ (ಕೆಲವೇ ಸೀಟುಗಳಿವೆ)24000/ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ Land_Package15000/ ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429

ಸೆಪ್ಟಂಬರ್ ಅಕ್ಟೋಬರ್ ತಿಂಗಳಲ್ಲಿ 8/13/21 ದಿನಗಳ ಕಾಶಿ,ಗಯಾ,ಪೂರಿಜಗನ್ನಾಥ್/ ಗಂಗೋತ್ರಿ,ಯಮನೋತ್ರಿ ಬದರಿನಾಥ್,ಕೇದಾರನಾಥ್ ದೆಹಲಿ/ 12 ದಿನಗಳ ಸೋಮನಾಥ್,ದ್ವಾರಕಾ ಮಹಾಕಾಳೇಶ್ವರ,ಮಾತೃಗಯಾ ಅಹಮದಾಬಾದ್ ಓಂಕಾರೇಶ್ವರ್ ಡಿಸೆಂಬರ್ ತಿಂಗಳಲ್ಲಿ 6 ದಿನಗಳ ಕನ್ಯಾಕುಮಾರಿ ರಾಮೇಶ್ವರ,ಮಧುರೈ 'ಶ್ರೀಸುಧಾ ಟ್ರಾವಲ್ಸ್' 9448119290 9019301300

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ರೈಲು/ AC ಬಸ್ಸಿನಲ್ಲಿ 08.10.2023 26.10.2023 ಚಾರ್‌ಧಾಮ್ ಸಮೇತ ಪ್ರವಾಸ. 19.10.2023 ಅಲಹಾಬಾದ್,ಕಾಶಿ,ಬುದ್ಧಗಯಾ 26.10.2023 ನೇಪಾಳ,ಮುಕ್ತಿನಾಥ ಪೋಕ್ರ,ಲುಂಬಿನಿ. 17.11.2023 ಸೋಮನಾಥ್,ದ್ವಾರಕ ಮಹಾಕಾಳೇಶ್ವರ,ಓಂಕಾರೇಶ್ವರ ನಿಷ್ಕಳಂಕ ಮಹಾದೇವ ದಕ್ಷಿಣ/ ಮಧ್ಯಭಾರತ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131, 8431888138 7204173686 9686708171

24.10.2023 ಗುಜರಾತ್, ಮಧ್ಯಪ್ರದೇಶ್ 25.10.2023 ನೇಪಾಳ,ಮುಕ್ತಿನಾಥ, ಕಾಶಿ, ಕೊಲ್ಕತ್ತಾ,ಭುವನೇಶ್ವರ್ 25.10.2023 ದೆಹಲಿ,ಅಮೃತ್ಸರ್, ವೈಷ್ಣೋದೇವಿ, ಹರಿದ್ವಾರ್,ಅಯೋದ್ಯಾ, ಕಾಶಿ,ಗಯಾ, ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಭವಿಷ್ಯ

Astrology

★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ.9880811806

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಕೆಲಸ ಹುಡುಕಾಟ
ನಿಮ್ಮ ನೇಮಕಾತಿ ಅಗತ್ಯಗಳಿಗೆ ಪೂರಕ ವೇದಿಕೆ
JOB
ನಿಮ್ಮ ಕಂಪನಿಗೆ ಸೂಕ್ತವಾದ ಅಭ್ಯರ್ಥಿಗಳನ್ನು ಪಡೆಯಿರಿ...
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿರಿ!
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9731810277 |
+91 9900428036 | +91 9886213331 |
+91 9845114560 | 080-45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಪಶ್ಚಿಮ ರಾಷ್ಟ್ರಗಳ ಆಧಿಪತ್ಯ ಮುಂದುವರಿಯುವುದಕ್ಕೆ ತಡೆ ನೀಡಿದೆ: ರಷ್ಯಾ ಶ್ಲಾಘನೆ

‘ರಾಜಕೀಯ ಮುಕ್ತ ಶೃಂಗಸಭೆ’

ನವದೆಹಲಿ (ಪಿಟಿಐ): ಭಾರತದ ಅಧ್ಯಕ್ಷತೆಯಲ್ಲಿ ನಡೆದ ಜಿ20 ಶೃಂಗಸಭೆಯು ಜಗತ್ತಿನ ದಕ್ಷಿಣದ ರಾಷ್ಟ್ರಗಳ ಸಾಮರ್ಥ್ಯ ಪ್ರದರ್ಶನದ ಜೊತೆಗೆ ಅವುಗಳ ಪ್ರಾಮುಖ್ಯವನ್ನು ಒತ್ತಿ ಹೇಳಿದೆ. ಜಗತ್ತು ಎದುರಿಸುತ್ತಿರುವ ಸವಾಲುಗಳನ್ನು ಮೆಟ್ಟಿನಿಲ್ಲಲು ದಾರಿ ತೋರಿಸಿದೆ. ಹಲವು ಆಯಾಮಗಳ ಮಹತ್ವಪೂರ್ಣವಾದ ಸಭೆಯಾಗಿದೆ ಎಂದು ರಷ್ಯಾ ಪ್ರತಿಪಾದಿಸಿದೆ.

ಸೆರ್ಗೆ ಲಾವ್ರೊವ್

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ರಷ್ಯಾ ವಿದೇಶಾಂಗ ವ್ಯವಹಾರಗಳ ಸಚಿವ ಸೆರ್ಗೆ ಲಾವ್ರೊವ್, ‘ಉಕ್ರೇನ್ ಸಂಘರ್ಷ ಸೇರಿದಂತೆ ಹಲವು ವಿಷಯಗಳ ಮೇಲೆ ಪಶ್ಚಿಮ ರಾಷ್ಟ್ರಗಳ ಹಿಡಿತ ತಪ್ಪಿಸುವಲ್ಲಿ ಭಾರತ ಪ್ರಧಾನ ಪಾತ್ರವಹಿಸಿದೆ’ ಎಂದು ಮುಕ್ತಕಂಠದಿಂದ ಶ್ಲಾಘಿಸಿದರು.

‘ಶೃಂಗಸಭೆಯನ್ನು ರಾಜಕೀಯಗೊಳಿಸಲಿಲ್ಲ. ಇದಕ್ಕಾಗಿ ನಾನು ಭಾರತಕ್ಕೆ ಆಭಾರಿಯಾಗಿದ್ದೇನೆ. ಪಶ್ಚಿಮ ರಾಷ್ಟ್ರಗಳ ಆಧಿಪತ್ಯ ಮುಂದುವರಿಯುವುದಕ್ಕೆ ತಡೆ ನೀಡಿದೆ’ ಎಂದು ಹೇಳಿದರು.

ವಿಶ್ವದಾದ್ಯಂತ ಸೇನಾ ಸಂಘರ್ಷಗಳನ್ನು ವಿಶ್ವಸಂಸ್ಥೆಯ ಸನ್ನದು ಅನ್ವಯವೇ ಬಗೆಹರಿಸಿಕೊಳ್ಳಬೇಕು ಎಂಬ ಸಂದೇಶವನ್ನು ‘ನವದೆಹಲಿ ಘೋಷಣೆ’ಯು ರವಾನಿಸಿದೆ. ವಿವಿಧ ಬಿಕ್ಕಟ್ಟುಗಳಿಗೆ ಸಂಬಂಧಿಸಿದಂತೆ ಪಾಶ್ಚಿಮಾತ್ಯ ಶಕ್ತಿಗಳು ತಮ್ಮ ಪರಿಹಾರದ ಕಲ್ಪನೆಗಳೊಂದಿಗೆ ಮುಂದುವರಿಯಲು ಸಾಧ್ಯವಾಗುವುದಿಲ್ಲ ಎಂಬುದನ್ನೂ ಸ್ಪಷ್ಟಪಡಿಸಿದೆ ಎಂದು ಹೇಳಿದರು.

‘ಸಭೆಯು ಜಾಗತಿಕ ಆಡಳಿತ ಹಾಗೂ ಹಣಕಾಸಿಗೆ ಸಂಬಂಧಿಸಿದಂತೆ ನ್ಯಾಯಸಮ್ಮತ ಹಾದಿ ತೋರಿದೆ ಎಂದ ಅವರು, ಹವಾಮಾನ ಬದಲಾವಣೆಗೆ ಸಂಬಂಧಿಸಿದ ಸವಾಲುಗಳನ್ನು ಎದುರಿಸಲು ಅಭಿವೃದ್ಧಿಶೀಲ ದೇಶಗಳಿಗೆ 100 ಬಿಲಿಯನ್ ಅಮೆರಿಕನ್ ಡಾಲರ್ ನೆರವು ನೀಡುವುದಾಗಿ ಪಶ್ಚಿಮ ರಾಷ್ಟ್ರಗಳು ಭರವಸೆ ನೀಡಿದ್ದವು. ಆದರೆ, ಅದು ಈಡೇರಿಲ್ಲ’ ಎಂದು ದೂರಿದರು.

ನವದೆಹಲಿಯಲ್ಲಿ ಜಿ20 ಶೃಂಗಸಭೆಗೆ ವೇದಿಕೆಯಾಗಿದ್ದ ‘ಭಾರತ ಮಂಟಪಂ’ ಭಾನುವಾರ ರಾತ್ರಿ ವಿದ್ಯುದ್ದೀಪಗಳ ಅಲಂಕಾರದಲ್ಲಿ ಕಂಗೊಳಿಸಿದ್ದು ಹೀಗೆ —ಪಿಟಿಐ ಚಿತ್ರ

ಶೃಂಗಕ್ಕೆ ಸೇರ್ಪಡೆ ಆಫ್ರಿಕನ್ ಒಕ್ಕೂಟ ಸಂತಸ

ಜೊಹಾನಸ್‌ಬರ್ಗ್ (ಪಿಟಿಐ): ಜಿ20 ಶೃಂಗದ 21ನೇ ಸದಸ್ಯ ರಾಷ್ಟ್ರವಾಗಿ ಸರ್ವಾನುಮತದಿಂದ ಆಫ್ರಿಕನ್ ಒಕ್ಕೂಟದ ಸೇರ್ಪಡೆಗೆ ಹಲವು ಮುಖಂಡರು ಸಂತಸ ವ್ಯಕ್ತಪಡಿಸಿದ್ದಾರೆ. ಶೃಂಗದ ಅಧ್ಯಕ್ಷತೆ ವಹಿಸಿದ್ದ ಭಾರತದ ಪ್ರಧಾನಿ ಮೋದಿ ದೃಷ್ಟಿಕೋನವನ್ನು ಈ ಮುಖಂಡರು ಶ್ಲಾಘಿಸಿದ್ದಾರೆ.

ಆಫ್ರಿಕಾ ಒಕ್ಕೂಟದ ಆಯೋಗದ ಅಧ್ಯಕ್ಷ ಮೌಸಾ ಫಕಿ ಮಹಮತ್ ಅವರು, ‘ಎಯು ಸೇರ್ಪಡೆಯ ತೀರ್ಮಾನವನ್ನು ಸ್ವಾಗತಿಸಿದ್ದು, ಜಾಗತಿಕ ಸವಾಲು ಎದುರಿಸಲು ಅಗತ್ಯ ನೆರವು ನೀಡಲು ಇದು ಸಹಕಾರಿ’ ಎಂದಿದ್ದಾರೆ.

ವಿಶ್ವಕ್ಕೆ ಭಾರತದ ಶಾಂತಿ ಪಾಠ: ಮ್ಯಾಕ್ರನ್ ಪ್ರಶಂಸೆ

ನವದೆಹಲಿ (ಪಿಟಿಐ): ‘ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ಮುಂದುವರಿಸಿರುವ ಬೆನ್ನಲ್ಲೇ ಶಾಂತಿ ಮತ್ತು ಏಕತೆಯ ಮಹತ್ವ ಕುರಿತು ಜಿ20 ಅಧ್ಯಕ್ಷತೆ ಮೂಲಕ ಭಾರತವು ವಿಶ್ವಕ್ಕೆ ಸಂದೇಶ ನೀಡಿದೆ’ ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯಲ್ ಮ್ಯಾಕ್ರನ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಸಭೆಯ ಬಳಿಕ ಮಾಧ್ಯಮಗಳಿಗೆ ವಿವರಣೆ ನೀಡಿದ ಮ್ಯಾಕ್ರನ್, ‘ಭಾರತ ಮತ್ತು ಫ್ರಾನ್ಸ್ ಜಾಗತಿಕ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಒಟ್ಟಾಗಿ ಕಾರ್ಯತಂತ್ರ ರೂಪಿಸಲಿವೆ’ ಎಂದರು.ಉಭಯ ದೇಶಗಳ ನಡುವೆ ನಡೆದಿರುವ ರಕ್ಷಣೆ ಒಪ್ಪಂದ ಕುರಿತು ನಿರ್ದಿಷ್ಟ ವಿವರ ನೀಡದ ಅವರು, ಮುಂದಿನ ವರ್ಷಗಳಲ್ಲಿ ಮತ್ತಷ್ಟು ಒಪ್ಪಂದಗಳನ್ನು ಮಾಡಿಕೊಳ್ಳಲಾಗುವುದು ಎಂದು ಹೇಳಿದರು.

ಉಕ್ರೇನ್ ಮೇಲೆ ರಷ್ಯಾ ನಡೆಸಿದ ದಾಳಿಯನ್ನು ಜಿ20 ಗುಂಪಿನ ಬಹುಪಾಲು ರಾಷ್ಟ್ರಗಳು ಖಂಡಿಸಿವೆ. ಅಲ್ಲದೇ, ಈ ಶೃಂಗಸಭೆಯು ರಾಜಕೀಯ ವಿಷಯ ಕುರಿತು ಚರ್ಚಿಸುವ ವೇದಿಕೆಯಲ್ಲ. ಯುದ್ಧ ಸಂಘರ್ಷ ವಿಷಯಕ್ಕಷ್ಟೇ ಸೀಮಿತಗೊಳ್ಳಲು ಆಗುವುದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ವಿಶ್ವ ಶಾಂತಿಗೆ ರಿಷಿ ದಂಪತಿ ಪ್ರಾರ್ಥನೆ

ನವದೆಹಲಿ (ಪಿಟಿಐ): ಬ್ರಿಟನ್ ಪ್ರಧಾನಿ ರಿಷಿ ಸುನಕ್ ಹಾಗೂ ಅವರ ಪತ್ನಿ ಅಕ್ಷತಾ ಮೂರ್ತಿ ಅವರು ಭಾನುವಾರ ನವದೆಹಲಿಯ ಅಕ್ಷರಧಾಮ ದೇಗುಲಕ್ಕೆ ಭೇಟಿ ನೀಡಿ, ಪೂಜೆ ನಡೆಸಿದರು.

ರಾಜ್‌ಘಾಟ್‌ಗೆ ತೆರಳಿ ರಾಷ್ಟ್ರಪಿತ ಮಹಾತ್ಮಗಾಂಧಿ ಅವರಿಗೆ ನಮನ ಸಲ್ಲಿಸುವುದಕ್ಕೂ ಮೊದಲೇ ಬೆಳಿಗ್ಗೆ ದೇವಾಲಯಕ್ಕೆ ಭೇಟಿ ನೀಡಿದ ರಿಷಿ ದಂಪತಿಗೆ, ಅಲ್ಲಿನ ಸ್ವಾಮೀಜಿಗಳು ಮತ್ತು ಮಂದಿರದ ಹಿರಿಯ ಮುಖಂಡರು ಸ್ವಾಗತ ಕೋರಿದರು.

ಆಧಾತ್ಮಿಕ ಹಾಗೂ ಸಾಂಸ್ಕೃತಿಕ ಶ್ರೀಮಂತಿಕೆ ಮೇಳೈಸಿರುವ ಸ್ವಾಮಿನಾರಾಯಣ ಅಕ್ಷರಧಾಮವು 100 ಎಕರೆಯಷ್ಟು ವಿಶಾಲ ಪ್ರದೇಶದಲ್ಲಿದೆ. ಪ್ರಾಚೀನ ವಾಸ್ತುಶಿಲ್ಪಕ್ಕೆ ಕೈಗನ್ನಡಿಯಾಗಿರುವ ಈ ಮಂದಿರವು, ಹಿಂದೂ ಧಾರ್ಮಿಕ ಪರಂಪರೆಯ ಸಂಕೇತವಾಗಿದೆ. ಬ್ರಿಟನ್ ಪ್ರಧಾನಿಗೆ ದೇಗುಲದ ಪರಂಪರೆ ಕುರಿತು ವಿವರಿಸಲಾಯಿತು ಎಂದು ಬೋಚಸನ್ವಾಸಿ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥೆ (ಬಿಎಪಿಎಸ್) ತಿಳಿಸಿದೆ.

ಒಂದು ಗಂಟೆ ಕಾಲ ದೇವಾಲಯದಲ್ಲಿದ್ದ ರಿಷಿ ದಂಪತಿ, ಶ್ರೀನೀಲಕಂಠ ವರ್ಣಿ ಮಹಾರಾಜ್ ಮೂರ್ತಿಗೆ ಅಭಿಷೇಕ ನೆರವೇರಿಸಿದರು. ಬಳಿಕ ದೇಗುಲದ ಕಲೆ ಮತ್ತು ವಾಸ್ತುಶಿಲ್ಪವನ್ನು ಕಣ್ತುಂಬಿಕೊಂಡು ಮೆಚ್ಚುಗೆ ವ್ಯಕ್ತಪಡಿಸಿದರು.

‘ನಾನು, ಅಕ್ಷತಾ ಒಟ್ಟಾಗಿ ಸ್ವಾಮಿ ನಾರಾಯಣ ಅಕ್ಷರಧಾಮಕ್ಕೆ ತೆರಳಿ ದೇವರ ದರ್ಶನ ಪಡೆದು ಪೂಜೆ ನೆರವೇರಿಸಿದೆವು. ದೇಗುಲದ ಸೌಂದರ್ಯ ಕಂಡು ವಿಸ್ಮಯಗೊಂಡೆವು. ವಿಶ್ವ ಶಾಂತಿ, ಸಾಮರಸ್ಯ ಮತ್ತು ಮನುಕುಲದ ಒಳಿತಿಗಾಗಿ ಪ್ರಾರ್ಥಿಸಿದೆವು. ಇದೊಂದು ಪೂಜಾ ಸ್ಥಳವಷ್ಟೇ ಅಲ್ಲ; ಭಾರತೀಯ ಮೌಲ್ಯಗಳು, ಸಂಸ್ಕೃತಿಯ ಹೆಗ್ಗುರುತಾಗಿದೆ. ವಿಶ್ವಕ್ಕೂ ಇದು ಕೊಡುಗೆ ನೀಡುತ್ತದೆ’ ಎಂದು ರಿಷಿ ಹೇಳಿದ್ದಾರೆ.

ಬ್ರಿಟನ್ ಪ್ರಧಾನಿ ರಿಷಿ ಹಾಗೂ ಅವರ ಪತ್ನಿ ಅಕ್ಷತಾ ಮೂರ್ತಿ ಅವರು ದೆಹಲಿಯ ಅಕ್ಷರಧಾಮ ದೇವಾಲಯದಲ್ಲಿ ಭಾನುವಾರ ಪೂಜೆ ಸಲ್ಲಿಸಿದರು —ಪಿಟಿಐ ಚಿತ್ರ

‘ಜೋ ಬೈಡನ್ ವಿನಮ್ರ ವ್ಯಕ್ತಿ’

ಪಣಜಿ (ಪಿಟಿಐ): ‘ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಅತ್ಯಂತ ವಿನಮ್ರ ವ್ಯಕ್ತಿ. ಅವರ ಜೀವನದ ಮೇಲೆ ಅವರ ಅಜ್ಜಿಯು ಅಪಾರ ಪ್ರಭಾವ ಬೀರಿದ್ದಾರೆ’ ಎಂದು ದೆಹಲಿ ಆರ್ಚ್‌ಡಯೋಸಿಸ್ ಪ್ರಾರ್ಥನಾ ಆಯೋಗದ ಕಾರ್ಯದರ್ಶಿ ಫಾದರ್ ನಿಕೋಲಸ್ ಡಯಾಸ್ ಅವರು ಬಣ್ಣಿಸಿದ್ದಾರೆ.

ಜಿ–20 ಶೃಂಗಸಭೆಗೂ ಮುನ್ನ ಶನಿವಾರ ನವದೆಹಲಿಯಲ್ಲಿ ಬೈಡನ್ ಅವರು ತಂಗಿದ್ದ ಹೋಟೆಲ್‌ನಲ್ಲಿ 30 ನಿಮಿಷಗಳ ಪವಿತ್ರ ಕಮ್ಯೂನಿಯನ್ ಸೇವೆಯ (ಪ್ರಾರ್ಥನಾ ಸಭೆ) ವೇಳೆ ಫಾದರ್ ಡಯಾಸ್ ಅವರು ಬೈಡನ್ ಅವರನ್ನು ಭೇಟಿಯಾಗಿದ್ದರು. ಈ ಸಂದರ್ಭದಲ್ಲಿ ಜಿ20 ಶೃಂಗಸಭೆಯ ಯಶಸ್ಸು ಹಾಗೂ ಭಾರತ ಮತ್ತು ಅಮೆರಿಕದ ಒಳಿತಿಗಾಗಿ ಫಾದರ್ ಡಯಾಸ್ ಪ್ರಾರ್ಥಿಸಿದರು.

ತಮ್ಮ ಭೇಟಿಯ ಕುರಿತು ಪಿಟಿಐ ಜೊತೆಗೆ ಮಾಹಿತಿ ಹಂಚಿಕೊಂಡ ಫಾ. ಡಯಾಸ್ ಅವರು, ಪ್ರಾರ್ಥನೆಗಾಗಿ ಸಮಯ ಮೀಸಲಿಟ್ಟದ್ದಕ್ಕಾಗಿ ತಮಗೆ ಬೈಡನ್ ಕೃತಜ್ಞತೆ ಸಲ್ಲಿಸಿದರು, ಅವರು ಅತ್ಯಂತ ವಿನಮ್ರ ವ್ಯಕ್ತಿ ಎಂದೂ ಬಣ್ಣಿಸಿದ್ದಾರೆ.

‘ನಮ್ಮಿಬ್ಬರ ಭೇಟಿಯ ವೇಳೆ ನಡೆದ ಸಂಭಾಷಣೆಯು ಗೋವಾ, ಭಾರತದ ಸುತ್ತಮುತ್ತಲಿನ ವಿಷಯಗಳಿಗೆ ಸಂಬಂಧಿಸಿದ್ದಾಗಿತ್ತು. ಭಾರತದಲ್ಲಿ ಕ್ರೈಸ್ತ ಧರ್ಮ ಉಗಮವಾದ ಬಗ್ಗೆ ಅವರಲ್ಲಿ ಪ್ರಸ್ತಾಪಿಸಿದೆ. ಅಂತೆಯೇ ಭಾರತದಲ್ಲಿ ಕ್ರೈಸ್ತ ಧರ್ಮವು ಜಗತ್ತಿನ ಕ್ರೈಸ್ತ ಧರ್ಮದಷ್ಟೇ ಹಳೆಯದ್ದು’ ಎಂಬುದನ್ನೂ ಅವರ ಗಮನಕ್ಕೆ ತಂದಿರುವುದಾಗಿಯೂ ಹೇಳಿದ್ದಾರೆ.

‘ಶಾಂತಿಯ ಗೋಡೆ’ಯ ಮೇಲೆ ಸಹಿ ಮಾಡಿದ ವಿಶ್ವದ ಗಣ್ಯರು

ಗಾಂಧಿಗೆ ನಮನ ಸಲ್ಲಿಸಿದ ಜಿ20 ನಾಯಕರು

ನವದೆಹಲಿ (ಪಿಟಿಐ): ಅಮೆರಿಕದ ಅಧ್ಯಕ್ಷ ಜೋ ಬೈಡನ್, ಬ್ರಿಟನ್ ಪ್ರಧಾನಿ ರಿಷಿ ಸುನಕ್, ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ಸೇರಿದಂತೆ ಜಿ 20 ನಾಯಕರು ಭಾನುವಾರ ನವದೆಹಲಿಯ ರಾಜ್‌ಘಾಟ್‌ನಲ್ಲಿರುವ ಮಹಾತ್ಮ ಗಾಂಧಿ ಅವರ ಸ್ಮಾರಕಕ್ಕೆ ಭೇಟಿ ನೀಡಿ ಗೌರವ ಸಲ್ಲಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಜಿ20 ನಾಯಕರನ್ನು ರಾಜ್‌ಘಾಟ್‌ನಲ್ಲಿ ಬರಮಾಡಿಕೊಂಡರು.

ಸ್ವಾತಂತ್ರ್ಯ ಹೋರಾಟದ ಪ್ರಮುಖ ಕೇಂದ್ರಗಳಲ್ಲಿ ಒಂದಾಗಿದ್ದ ಹಾಗೂ 1917ರಿಂದ 1930ರವರೆಗೆ ಮಹಾತ್ಮ ಗಾಂಧಿ ಅವರಿಗೆ ಮನೆಯಾಗಿದ್ದ ಗುಜರಾತಿನ ಸಾಬರಮತಿ ಆಶ್ರಮದ ಚಿತ್ರವಿದ್ದ ವೇದಿಕೆಯಲ್ಲಿ ಗಣ್ಯರಿಗೆ ಅಂಗವಸ್ತ್ರ (ಸ್ಟಾಲ್) ತೊಡಿಸಿ ಮೋದಿ ಸ್ವಾಗತಿಸಿದರು. ಬಳಿಕ ಆಶ್ರಮದ ಮಹತ್ವವನ್ನು ವಿಶ್ವದ ನಾಯಕರಿಗೆ ವಿವರಿಸಿದರು.

ಜಿ20 ನಾಯಕರೆಲ್ಲ ಒಗ್ಗೂಡಿ ಗಾಂಧಿ ಅವರ ಸಮಾಧಿಯ ಮೇಲೆ ಪುಷ್ಪಗುಚ್ಛ ಇಟ್ಟು ಗೌರವ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ವಿವಿಧ ದೇಶಗಳ ನಾಯಕರ ಪತ್ನಿಯರೂ ಇದ್ದರು.

ಪ್ರಧಾನಿ ಮೋದಿ, ಬ್ರಿಟನ್ ಪ್ರಧಾನಿ ರಿಷಿ ಸುನಕ್ ಸೇರಿದಂತೆ ಕೆಲ ನಾಯಕರು ಬರಿಗಾಲಿನಲ್ಲಿ ರಾಜ್‌ಘಾಟ್‌ನತ್ತ ತೆರಳಿದರೆ, ಇನ್ನು ಕೆಲ ನಾಯಕರು ಸಂದರ್ಶಕರಿಗೆ ನೀಡಲಾಗುವ ಬಿಳಿ ಪಾದರಕ್ಷೆಯನ್ನು ಧರಿಸಿದ್ದು ಕಂಡುಬಂತು.

ಭೇಟಿಯ ಕುರಿತು ‘ಎಕ್ಸ್’ ವೇದಿಕೆಯಲ್ಲಿ ಪೋಸ್ಟ್ ಮಾಡಿದ ಮೋದಿ ಅವರು, ‘ರಾಜ್‌ಘಾಟ್‌ನಲ್ಲಿ ಜಿ20 ಕುಟುಂಬವು ಶಾಂತಿ, ಸೇವೆ, ಸಹಾನುಭೂತಿ ಹಾಗೂ ಅಹಿಂಸೆಯ ಸಂಕೇತವಾದ ಗಾಂಧಿ ಅವರಿಗೆ ಗೌರವ ಸಲ್ಲಿಸಿತು’ ಎಂದು ಬರೆದುಕೊಂಡಿದ್ದಾರೆ.

ರಾಜ್‌ಘಾಟ್‌ನ ಲೀಡರ್ಸ್ ಲಾಂಜ್‌ನಲ್ಲಿನ ‘ಶಾಂತಿಯ ಗೋಡೆ’ಯ ಮೇಲೆ ವಿವಿಧ ದೇಶಗಳ ನಾಯಕರು ಸಹಿ ಮಾಡುತ್ತಿರುವ ವಿಡಿಯೊವನ್ನೂ ಮೋದಿ ಹಂಚಿಕೊಂಡಿದ್ದು, ‘ಗಾಂಧಿ ಅವರ ಆದರ್ಶಗಳು ಜಾಗತಿಕವಾಗಿ ಪ್ರತಿಧ್ವನಿಸುತ್ತವೆ’ ಎಂದು ಹೇಳಿದ್ದಾರೆ.

ಜಿ20 ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದ ವಿವಿಧ ದೇಶಗಳ ನಾಯಕರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಭಾನುವಾರ ರಾಜ್‌ಘಾಟ್‌ನಲ್ಲಿ ಇರುವ ಮಹಾತ್ಮಗಾಂಧಿ ಅವರ ಸ್ಮಾರಕಕ್ಕೆ ಭೇಟಿ ನೀಡಿ ನಮನ ಸಲ್ಲಿಸಿದರು —ಪಿಟಿಐ ಚಿತ್ರ.

ಅತೀ ಮುಖ್ಯವಾದ ಕಾಲಘಟ್ಟದಲ್ಲಿ ನಾವೆಲ್ಲರೂ ಒಟ್ಟಾಗಬಲ್ಲೆವು ಎಂಬುದನ್ನು ಭಾರತದ ನಾಯಕತ್ವದಲ್ಲಿ ತೋರಿಸಿ ಕೊಟ್ಟಿದ್ದೇವೆ
ರಿಷಿ ಸುನಕ್
ಬ್ರಿಟನ್ ಪ್ರಧಾನಿ

ಸವಾಲುಗಳನ್ನು ಒಟ್ಟಿಗೆ ಎದುರಿಸುವ ಸಾಮರ್ಥ್ಯವನ್ನು ನಾವು ಹೊಂದಿದ್ದೇವೆ ಎಂಬುದನ್ನು ಮೋದಿ ನಮಗೆ ಮನವರಿಕೆ ಮಾಡಿಕೊಟ್ಟಿದ್ದಾರೆ
ಜೋ ಬೈಡನ್
ಅಮೆರಿಕ ಅಧ್ಯಕ್ಷ

ಶೃಂಗಸಭೆಗೆ ಆಹ್ವಾನಿಸಿದ್ದಕ್ಕಾಗಿ ಮತ್ತು ಜಾಗತಿಕ ದಕ್ಷಿಣದ ಪರ ಧ್ವನಿ ಎತ್ತಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ಹೇಳುತ್ತೇನೆ
ಶೇಖ್ ಹಸೀನಾ,
ಬಾಂಗ್ಲಾದೇಶದ ಪ್ರಧಾನಿ

ಮಹಾತ್ಮ ಗಾಂಧಿಗೆ ಶ್ರದ್ಧಾಂಜಲಿ ಸಲ್ಲಿಸಲು ಹೋದಾಗ ನನಗೆ ಭಾವುಕ ಅನುಭವವಾಯಿತು. ನನ್ನ ರಾಜಕೀಯ ಜೀವನದಲ್ಲಿ ಗಾಂಧಿ ಅವರಿಗೆ ದೊಡ್ಡ ಸ್ಥಾನವಿದೆ
ಲೂಯಿಜ್ ಇನಾಸಿಯೊ ಲುಲಾ ಡ ಸಿಲ್ವಾ, ಬ್ರೆಜಿಲ್ ಅಧ್ಯಕ್ಷ

ನಮ್ಮ ಸಾಧನೆಗಳಿಗಾಗಿ ಜನರು ನಮ್ಮನ್ನು ಸ್ಮರಿಸುತ್ತಾರೆ. ಪ್ರಧಾನಿ ಮೋದಿ ಅವರು ವಿಶ್ವದ ‘ಒಂದು ಭವಿಷ್ಯ’ದ ಕುರಿತು ಚರ್ಚಿಸಲು ನಮ್ಮನ್ನು ಇಲ್ಲಿ ಸೇರಿಸಿದ್ದಾರೆ
ಜಸ್ಟಿನ್ ಟ್ರುಡೊ
ಕೆನಡಾದ ಪ್ರಧಾನಿ

ಭದ್ರತಾ ಮಂಡಳಿ ಸ್ಥಾನಕ್ಕೆ ಆಗ್ರಹ

ಒಂದನೇ ಪುಟದಿಂದ...

ಸಮಾರೋಪ ಅಧಿವೇಶನದಲ್ಲಿ ಮೋದಿ ಅವರು ಬ್ರೆಜಿಲ್ ಅಧ್ಯಕ್ಷ ಲೂಯಿಸ್ ಇನಾಸಿಯೊ ಲುಲಾ ಡ ಸಿಲ್ವ ಅವರಿಗೆ ಅಧಿಕಾರ ದಂಡವನ್ನು ಹಸ್ತಾಂತರಿಸಿದರು. ಬಳಿಕ ಮೋದಿ ಅವರು ಬ್ರೆಜಿಲ್‌ಗೆ ಶುಭ ಹಾರೈಸಿದರು.

ಇದೇ ವೇಳೆ ಮಾತನಾಡಿದ ಬ್ರೆಜಿಲ್ ಅಧ್ಯಕ್ಷರು, ‘ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ರಾಜಕೀಯ ಸಬಲತೆಯನ್ನು ಮರಳಿ ಪಡೆಯಲು ಹೊಸ ಅಭಿವೃದ್ಧಿಶೀಲ ದೇಶಗಳನ್ನು ಕಾಯಂ ಹಾಗೂ ಕಾಯಂ ಅಲ್ಲದ ಸದಸ್ಯರನ್ನಾಗಿ ಸೇರಿಸುವ ಅಗತ್ಯ ಇದೆ’ ಎಂದು ಸಲಹೆ ನೀಡಿದರು. ಈ ಮೂಲಕ ನರೇಂದ್ರ ಮೋದಿ ಅವರ ಮಾತಿಗೆ ಬೆಂಬಲ ನೀಡಿದರು. ‘ವಿಭಜಿತ ಜಿ20ಯಲ್ಲಿ ನಮಗೆ ಯಾವುದೇ ಆಸಕ್ತಿಯಿಲ್ಲ. ನಮಗೆ ಸಂಘರ್ಷದ ಬದಲಿಗೆ ಶಾಂತಿ ಮತ್ತು ಸಹಕಾರ ಬೇಕು’ ಎಂದೂ ಅವರು ಹೇಳಿದರು. ಭೌಗೋಳಿಕ ರಾಜಕೀಯ ಸಮಸ್ಯೆಗಳು ತನ್ನ ಉದ್ದೇಶದ ದಿಕ್ಕು ತಪ್ಪಿಸಲು ಜಿ20 ಅನುವು ಮಾಡಿಕೊಡುವುದಿಲ್ಲ ಎಂದೂ ಅವರು ಸ್ಪಷ್ಟಪಡಿಸಿದರು.

ಜಿ–20 ಶೃಂಗಸಭೆಯ ಸಂದರ್ಭದಲ್ಲಿ ‘ಒಂದು ಭವಿಷ್ಯ’ ಕುರಿತು ಮಾತನಾಡಿದ ನರೇಂದ್ರ ಮೋದಿ, ‘ವಿಶ್ವವನ್ನು ಉತ್ತಮ ಭವಿಷ್ಯದ ಕಡೆಗೆ ಕೊಂಡೊಯ್ಯಲು ಜಾಗತಿಕ ವ್ಯವಸ್ಥೆಗಳು ಇಂದಿನ ವಾಸ್ತವಕ್ಕೆ ತಕ್ಕಂತೆ ಇರುವ ಅಗತ್ಯ ಇದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಹ ಇದಕ್ಕೊಂದು ಉದಾಹರಣೆ. ವಿಶ್ವಸಂಸ್ಥೆ ರಚನೆಯಾದಾಗ ಜಗತ್ತು ಈಗಿರುವುದಕ್ಕಿಂತ ಸಂಪೂರ್ಣ ಭಿನ್ನವಾಗಿತ್ತು. ಆಗ 51 ಸಂಸ್ಥಾಪಕ ಸದಸ್ಯರು ಇದ್ದರು. ಇಂದು ವಿಶ್ವಸಂಸ್ಥೆ ಸೇರಿರುವ ದೇಶಗಳ ಸಂಖ್ಯೆ 200ರಷ್ಟು ಇದೆ. ಈ ಬೆಳವಣಿಗೆಯ ನಂತರವೂ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಕಾಯಂ ಸದಸ್ಯರ ಸಂಖ್ಯೆ ಹಿಂದಿನಷ್ಟೇ ಉಳಿದಿದೆ. ಜಗತ್ತು ಸಾರಿಗೆ, ಸಂವಹನ, ಆರೋಗ್ಯ ಮತ್ತು ಶಿಕ್ಷಣ ಸೇರಿದಂತೆ ಎಲ್ಲ ವರ್ಗಗಳು ಬಹಳ ಪರಿವರ್ತನೆಗೊಂಡಿದೆ. ಈ ಹೊಸ ಪರಿವರ್ತನೆಗಳು ನಮ್ಮ ಜಾಗತಿಕ ರೂಪರೇಷೆಯಲ್ಲೂ ಪ್ರತಿಬಿಂಬಿಸಬೇಕು’ ಎಂದರು.

ಕ್ರಿಪ್ಟೊ ನಿಯಂತ್ರಣಕ್ಕೆ ಅಡಿಪಾಯ

ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಮತ್ತು ಹಣಕಾಸು ಸ್ಥಿರತೆ ಮಂಡಳಿಯ (ಎಫ್‌ಎಸ್‌ಬಿ) ಶಿಫಾರಸುಗಳನ್ನು ಅನುಮೋದಿಸುವ ಮೂಲಕ ಜಿ20 ಸದಸ್ಯ ರಾಷ್ಟ್ರಗಳು ಕ್ರಿಪ್ಟೊ ಕರೆನ್ಸಿಯ ನಿಯಂತ್ರಣಕ್ಕೆ ಅಡಿಪಾಯ ಹಾಕಿವೆ.

‘ನಮ್ಮ ನಾಯಕರು ಅದನ್ನು ಅನುಮೋದಿಸಿದ್ದಾರೆ. ಜಿ20ಯಲ್ಲಿ ಆಗಬಹುದಾದ ಅತ್ಯುನ್ನತ ಮಟ್ಟದ ಚಟುವಟಿಕೆ ಇದಾಗಿದೆ’ ಎಂದು ಆರ್ಥಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿ ಅಜಯ್ ಸೇಠ್ ತಿಳಿಸಿದರು.

‘ಕ್ರಿಪ್ಟೊ ಸ್ವತ್ತುಗಳ ನಿಯಂತ್ರಣ, ನಿಗಾ ಹಾಗೂ ಮೇಲ್ವಿಚಾರಣೆಗಾಗಿ ಹಣಕಾಸು ಸ್ಥಿರತೆ ಮಂಡಳಿಯ (ಎಫ್‌ಎಸ್‌ಬಿ) ಉನ್ನತ ಮಟ್ಟದ ಶಿಫಾರಸುಗಳನ್ನು ಜಿ20 ನಾಯಕರು ಶನಿವಾರ ಅನುಮೋದಿಸಿದ್ದಾರೆ.

‘ನಿಯಂತ್ರಿತ ಮಧ್ಯಸ್ಥಿಕೆ ತಪ್ಪಿಸಲು ಜಾಗತಿಕವಾಗಿ ಸ್ಥಿರ ರೀತಿಯಲ್ಲಿ ಈ ಶಿಫಾರಸುಗಳ ಪರಿಣಾಮಕಾರಿ ಮತ್ತು ಸಮಯೋಚಿತ ಅನುಷ್ಠಾನವನ್ನು ಉತ್ತೇಜಿಸಲು ನಾವು ಎಫ್‌ಎಸ್‌ಬಿ ಹಾಗೂ ಎಸ್‌ಎಸ್‌ಬಿಗಳನ್ನು ವಿನಂತಿಸುತ್ತೇವೆ’ ಎಂದು ‘ನವದೆಹಲಿ ಘೋಷಣೆ’ಯಲ್ಲಿ ಹೇಳಲಾಗಿದೆ.

‘ನವದೆಹಲಿ ಘೋಷಣೆ’ ಹಿಂದಿನ ಪರಿಶ್ರಮ

ಒಂದನೇ ಪುಟದಿಂದ...

ಇದು ನನ್ನ ಜೀವನದ ಅತ್ಯಂತ ಕಷ್ಟದ ಸಮಯವಾಗಿತ್ತು ಎಂದೂ ಹೇಳಿಕೊಂಡರು.

ಘೋಷಣೆಯ ಕುರಿತು ಒಮ್ಮತಕ್ಕೆ ಬರಲು ಭಾರತೀಯ ರಾಜತಾಂತ್ರಿಕರ ತಂಡವು 200 ಗಂಟೆಗಳ ಮಾತುಕತೆಗಳನ್ನು ನಡೆಸಿತು. ಜಂಟಿ ಕಾರ್ಯದರ್ಶಿಗಳಾದ ಈನಮ್ ಗಂಭೀರ್ ಮತ್ತು ಕೆ.ನಾಗರಾಜ ನಾಯ್ಡು ಸೇರಿದಂತೆ ರಾಜತಾಂತ್ರಿಕರ ತಂಡವು 300 ದ್ವಿಪಕ್ಷೀಯ ಸಭೆಗಳನ್ನು ನಡೆಸಿತು. ರಷ್ಯಾ–ಉಕ್ರೇನ್ ಸಂಘರ್ಷದ ಕುರಿತು ತಮ್ಮ ಸಹವರ್ತಿಗಳಿಗೆ 15 ಸಲ ಕರಡುಗಳನ್ನು ನೀಡಿ ನವದೆಹಲಿ ಘೋಷಣೆಗೆ ಅಂತಿಮ ರೂಪ ನೀಡಿತು ಎಂದು ಕಾಂತ್ ತಿಳಿಸಿದರು.

ಭೌಗೋಳಿಕ ರಾಜಕೀಯದ (ರಷ್ಯಾ–ಉಕ್ರೇನ್ ಯುದ್ಧ) ಕುರಿತು ಎಲ್ಲ ಜಿ–20 ನಾಯಕರಲ್ಲಿ ಒಮ್ಮತ ಮೂಡಿಸುವುದು ಅತ್ಯಂತ ಸಂಕೀರ್ಣ ಕೆಲಸವಾಗಿತ್ತು ಎಂದು ಅವರು ಹೇಳಿದರು.

ಚಂದ್ರಬಾಬು ನಾಯ್ಡುಗೆ ನ್ಯಾಯಾಂಗ ಬಂಧನ

ವಿಜಯವಾಡ/ ಅಮರಾವತಿ (ಪಿಟಿಐ): ಹಣ ದುರುಪಯೋಗ ಪ್ರಕರಣದಲ್ಲಿ ಬಂಧಿತರಾಗಿರುವ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ತೆಲುಗು ದೇಶಂ ಪಕ್ಷದ (ಟಿಡಿಪಿ) ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರನ್ನು ಭಾನುವಾರ 14 ದಿನಗಳ ಕಾಲ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

ಪೊಲೀಸ್ ಬಿಗಿಭದ್ರತೆಯೊಂದಿಗೆ ಬೆಳಿಗ್ಗೆ ಅವರನ್ನು ವಿಜಯವಾಡದ ಎಸಿಬಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಮುಂಜಾಗ್ರತೆಯಾಗಿ ವಿಜಯವಾಡ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಟ್ಟೆಚ್ಚರವಹಿಸಲಾಗಿತ್ತು.

ವಿಚಾರಣೆ ನಡೆಸಿದ ನ್ಯಾಯಾಧೀಶರು, ಚಂದ್ರಬಾಬು ಅವರನ್ನು ನ್ಯಾಯಾಂಗ ವಶಕ್ಕೆ ನೀಡಿ ಆದೇಶಿಸಿದರು. ರಾಜಮಹೇಂದ್ರವರಂ ಕಾರಾಗೃಹಕ್ಕೆ ಅವರನ್ನು ಕರೆದೊಯ್ಯಲಾಗಿದೆ. ಆದರೆ, ಹೆಚ್ಚಿನ ವಿಚಾರಣೆಗಾಗಿ ಚಂದ್ರಬಾಬು ಅವರನ್ನು ಪೊಲೀಸರು ಯಾವಾಗ ವಶಕ್ಕೆ ಪಡೆಯುತ್ತಾರೆ ಎಂಬುದು ಸ್ಪಷ್ಟವಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಕೌಶಲ ಅಭಿವೃದ್ಧಿ ನಿಗಮದ ಹಣ ದುರುಪಯೋಗ ಆರೋಪದ ಮೇಲೆ ಚಂದ್ರಬಾಬು ಅವರನ್ನು ಸಿಐಡಿ ಪೊಲೀಸರು ಶನಿವಾರ ನಂದ್ಯಾಲದಿಂದ ಬಂಧಿಸಿದ್ದರು.

ಸರ್ಕಾರಿ ನಿವೃತ್ತ ನೌಕರರಾದ ಜಿ. ಸುಬ್ಬರಾವ್ ಹಾಗೂ ಕೆ. ಲಕ್ಷ್ಮಿ ನಾರಾಯಣ ಎಂಬುವರು ಈ ಪ್ರಕರಣದಲ್ಲಿ ಕ್ರಮವಾಗಿ ಮೊದಲ ಹಾಗೂ ಎರಡನೇ ಆರೋಪಿಯಾಗಿದ್ದಾರೆ. ಚಂದ್ರಬಾಬು ಅವರು 37ನೇ ಆರೋಪಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ತನಿಖೆಗೆ ಅಸಹಕಾರ: ತನಿಖೆಗೆ ಚಂದ್ರಬಾಬು ಅವರು ಸಹಕಾರ ನೀಡುತ್ತಿಲ್ಲ. ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ ಎಂದು ಹೇಳುತ್ತಿದ್ದಾರೆ ಎಂದು ಪೊಲೀಸರು ಕೋರ್ಟ್‌ಗೆ ಸಲ್ಲಿಸಿರುವ ರಿಮ್ಯಾಂಡ್ ವರದಿಯಲ್ಲಿ ಹೇಳಲಾಗಿದೆ.

ನಂದ್ಯಾಲದಿಂದ ವಿಜಯವಾಡಕ್ಕೆ ಅವರನ್ನು ಕರೆತರಲು ಹೆಲಿಕಾಪ್ಟರ್ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಹೆಲಿಕಾಪ್ಟರ್‌ನಲ್ಲಿ ತೆರಳಲು ನಿರಾಕರಿಸಿದರು. ರಸ್ತೆ ಮಾರ್ಗವಾಗಿ ಅವರನ್ನು ಕರೆತರುವಾಗ ಬೆಂಗಾವಲು ಪಡೆಗೆ ಟಿಡಿಪಿ ಕಾರ್ಯಕರ್ತರು ಅಡ್ಡಿಪಡಿಸಿದರು ಎಂದು ವಿವರಿಸಲಾಗಿದೆ.

ಪ್ರಶ್ನೆಗಳ ಟಿಪ್ಪಣಿ ಸಿದ್ಧಪಡಿಸಿ ಅವರಿಗೆ ಕೇಳಲಾಯಿತು. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಲು ಅಸಹಕಾರ ತೋರಿದರು ಎಂದು ತಿಳಿಸಲಾಗಿದೆ.

ಇಂದು ಆಂಧ್ರ ಬಂದ್‌ಗೆ ಕರೆ

ಚಂದ್ರಬಾಬು ಅವರ ಬಂಧನ ಖಂಡಿಸಿ ಸೆಪ್ಟೆಂಬರ್ 11ರಂದು ಆಂಧ್ರಪ್ರದೇಶ ಬಂದ್‌ಗೆ ತೆಲುಗು ದೇಶಂ ಪಕ್ಷ ಕರೆ ನೀಡಿದೆ.

ಇಂಧನ ಸಹಕಾರ: ಭಾರತ–ಸೌದಿ ಒಪ್ಪಂದ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತ ಮತ್ತು ಸೌದಿ ಅರೇಬಿಯಾ ನಡುವೆ ಸೋಮವಾರ ಇಂಧನ ಸಹಕಾರಕ್ಕೆ ಸಂಬಂಧಿಸಿ ದೀರ್ಘಕಾಲದ ಒಪ್ಪಂದಕ್ಕೆ ಅಂಕಿತ ಬೀಳುವ ನಿರೀಕ್ಷೆಯಿದೆ.

ಜಿ20 ಶೃಂಗಸಭೆಗೆ ಆಗಮಿಸಿದ್ದ ಸೌದಿ ಅರೇಬಿಯಾ ಯುವರಾಜ ಮೊಹಮ್ಮದ್ ಬಿನ್ ಸಲ್ಮಾನ್ ಅಲ್ ಸೌದ್ ಅವರು ನವದೆಹಲಿಯಲ್ಲಿಯೇ ಇದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ದೊರೆ ಸಲ್ಮಾನ್ ನಡುವೆ ದ್ವಿಪಕ್ಷೀಯ ಮಾತುಕತೆ ನಡೆಯಲಿದೆ. ಎರಡೂ ಕಡೆಯಿಂದ ಇಂಧನ ಸಹಕಾರ ಒಪ್ಪಂದಕ್ಕೆ ಸಹಿ ಬೀಳುವ ನಿರೀಕ್ಷೆಯಿದೆ. ಅಲ್ಲದೇ, ನವೀಕರಿಸಬಹುದಾದ ಇಂಧನ ಶಕ್ತಿ ಹಾಗೂ ಉಭಯ ದೇಶಗಳ ನಡುವೆ ಸಾಗರದೊಳಗೆ ವಿದ್ಯುತ್ ಜಾಲದ ಕೇಬಲ್ ಅಳವಡಿಕೆ ಬಗ್ಗೆಯೂ ಚರ್ಚೆ ನಡೆಯಲಿದೆ ಎಂದು ‘ಪ್ರಜಾವಾಣಿ’ಗೆ ಮೂಲಗಳು ಮಾಹಿತಿ ನೀಡಿವೆ.

ಎರಡೂ ದೇಶಗಳ ನಡುವಿನ ರಾಜಕೀಯ, ರಕ್ಷಣೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಹಕಾರಕ್ಕೆ ರಚಿಸಿರುವ ಸಮಿತಿಗಳು, ಆರ್ಥಿಕ ಹಾಗೂ ಹೂಡಿಕೆಯ ಸಹಕಾರಕ್ಕೆ ರಚಿಸಿರುವ ಸಮಿತಿಗಳಿಗೆ ಸಂಬಂಧಿಸಿದಂತೆ ದ್ವಿಪಕ್ಷೀಯ ಕಾರ್ಯತಂತ್ರ ಪಾಲುದಾರಿಕೆ ಕುರಿತು ಚರ್ಚಿಸಲಿದ್ದಾರೆ ಎಂದು ತಿಳಿಸಿವೆ.

ಎಲ್ಲರನ್ನೂ ಜತೆಗೆ ಕರೆದೊಯ್ಯುವ ಭಾರತ: ಭಾಗವತ್



ಲುಧಿಯಾನ (ಪಿಟಿಐ): ‘ಎಲ್ಲರನ್ನೂ ಜೊತೆಗೆ ಕರೆದುಕೊಂಡು ಹೋಗುವುದರಲ್ಲಿ ಭಾರತ ನಂಬಿಕೆ ಇಟ್ಟಿದೆ. ವಿಶ್ವದ ಹಲವು ರಾಷ್ಟ್ರಗಳು ಇಂದು ಭಾರತದತ್ತ ನೋಡುತ್ತಿವೆ’ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದರು.

ಸದ್ಗುರು ಪ್ರತಾಪ್ ಸಿಂಗ್ ಮತ್ತು ಮಾತಾ ಭೂಪಿಂದರ್ ಕೌರ್ ಅವರ ಸ್ಮರಣಾರ್ಥ ನಾಮಧಾರಿ ಮಿಷನ್ ಲುಧಿಯಾನದ ‘ಭೈನಿ ಸಾಹಿಬ್’ನಲ್ಲಿ ಭಾನುವಾರ ಆಯೋಜಿಸಿದ್ದ ಸಭೆ ಉದ್ದೇಶಿಸಿ ಭಾಗವತ್ ಅವರು ಮಾತನಾಡಿದರು.

‘ವಿಶ್ವದಲ್ಲಿ ಸಮತೋಲನ ಸಾಧಿಸುವ ಕೆಲಸವನ್ನು ಭಾರತ ಮಾಡುತ್ತಿದೆ. ತನ್ನ ಪಾತ್ರವನ್ನು ಉತ್ತಮವಾಗಿ ನಿರ್ವಹಿಸುತ್ತಿದೆ. ಭಾರತ ಸ್ವಾರ್ಥಿ ರಾಷ್ಟ್ರವಲ್ಲ. ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವ ತತ್ವದಲ್ಲಿ ನಂಬಿಕೆ ಇರಿಸಿದೆ’ ಎಂದು ಭಾಗವತ್ ಅವರು ಹೇಳಿದರು.

‘ಭಾರತವು ಇಡೀ ಜಗತ್ತಿಗೆ ಹೊಸ ಮಾರ್ಗವನ್ನು ತೋರಿಸಬೇಕಿದೆ. ಅದೇ ಸಂದರ್ಭದಲ್ಲಿ ಸಂಪ್ರದಾಯ, ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಬೇಕು’ ಎಂದು ಭಾಗವತ್ ಹೇಳಿದರು.

ಕಾರ್ಯಕ್ರಮದಲ್ಲಿ ನಾಮಧಾರಿ ಸಮುದಾಯದ ಸದ್ಗುರು ಉದಯ್ ಸಿಂಗ್ ಉಪಸ್ಥಿತರಿದ್ದರು.

ಬಿಗಿ ಭದ್ರತೆಯ ನಡುವೆ ಭೈನಿ ಸಾಹಿಬ್ ತಲುಪಿದ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಸದ್ಗುರು ಉದಯ್ ಸಿಂಗ್ ಅವರೊಂದಿಗೆ ಗೌಪ್ಯ ಸಭೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ದೆಹಲಿಯಿಂದ ರೈಲಿನಲ್ಲಿ ಶನಿವಾರ ಲುಧಿಯಾನಕ್ಕೆ ಆಗಮಿಸಿದ ಮೋಹನ್ ಭಾಗವತ್, ಇಲ್ಲಿನ ಆರ್‌ಎಸ್‌ಎಸ್ ಪ್ರಧಾನ ಕಚೇರಿಯಲ್ಲಿ ತಂಗಿದ್ದರು.

ಕೇರಳ: ಶಬರಿಮಲೆಗೆ ಭೇಟಿಯ ಬಯಕೆ • 41 ದಿನ ವ್ರತ ಆಚರಣೆ

ಪದವಿ ಹಿಂದಿರುಗಿಸಿದ ಚರ್ಚ್ ಪಾದ್ರಿ

ತಿರುವನಂತಪುರ (ಪಿಟಿಐ): ಸ್ವಾಮಿ ಅಯ್ಯಪ್ಪನ ದರ್ಶನ ಪಡೆಯುವ ಹೆಬ್ಬಯಕೆಯಿಂದಾಗಿ ಕೇರಳದ ಚರ್ಚ್‌ವೊಂದರ ಪಾದ್ರಿಯೊಬ್ಬರು ತಮ್ಮ ಚರ್ಚ್ ಸೇವಾ ನಿರ್ವಹಣೆಯ ಪದವಿಯನ್ನು ಹಿಂದಿರುಗಿಸಿದ್ದಾರೆ.

ಆಂಗ್ಲಿಕನ್ ಚರ್ಚ್ ಆಫ್ ಇಂಡಿಯಾದ ರೆವರೆಂಡ್ ಮನೋಜ್ ಕೆ.ಜಿ. ಅಯ್ಯಪ್ಪನ ಭಕ್ತರು 41 ದಿನಗಳ ವ್ರತ ಆಚರಿಸುವುದನ್ನು ಗಮನಿಸಿದ ಬಳಿಕ, ಶಬರಿಮಲೆಗೆ ಭೇಟಿ ನೀಡುವ ಬಯಕೆಯಾಗಿದೆ. ಈ ತಿಂಗಳ ಕೊನೆಯಲ್ಲಿ ಅವರು ಶಬರಿಮಲೆಗೆ ತೆರಳಲಿದ್ದು, ಪ್ರಸ್ತುತ 41 ದಿನಗಳ ವ್ರತವನ್ನು ಆಚರಿಸುತ್ತಿದ್ದಾರೆ.

‘ವ್ರತದ ಕುರಿತು ತಿಳಿದಾಗ, ಯಾವ ಕಾರಣಕ್ಕಾಗಿ ಚರ್ಚ್‌ನ ಸಿದ್ಧಾಂತಗಳನ್ನು ಮತ್ತು ನಿಯಮಗಳನ್ನು ಉಲ್ಲಂಘಿಸುತ್ತಿದ್ದೇನೆ ಎಂಬುದಾಗಿ ವಿವರಣೆ ನೀಡಬೇಕೆಂದು ಚರ್ಚ್‌ನ ಆಡಳಿತ ಮಂಡಳಿ ನನಗೆ ಕೇಳಿತ್ತು. ಆದರೆ, ವಿವರಣೆ ನೀಡುವ ಬದಲು ಈ ಚರ್ಚ್‌ಗೆ ಪಾದ್ರಿಯಾಗಿ ಬಂದಾಗ ನನಗೆ ನೀಡಲಾಗಿದ್ದ ಗುರುತಿನ ಚೀಟಿ ಹಿಂದಿರುಗಿಸಿದ್ದೇನೆ. ನಾನು ವ್ರತ ಆಚರಿಸುತ್ತಿರುವುದು ಸಹ ನಿಯಮಗಳಿಗೆ ವಿರುದ್ಧವಾಗಿಯೇ ಇದೆ ಎಂದು ಒಪ್ಪಿಕೊಳ್ಳುತ್ತೇನೆ’ ಎಂದು ಮನೋಜ್ ಸುದ್ದಿಸಂಸ್ಥೆಗೆ ತಿಳಿಸಿದರು.

ಮನೋಜ್ ನಿರ್ಧಾರವನ್ನು ಅನೇಕರು ಟೀಕಿಸಿದ್ದಾರೆ.

ದೇವರ ಸಿದ್ಧಾಂತ ಪಾಲಿಸುತ್ತಿದ್ದೇನೆ: ತಮ್ಮ ನಿರ್ಧಾರವನ್ನು ಟೀಕಿಸಿದವರಿಗೆ ಫೇಸ್‌ಬುಕ್ ವಿಡಿಯೊ ಮೂಲಕ ದಿಟ್ಟ ಪ್ರತಿಕ್ರಿಯೆ ನೀಡಿರುವ ಮನೋಜ್ ಅವರು, ‘ನನ್ನ ಕೆಲಸ ಚರ್ಚ್‌ನ ಸಿದ್ಧಾಂತಗಳನ್ನು ಆಧರಿಸಿಲ್ಲ. ಬದಲಾಗಿ ದೇವರ ಸಿದ್ಧಾಂತಗಳನ್ನು ಆಧರಿಸಿದೆ. ಜಾತಿ, ಮತ, ಧರ್ಮ ಹಾಗೂ ನಂಬಿಕೆಗಳನ್ನು ಪರಿಗಣಿಸದೇ ಎಲ್ಲರನ್ನೂ ಪ್ರೀತಿಸು ಎಂದು ದೇವರು ಹೇಳಿದ್ದಾನೆ. ಇತರರನ್ನು ಪ್ರೀತಿಸುವುದು ಎಂದರೆ ಅವರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದೂ ಆಗಿರುತ್ತದೆ. ಆದ್ದರಿಂದ ಚರ್ಚ್‌ನ ಸಿದ್ಧಾಂತಗಳನ್ನು ಪಾಲಿಸಬೇಕೋ ಅಥವಾ ದೇವರ ಸಿದ್ಧಾಂತಗಳನ್ನು ಪಾಲಿಸಬೇಕೋ ಎಂದು ನೀವೇ ನಿರ್ಧರಿಸಬೇಕು’ ಎಂದಿದ್ದಾರೆ.

‘ಚರ್ಚ್ ಎಂದರೆ ಸಾಂಪ್ರದಾಯಿಕ, ನಿರ್ಮಿತ ಪದ್ಧತಿಗಳು’ ಎಂದಿದ್ದಾರೆ.

‘ಚರ್ಚ್‌ನ ಆಡಳಿತ ಮಂಡಳಿಯವರಿಗೆ ಯಾವುದೇ ತೊಂದರೆ ನೀಡಲು ನಾನು ಇಷ್ಟಪಡುವುದಿಲ್ಲ. ಅವರ ಪರಿಸ್ಥಿತಿಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ನನಗೆ ನೀಡಲಾಗಿದ್ದ ಸೇವಾ ನಿರ್ವಹಣೆಯ ಹೊಣೆಯಿಂದ ಹಿಂದೆ ಸರಿದಿರುವೆ. ನಂತರದ ದಿನಗಳಲ್ಲಿ ಅದೇ ಚರ್ಚ್‌ನಲ್ಲಿ ಪಾದ್ರಿಯಾಗಿ ಮುಂದುವರಿಯುತ್ತೇನೆ’ ಎಂದು ವಿವರಿಸಿದ್ದಾರೆ.

‘ಇಷ್ಟೆಲ್ಲ ವಿವಾದವಾದರೂ, ಅಯ್ಯಪ್ಪನ ದರ್ಶನ ಮಾಡುವ ಯೋಜನೆಯಲ್ಲಿ ಯಾವುದೇ ಬದಲಾವಣೆಯಿಲ್ಲ. ಇದೇ 20ರಂದು ಶಬರಿಮಲೆಗೆ ತೆರಳುತ್ತಿದ್ದೇನೆ. ಯಾವುದೇ ತಪ್ಪು ಮಾಡಿಲ್ಲವೆಂಬ ಬಲವಾದ ನಂಬಿಕೆ ನನಗಿದೆ. ಹಿಂದೂ ಆಚರಣೆಗಳ ಹೊರತಾಗಿಯೂ ಆ ಧರ್ಮವನ್ನು ಅರಿಯುವುದು ನನ್ನ ಉದ್ದೇಶವಾಗಿದೆ’ ಎಂದು ಮಾಹಿತಿ ನೀಡಿದರು.

ಮನೋಜ್ ನಡೆ ಕುರಿತು ಹೇಳಿಕೆ ನೀಡಲು ಚರ್ಚ್ ಆಡಳಿತ ಮಂಡಳಿಯ ಅಧಿಕಾರಿಗಳು ಸಂಪರ್ಕಕ್ಕೆ ಸಿಗಲಿಲ್ಲ.

ಎಂಜಿನಿಯರ್ ಆಗಿದ್ದ ಮನೋಜ್

ಪಾದ್ರಿ ಸ್ಥಾನ ಸ್ವೀಕರಿಸುವುದಕ್ಕೂ ಮುನ್ನ ಮನೋಜ್ ಅವರು ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು.

‘ನನ್ನ ಆಧ್ಯಾತ್ಮಿಕ ಬೋಧನೆಗಳಿಗೆ ಅಧಿಕೃತತೆ ನೀಡುವ ಉದ್ದೇಶದಿಂದ ಪಾದ್ರಿ ಸ್ಥಾನ ಸ್ವೀಕರಿಸಿದೆ’ ಎಂದು ಮನೋಜ್ ಹೇಳಿದ್ದಾರೆ.

‘ವ್ರತದ ಸುದ್ದಿ ಹೊರಬಿದ್ದಾಗ, ನನ್ನ ಸಮುದಾಯದ ಕೆಲವರು ಟೀಕಿಸಿದರು. ಚರ್ಚ್‌ನ ಆಡಳಿತ ಮಂಡಳಿ ನನ್ನ ಮುಂದಿನ ಯೋಜನೆಗಳ ಬಗ್ಗೆ ಕೇಳಿತು. ನನ್ನ ಧಾರ್ಮಿಕ ಪಂಥಕ್ಕೆ ಅದರದೇ ಆದ ನಿಯಮ, ನಿಬಂಧನೆ ಹಾಗೂ ರೂಢಿಗತ ಸಂಪ್ರದಾಯಗಳಿವೆ. ಈ ನಿರ್ಧಾರಕ್ಕೆ ಅವರು ಒಪ್ಪುವುದಿಲ್ಲ’ ಎಂದಿದ್ದಾರೆ.

ಟೆನಿಸ್: ಫೈನಲ್‌ನಲ್ಲಿ ಬೆಲರೂಸ್‌ನ ಅರಿನಾ ಸಬಲೆಂಕಾ ವಿರುದ್ಧ ಗೆಲುವು

ಕೊಕೊಗೆ ಅಮೆರಿಕ ಓಪನ್ ಗರಿ

ನ್ಯೂಯಾರ್ಕ್ (ಎಎಫ್‌ಪಿ): ಮೊದಲ ಸೆಟ್ ಸೋತರೂ ಅಮೋಘವಾಗಿ ಮರುಹೋರಾಟ ನಡೆಸಿದ ಕೊಕೊ ಗಾಫ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಕಿರೀಟ ಮುಡಿಗೇರಿಸಿಕೊಂಡರು.

ಶನಿವಾರ ರಾತ್ರಿ ನಡೆದ ಫೈನಲ್‌ನಲ್ಲಿ ಅಮೆರಿಕದ 19 ವರ್ಷದ ಗಾಫ್ 2–6, 6–3, 6–2 ರಿಂದ ಬೆಲರೂಸ್‌ನ ಅರಿನಾ ಸಬಲೆಂಕಾ ಅವರನ್ನು ಮಣಿಸಿದರು. 6ನೇ ಶ್ರೇಯಾಂಕ ಹೊಂದಿದ್ದ ಫ್ಲಾರಿಡಾದ ಆಟಗಾರ್ತಿಗೆ ಲಭಿಸಿದ ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಇದು.

ಆರ್ಥರ್ ಆಷ್ ಕ್ರೀಡಾಂಗಣದಲ್ಲಿ ದಾಖಲೆ ಸಂಖ್ಯೆಯಲ್ಲಿ (28,143) ನೆರೆದಿದ್ದ ಪ್ರೇಕ್ಷಕರ ಸಮ್ಮುಖದಲ್ಲಿ ಈ ಜಿದ್ದಾಜಿದ್ದಿನ ಸೆಣಸಾಟ 2 ಗಂಟೆ 6 ನಿಮಿಷ ನಡೆಯಿತು.

ಗಾಫ್ ಅವರು ಟ್ರೇಸಿ ಆಸ್ಟಿನ್ ಮತ್ತು ಸೆರೆನಾ ವಿಲಿಯಮ್ಸ್ ಬಳಿಕ ಇಲ್ಲಿ ಚಾಂಪಿಯನ್ ಆದ ಆತಿಥೇಯ ದೇಶದ ಮೂರನೇ ಹದಿಹರೆಯದ ಆಟಗಾರ್ತಿ ಎನಿಸಿಕೊಂಡರು.

ಜುಲೈನಲ್ಲಿ ನಡೆದಿದ್ದ ವಿಂಬಲ್ಡನ್ ಟೂರ್ನಿಯ ಮೊದಲ ಸುತ್ತಿನಲ್ಲೇ ಆಘಾತ ಅನುಭವಿಸಿದ್ದ ಗಾಫ್, ಅಲ್ಲಿಂದೀಚೆಗೆ ತಮ್ಮ ಆಟದಲ್ಲಿ ಸುಧಾರಣೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಅಮೆರಿಕ ಓಪನ್‌ಗೆ ಮುನ್ನ ವಾಷಿಂಗ್ಟನ್ ಮತ್ತು ಸಿನ್ಸಿನಾಟಿಯಲ್ಲಿ ನಡೆದಿದ್ದ ಟೂರ್ನಿಗಳಲ್ಲಿ ಚಾಂಪಿಯನ್ ಆಗಿದ್ದರು.

ಕಳೆದ ವರ್ಷ ಫ್ರೆಂಚ್ ಓಪನ್ ಫೈನಲ್ ತಲುಪಿದ್ದ ಅವರು ಇಗಾ ಶ್ವಾಂಟೆಕ್ ಎದುರು ಸೋತು 'ರನ್ನರ್ ಅಪ್' ಆಗಿದ್ದರು. ವೃತ್ತಿಜೀವನದ ಎರಡನೇ ಗ್ರ್ಯಾನ್‌ಸ್ಲಾಮ್ ಫೈನಲ್‌ನಲ್ಲಿ ಪ್ರಶಸ್ತಿ ಗೆದ್ದು ಸಂಭ್ರಮಿಸಿದ್ದಾರೆ.

'ಈ ಗೆಲುವು ನನ್ನ ಪಾಲಿಗೆ ಬಹಳ ದೊಡ್ಡದು. ಈ ಕ್ಷಣದಲ್ಲಿ ಸ್ವಲ್ಪ ಆಘಾತಕ್ಕೆ ಒಳಗಾಗಿದ್ದೇನೆ ಎನಿಸುತ್ತದೆ' ಎಂದು ಪಂದ್ಯದ ಬಳಿಕ ಗಾಫ್ ಪ್ರತಿಕ್ರಿಯಿಸಿದರು.

'ಫ್ರೆಂಚ್ ಓಪನ್ ಫೈನಲ್‌ನಲ್ಲಿ ಎದುರಾಗಿದ್ದ ಸೋಲು (ಕಳೆದ ವರ್ಷ) ಆಘಾತ ಉಂಟುಮಾಡಿತ್ತು. ಆದರೆ ಈ ಕ್ಷಣ ನಾನು ಊಹಿಸಿದ್ದಕ್ಕಿಂತಲೂ ಹೆಚ್ಚು ಮಧುರವಾಗಿದೆ' ಎಂದರು.

ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಸಬಲೆಂಕಾ, ಮೊದಲ ಸೆಟ್‌ನ ಆರಂಭದಲ್ಲೇ ಎದುರಾಳಿಯ ಸರ್ವ್ ಬ್ರೇಕ್ ಮಾಡಿದರು. ಮರುಹೋರಾಟ ನಡೆಸಿದ ಗಾಫ್ 2–2 ರಿಂದ ಸಮಬಲ ಸಾಧಿಸಿದರು. ಆದರೆ ಸರ್ವ್ ವೇಳೆ ಲಯ ಕಂಡುಕೊಳ್ಳಲು ಗಾಫ್ ವಿಫಲರಾದರು. ಇದರ ಲಾಭ ಪಡೆದ ಸಬಲೆಂಕಾ ಮತ್ತೆ ಎರಡು ಸಲ ಬ್ರೇಕ್ ಮಾಡಿ ಸೆಟ್‌ನ್ನು ಸುಲಭವಾಗಿ ತಮ್ಮದಾಗಿಸಿಕೊಂಡರು.

2ನೇ ಸೆಟ್‌ನಲ್ಲಿ ಶಿಸ್ತಿನ ಆಟವಾಡಿದ ಗಾಫ್ ಎದುರಾಳಿಯ ಸರ್ವ್ ಬ್ರೇಕ್ ಮಾಡಿ 3–1 ರಿಂದ ಮುನ್ನಡೆ ಪಡೆದರು. ಮುಂದಿನ ಗೇಮ್‌ನಲ್ಲಿ ತಮ್ಮ ಸರ್ವ್‌ನಲ್ಲಿ ಪ್ರಯಾಸದಿಂದ ಪಾಯಿಂಟ್ ಗಳಿಸಿ 4–1 ರಿಂದ ಮೇಲುಗೈ ಸಾಧಿಸಿದರು. ತಮ್ಮ ಇನ್ನುಳಿದ ಸರ್ವ್‌ಗಳನ್ನು ಕಾಪಾಡಿಕೊಂಡು ಸೆಟ್ ಜಯಿಸಿದರು.

ನಿರ್ಣಾಯಕ ಸೆಟ್‌ನಲ್ಲಿ ಒತ್ತಡಕ್ಕೆ ಒಳಗಾದ ಸಬಲೆಂಕಾ ಸಾಕಷ್ಟು ಸ್ವಯಂಕೃತ ತಪ್ಪುಗಳನ್ನು ಮಾಡಿದರು. ಗಾಫ್ 4–0 ಯಿಂದ ಮೇಲುಗೈ ಗಳಿಸಿದರು. ಬೆಲಾರೂಸ್ ಆಟಗಾರ್ತಿ ಹಿನ್ನಡೆಯನ್ನು 2–4 ಕ್ಕೆ ತಗ್ಗಿಸಿದರಾದರೂ, ಪಂದ್ಯದ ಮೇಲಿನ ಹಿಡಿತವನ್ನು ಬಿಗಿಗೊಳಿಸಿದ ಗಾಫ್ ಸೆಟ್ ಗೆದ್ದು ಚಾಂಪಿಯನ್ ಆದರು. ವೇಗದ ಹೊಡೆತಗಳಿಗೆ ಹೆಸರು ಮಾಡಿರುವ ಸಬಲೆಂಕಾ ಒಟ್ಟು 46 ಸ್ವಯಂಕೃತ ತಪ್ಪುಗಳನ್ನು ಮಾಡಿದರೆ, ಗಾಫ್ ಅವರಿಂದ 19 ಸ್ವಯಂಕೃತ ತಪ್ಪುಗಳು ಆದವು. ಆದರೆ ನಿರ್ಣಾಯಕ ಘಟ್ಟಗಳಲ್ಲಿ ಪಾಯಿಂಟ್ ಗೆದ್ದುಕೊಂಡ ಅಮೆರಿಕದ ಆಟಗಾರ್ತಿ ಪ್ರಶಸ್ತಿಯತ್ತ ಹೆಜ್ಜೆಯಿಟ್ಟರು.

ಮುಖ್ಯಾಂಶಗಳು

- 2–6, 6–3, 6–2 ಸೆಟ್‌ಗಳಿಂದ ಗೆಲುವು
- 19 ವರ್ಷದ ಆಟಗಾರ್ತಿಗೆ ಚೊಚ್ಚಲ ಗ್ರ್ಯಾನ್‌ಸ್ಲಾಮ್ ಕಿರೀಟ
- 2 ಗಂಟೆ 6 ನಿಮಿಷ ನಡೆದ ಫೈನಲ್ ಸೆಣಸು

- ಅಮೆರಿಕ ಓಪನ್ ಟೂರ್ನಿ ಜಯಿಸಿದ ಕೊಕೊ ಗಾಫ್ ಅವರು ಮಿನುಗುವ ಟ್ರೋಫಿಯೊಂದಿಗೆ ₹ **24.93** ಕೋಟಿ ನಗದು ಬಹುಮಾನ ತಮ್ಮದಾಗಿಸಿಕೊಂಡರು.
- 'ರನ್ನರ್ ಅಪ್' ಸಬಲೆಂಕಾ ಅವರಿಗೆ ₹ **12.46** ಕೋಟಿ ಲಭಿಸಿತು.

ಟ್ರೋಫಿಯೊಂದಿಗೆ ಸಂಭ್ರಮಿಸಿದ ಕೊಕೊ ಗಾಫ್ —ಎಎಫ್‌ಪಿ ಚಿತ್ರ

ಮಳೆ: ಮೀಸಲು ದಿನಕ್ಕೆ ಪಂದ್ಯ

ಪಾಕಿಸ್ತಾನ ವಿರುದ್ಧ ರೋಹಿತ್–ಗಿಲ್ ಶತಕ ಜೊತೆಯಾಟ

ಪ್ರಜಾವಾಣಿ ವಾರ್ತೆ

ಕೊಲಂಬೊ: ಭಾನುವಾರ ಸಂಜೆ ಮಳೆ ಸುರಿಯುವ ಮುನ್ನ ಭಾರತದ ಆರಂಭಿಕ ಬ್ಯಾಟರ್‌ಗಳಾದ ರೋಹಿತ್ ಶರ್ಮಾ ಮತ್ತು ಶುಭಮನ್ ಗಿಲ್ ಅವರ ಚೆಂದದ ಜೊತೆಯಾಟ ನೋಡುಗರ ಮನಕ್ಕೆ ಮುದ ನೀಡಿತು.

ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಭಾರತಕ್ಕೆ ಉತ್ತಮ ಆರಂಭ ದೊರೆಯಿತು. ಆ ಬುನಾದಿಯ ಮೇಲೆ ಬೃಹತ್ ಮೊತ್ತ ಪೇರಿಸುವ ಭರವಸೆಯೂ ಮೂಡಿತು. ಆದರೆ, ಸಂಜೆ 4.52ಕ್ಕೆ ರಭಸದ ಮಳೆ ಆರಂಭವಾಯಿತು.

ಮಳೆ ನಿಂತ ನಂತರ ನಾಲ್ಕು ಬಾರಿ (ರಾತ್ರಿ 7, 7.30, 8 ಹಾಗೂ 8.20ಕ್ಕೆ) ಪಿಚ್ ಹಾಗೂ ಹೊರಾಂಗಣವನ್ನು ಅಂಪೈರ್‌ಗಳು ಪರಿಶೀಲಿಸಿದರು. ಆದರೆ ಅದೇ ಹೊತ್ತಿಗೆ ಮತ್ತೆ ಮಳೆ ಆರಂಭವಾಯಿತು. ಆದ್ದರಿಂದ ಆಟವನ್ನು ನಿಲ್ಲಿಸಿ, ಮೀಸಲು ದಿನವಾದ ಸೋಮವಾರಕ್ಕೆ ಮುಂದೂಡಲಾಯಿತು.

ಭಾರತ ತಂಡವು 24.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 147 ರನ್ ಗಳಿಸಿದ್ದ ಸಂದರ್ಭದಲ್ಲಿ ಮಳೆ ಆರಂಭವಾಯಿತು. ಆಗ ಕ್ರೀಸ್‌ನಲ್ಲಿ ವಿರಾಟ್ ಕೊಹ್ಲಿ (ಬ್ಯಾಟಿಂಗ್ 8) ಮತ್ತು ಕೆ.ಎಲ್. ರಾಹುಲ್ (17 ರನ್) ಇದ್ದರು. ಸೋಮವಾರದ ಆಟವು ಇದೇ ಹಂತದಿಂದ ಮುಂದುವರಿಯಲಿದೆ.

ರೋಹಿತ್, ಗಿಲ್ ಅಬ್ಬರ: ಹೋದ ವಾರ ನಡೆದಿದ್ದ ಗುಂಪು ಹಂತದ ಪಂದ್ಯದಲ್ಲಿ ಪಾಕ್ ಬೌಲರ್‌ಗಳ ಎದುರು ಭಾರತದ ಆರಂಭಿಕ ಜೋಡಿ ರೋಹಿತ್ ಮತ್ತು ಗಿಲ್ ಮಂಕಾಗಿದ್ದರು.

ಆದರೆ ಇಲ್ಲಿ ಪಾಕ್ ತಂಡದ ಎಲ್ಲ ಬೌಲರ್‌ಗಳಿಗೂ ತಿರುಗೇಟು ನೀಡಿದರು. ರೋಹಿತ್ (56; 49ಎ, 4X6, 6X4) ಹಾಗೂ ಗಿಲ್ (58; 52, 4X10) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 121 ರನ್ ಸೇರಿಸಿ ಅಮೋಘ ಆರಂಭ ನೀಡಿದರು. ಇದಕ್ಕಾಗಿ ಅವರು ಕೇವಲ 100 ಎಸೆತಗಳನ್ನು ಎದುರಿಸಿದರು.

ಪಂದ್ಯದ ಮೊದಲ ಓವರ್‌ನಲ್ಲಿಯೇ ಶಹೀನ್ ಆಫ್ರಿದಿಯ ಎಸೆತವನ್ನು ಸಿಕ್ಸ್‌ರ್‌ಗೆತ್ತಿದ ರೋಹಿತ್ ತಮ್ಮ ಬೀಸಾಟಕ್ಕೆ ಮುನ್ನುಡಿ ಬರೆದರು. ಇನ್ನೊಂದೆಡೆ ಗಿಲ್ ಕೂಡ ಆತ್ಮವಿಶ್ವಾಸದಿಂದ ಆಡಿದರು. ತಮ್ಮ ಸ್ಟಾನ್ಸ್‌ನಲ್ಲಿ ಕೊಂಚ ಬದಲಾವಣೆ ಮಾಡಿಕೊಂಡು ಆಡಿದ ಅವರು ಆಫ್ರಿದಿಯ ನಿಧಾನಗತಿಯ ಸ್ವಿಂಗ್‌ಗಳಿಗೆ ತಕ್ಕ ಉತ್ತರ ಕೊಟ್ಟರು. ಬ್ಯಾಕ್‌ಫೂಟ್, ಫ್ರಂಟ್ ಫೂಟ್ ಮತ್ತು ಫ್ಲಿಕ್‌ಗಳ ಆಟಕ್ಕೆ ಒತ್ತು ಕೊಟ್ಟರು. ಆಫ್ರಿದಿ ಎಸೆತಗಳಲ್ಲಿಯೇ ಒಟ್ಟು ಆರು ಬೌಂಡರಿ ದಾಖಲಿಸಿದರು. ಇವರಿಬ್ಬರ ಅಬ್ಬರದಿಂದಾಗಿ ಭಾರತ ತಂಡವು ಮೊದಲ ಪವರ್‌ಪ್ಲೇನಲ್ಲಿಯೇ ವಿಕೆಟ್ ನಷ್ಟವಿಲ್ಲದೇ 61 ರನ್ ಸೇರಿಸಿತು.

ರೋಹಿತ್ ವೇಗದ ಬೌಲರ್‌ಗಳಿಗೆ ತಮ್ಮ ಚೆಂದದ ಪುಲ್ ಹೊಡೆತಗಳ ಮೂಲಕ ಉತ್ತರ ಕೊಟ್ಟರು. ಸ್ಪಿನ್ನರ್ ಶಾದಾಬ್ ಖಾನ್ ಅವರನ್ನು ದಂಡಿಸಿದರು. ಅವರ ಒಂದೇ ಓವರ್‌ನಲ್ಲಿ ಎರಡು ಸಿಕ್ಸರ್ ಮತ್ತು ಬೌಂಡರಿ ಇದ್ದ 19 ರನ್‌ಗಳನ್ನು ರೋಹಿತ್ ಸೂರೆ ಮಾಡಿದರು.

17ನೇ ಓವರ್‌ನಲ್ಲಿ ಶಾದಾಬ್ ಖಾನ್ ಅವರ ಎಸೆತದಲ್ಲಿಯೇ ರೋಹಿತ್ ಔಟಾದರು. ನಂತರದ ಓವರ್‌ನಲ್ಲಿ ಆಫ್ರಿದಿ ಅವರು ಗಿಲ್ ವಿಕೆಟ್ ಗಳಿಸುವಲ್ಲಿ ಯಶಸ್ವಿಯಾದರು. ಕೊಹ್ಲಿ ಜೊತೆಗೂಡಿದ ರಾಹುಲ್ ಇನಿಂಗ್ಸ್‌ಗೆ ಬಲ ತುಂಬುವ ವಿಶ್ವಾಸ ಮೂಡಿಸಿದರು. ಗಾಯ ಮತ್ತು ಶಸ್ತ್ರಚಿಕಿತ್ಸೆಯಿಂದಾಗಿ ಸುಮಾರು ನಾಲ್ಕು ತಿಂಗಳು ವಿಶ್ರಾಂತಿಯಲ್ಲಿದ್ದ ರಾಹುಲ್ ಕಣಕ್ಕೆ ಮರಳಿದರು.

ಗಾಯಗೊಂಡಿರುವ ಶ್ರೇಯಸ್ ಅಯ್ಯರ್ ಬದಲು ರಾಹುಲ್ ತಂಡದಲ್ಲಿ ಸ್ಥಾನ ಪಡೆದರು. ಇಶಾನ್ ಕಿಶನ್ ಕೂಡ ಹನ್ನೊಂದರ ಬಳಗದಲ್ಲಿದ್ದಾರೆ.

ಆರಂಭ: ಮಧ್ಯಾಹ್ನ 3
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಹಾಟ್‌ಸ್ಟಾರ್ ಆ್ಯಪ್

ಕೊಲಂಬೊದ ಆರ್ ಪ್ರೇಮದಾಸ ಕ್ರೀಡಾಂಗಣದಲ್ಲಿ ಪಂದ್ಯಕ್ಕೆ ಮಳೆ ಅಡ್ಡಿಯಾದಾಗ ಭಾರತ ತಂಡದ ನಾಯಕ ರೋಹಿತ್ ಶರ್ಮಾ, ಹಾರ್ದಿಕ್ ಪಾಂಡ್ಯ, ಶುಭಮನ್ ಗಿಲ್ ರವೀಂದ್ರ ಜಡೇಜ ಹಾಗೂ ಸೂರ್ಯಕುಮಾರ್ ಯಾದವ್ ಅವರು ಪೆವಿಲಿಯನ್‌ನಲ್ಲಿ ಮಾತುಕತೆಯಲ್ಲಿ ತೊಡಗಿದ್ದರು–ಎಎಫ್‌ಪಿ ಚಿತ್ರ

ಏಷ್ಯಾ ಕಪ್ 2023

ನಾಳೆಯೂ ಪಂದ್ಯ!

ಭಾರತ ತಂಡವು ಸೋಮವಾರ ಪಾಕಿಸ್ತಾನದ ಎದುರು ಪಂದ್ಯ ಮುಂದುವರಿಸಲಿದೆ. ಮಂಗಳವಾರ ಶ್ರೀಲಂಕಾ ವಿರುದ್ಧ ಆಡಲಿದೆ.

ಸೂಪರ್ ಫೋರ್ ಹಂತದಲ್ಲಿ ಭಾರತವು ತನ್ನ 2ನೇ ಪಂದ್ಯವನ್ನು ಲಂಕಾ ವಿರುದ್ಧ ಆಡುವುದು ಪೂರ್ವನಿಗದಿಯಾಗಿದೆ. ಆದರೆ ಭಾನುವಾರ ಮಳೆ ಸುರಿದ ಕಾರಣ ಪಾಕ್ ವಿರುದ್ಧ ಪಂದ್ಯ ಅರ್ಧಕ್ಕೆ ನಿಂತಿತು. ಅದನ್ನು ಮೀಸಲು ದಿನವಾದ ಸೋಮವಾರಕ್ಕೆ ಮುಂದೂಡಲಾಯಿತು.

ಈ ಪಂದ್ಯ ಮತ್ತು ಫೈನಲ್ ಪಂದ್ಯಕ್ಕೆ ಮೀಸಲು ದಿನವನ್ನು ನಿಗದಿಗೊಳಿಸುವ ನಿರ್ಧಾರವನ್ನು ಮೂರು ದಿನಗಳ ಹಿಂದಷ್ಟೇ ತೆಗೆದುಕೊಳ್ಳಲಾಗಿತ್ತು. ಇದರಿಂದಾಗಿ ಆಯೋಜಕರ ವಿರುದ್ಧ ಬೇರೆ ತಂಡಗಳ ಕೋಚ್‌ಗಳು ಅಸಮಾಧಾನ ವ್ಯಕ್ತಪಡಿಸಿದ್ದರು.

ಗ್ಯಾಲರಿ ಖಾಲಿ

ಕೊಲಂಬೊ (ಪಿಟಿಐ): ಭಾರತ ಮತ್ತು ಪಾಕ್ ನಡುವಣ ಪಂದ್ಯವೆಂದರೆ ಕ್ರೀಡಾಂಗಣಕ್ಕೆ ಜನಸಾಗರವೇ ಹರಿದು ಬರುವುದು ಹೊಸತಲ್ಲ. ಆದರೆ ಕೊಲಂಬೊದಲ್ಲಿ ಇಂತಹ ಪರಿಸ್ಥಿತಿ ಇಲ್ಲ.

ಭಾನುವಾರ ನಡೆದ ಪಂದ್ಯದಲ್ಲಿ ಕ್ರೀಡಾಂಗಣದ ಪ್ರೇಕ್ಷಕರ ಗ್ಯಾಲರಿಯಲ್ಲಿ ಬಹಳಷ್ಟು ಆಸನಗಳು ಖಾಲಿ ಇದ್ದವು.

ಆದರೆ ಈಚೆಗಿನ ದಶಕದಲ್ಲಿ ಉಭಯ ತಂಡಗಳ ಮುಖಾಮುಖಿಯಾದ ಮೀರ್‌ಪುರ, ಮೆಲ್ಬರ್ನ್, ಅಡಿಲೇಡ್, ದುಬೈ, ಬರ್ಮಿಂಗ್‌ಹ್ಯಾಂ, ಲಂಡನ್ ಹಾಗೂ ಮ್ಯಾಂಚೆಸ್ಟರ್‌ಗಳಲ್ಲಿಯೂ ಮೈದಾನಗಳು ಕಿಕ್ಕಿರಿದಿದ್ದವು.

ಆದರೆ ಕೊಲಂಬೊದಲ್ಲಿ ಟಿಕೆಟ್‌ಗಳ ಬೆಲೆ ಕಡಿತ ಮಾಡಿದ್ದ ಶ್ರೀಲಂಕಾ ಕ್ರಿಕೆಟ್ ಮಂಡಳಿಯು ಟ್ವೀಟ್ ಮೂಲಕ ಮಾಹಿತಿ ನೀಡಿತ್ತು. ಆದರೂ ಜನರು ಆಸಕ್ತಿ ತೋರದೇ ಇರುವುದು ಆತಿಥ್ಯ ವಹಿಸಿರುವ ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ಬೇಸರ ಮೂಡಿಸಿದೆ.

ಇಂಡೊನೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿ

ಕಿರಣ್ ಜಾರ್ಜ್ ಚಾಂಪಿಯನ್

ಮೆದಾನ್, ಇಂಡೊನೇಷ್ಯಾ (ಪಿಟಿಐ): ಭಾರತದ ಉದಯೋನ್ಮುಖ ಆಟಗಾರ ಕಿರಣ್ ಜಾರ್ಜ್ ಅವರು ಇಂಡೊನೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಭಾನುವಾರ ನಡೆದ ಫೈನಲ್‌ನಲ್ಲಿ 23 ವರ್ಷದ ಕಿರಣ್ 21–19, 22–20 ರಿಂದ ಜಪಾನ್‌ನ ಕೂ ತಕಹಶಿ ಅವರನ್ನು ಮಣಿಸಿದರು. ಈ ಪಂದ್ಯ 56 ನಿಮಿಷ ನಡೆಯಿತು.

ಬೆಂಗಳೂರಿನ ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ (ಪಿಪಿಬಿಎ) ತರಬೇತಿ ಪಡೆಯುತ್ತಿರುವ ಕಿರಣ್, ವೃತ್ತಿಜೀವನದಲ್ಲಿ ಪಡೆದ ಎರಡನೇ ಬಿಡಬ್ಲ್ಯುಎಫ್ ವಿಶ್ವ ಟೂರ್ ಸೂಪರ್ 100 ಪ್ರಶಸ್ತಿ ಇದಾಗಿದೆ.

'ಇದು ಅತ್ಯುತ್ತಮ ಗೆಲುವು. ಕಿರಣ್ ತಮಗೆ ಲಭಿಸಿದ ಅವಕಾಶಗಳನ್ನು ಬಳಸಿಕೊಂಡು ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡರು. ಈ ಸಾಧನೆ ನನಗೆ ಸಂತಸ ನೀಡಿದೆ' ಎಂದು ಪಿಪಿಬಿಎ ನಿರ್ದೇಶಕ ವಿಮಲ್ ಕುಮಾರ್ ಪ್ರತಿಕ್ರಿಯಿಸಿದ್ದಾರೆ.

ಕೇರಳದ ಕೊಚ್ಚಿಯ ಕಿರಣ್, ಕಳೆದ ವರ್ಷ ಒಡಿಶಾ ಓಪನ್ ಗೆದ್ದು ಚೊಚ್ಚಲ ಕಿರೀಟ ಮುಡಿಗೇರಿಸಿಕೊಂಡಿದ್ದರು.

ಮೊದಲ ಗೇಮ್‌ನಲ್ಲಿ 1–4 ರಿಂದ ಹಿನ್ನಡೆಯಲ್ಲಿದ್ದ ಅವರು, ಮರುಹೋರಾಟ ನಡೆಸಿ 8–8 ರಿಂದ ಸಮಬಲ ಸಾಧಿಸಿದರು. ಆ ಬಳಿಕ ತುರುಸಿನ ಪೈಪೋಟಿ ನಡೆಯಿತು. 15–18 ರಿಂದ ಹಿನ್ನಡೆಯಲ್ಲಿದ್ದ ತಕಹಶಿ ಕೆಲವೊಂದು ಉತ್ತಮ ಹೊಡೆತಗಳ ಮೂಲಕ ಅಂತರವನ್ನು 19–20ಕ್ಕೆ ತಗ್ಗಿಸಿದರು. ಒತ್ತಡವನ್ನು ಮೆಟ್ಟಿನಿಂತ ಕಿರಣ್ ಮೊದಲ ಗೇಮ್ ಗೆದ್ದುಕೊಂಡರು.

ಎರಡನೇ ಗೇಮ್‌ನಲ್ಲಿ ಕಿರಣ್ 16–11 ರಿಂದ ಮೇಲುಗೈ ಪಡೆದರು. ಜಪಾನ್ ಆಟಗಾರ ಮರುಹೋರಾಟ ನಡೆಸಿ 19–19 ರಿಂದ ಸಮಬಲ ಸಾಧಿಸಿದರು. ಆ ಬಳಿಕ ತಮಗೆ ಲಭಿಸಿದ ಎರಡನೇ ಗೇಮ್ ಪಾಯಿಂಟ್‌ಅನ್ನು ಜಯಿಸಿದ ಭಾರತದ ಆಟಗಾರ ಚಾಂಪಿಯನ್ ಆದರು.

ಕಿರಣ್ ಜಾರ್ಜ್

ಬಾಕ್ಸಿಂಗ್: ಭಾರತಕ್ಕೆ 9 ಚಿನ್ನದ ಪದಕ

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನದ ಸಾದಿಯಾ ಬ್ರೋಮಂಡ್ ಅವರನ್ನು ಮಣಿಸಿದ ಭಾರತದ ಮಂಜು ರಾಣಿ, ಬೋಸ್ನಿಯಾ– ಹರ್ಜೆಗೋವಿನಾದ ಸರಯೇವೊದಲ್ಲಿ ನಡೆದ ಮುಸ್ತಾಫಾ ಹಜ್ರುಲಹೋವಿಕ್ ಸ್ಮಾರಕ ಬಾಕ್ಸಿಂಗ್ ಟೂರ್ನಿಯಲ್ಲಿ ಚಿನ್ನ ಜಯಿಸಿದರು.

ಭಾನುವಾರ ನಡೆದ ಮಹಿಳೆಯರ 50 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಪ್ರಬಲ ಪಂಚ್‌ಗಳನ್ನು ನೀಡಿದ ಮಂಜು 3–0 ಪಾಯಿಂಟ್‌ಗಳಿಂದ ಗೆದ್ದುಕೊಂಡರು. ಟೂರ್ನಿಯ 'ಶ್ರೇಷ್ಠ ಮಹಿಳಾ ಬಾಕ್ಸರ್' ಗೌರವ ಕೂಡಾ ಅವರಿಗೆ ಒಲಿಯಿತು. ಈ ಟೂರ್ನಿಯಲ್ಲಿ ಭಾರತದ ಬಾಕ್ಸರ್‌ಗಳು ಒಟ್ಟು ಒಂಬತ್ತು ಚಿನ್ನ ಮತ್ತು ಒಂದು ಬೆಳ್ಳಿ ಗೆದ್ದುಕೊಂಡರು.

ಪುರುಷರ 63 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಮನೀಶ್ ಕೌಶಿಕ್ 3–0 ಯಿಂದ ಪ್ಯಾಲಸ್ಟೀನ್‌ನ ಮೊಹಮ್ಮದ್ ಸೌದ್ ಅವರನ್ನು ಪರಾಭವಗೊಳಿಸಿದರು. 51 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಬರುನ್ ಸಿಂಗ್ 3–0 ಯಿಂದ ಪೋಲೆಂಡ್‌ನ ಯಾಕುಬ್ ಸ್ಲೊಮಿನ್ಸ್ಕಿ ವಿರುದ್ಧ ಗೆದ್ದರು.

57 ಕೆ.ಜಿ. ವಿಭಾಗದಲ್ಲಿ ಆಕಾಶ್ ಕುಮಾರ್ 1–2 ರಿಂದ ಸ್ವೀಡನ್‌ನ ಹದಿ ಹರ್ದೋಸ್ ಕೈಯಲ್ಲಿ ಪರಾಭವಗೊಂಡು ಬೆಳ್ಳಿಗೆ ತೃಪ್ತಿಪಟ್ಟರು. 92 ಕೆ.ಜಿ. ವಿಭಾಗದಲ್ಲಿ ನವೀನ್ ಕುಮಾರ್ 2–1 ರಿಂದ ಪೋಲೆಂಡ್‌ನ ಮಟೆಯಸ್ ಬೆರೆಜ್‌ನಿಕಿ ವಿರುದ್ಧ ಗೆದ್ದರು.

ಫೈನಲ್‌ನಲ್ಲಿ ಎದುರಾಳಿಗಳು ಕಣಕ್ಕಿಳಿಯದ ಕಾರಣ ಭಾರತದ ಜ್ಯೋತಿ, ಶಶಿ, ಜಿಜ್ಞಾಸ, ವಿನಾಕ್ಷಿ ಮತ್ತು ಸತೀಶ್ ಕುಮಾರ್ ಅವರನ್ನು ವಿಜೇತರು ಎಂದು ಘೋಷಿಸಲಾಯಿತು.

ಆರ್ಚರಿ: ಪ್ರಥಮೇಶ್‌ಗೆ ಬೆಳ್ಳಿ

ಹೆರ್ಮೊಸಿಲೊ, ಮೆಕ್ಸಿಕೊ (ಪಿಟಿಐ): ಭಾರತದ ಕಾಂಪೌಂಡ್ ಆರ್ಚರಿ ಸ್ಪರ್ಧಿ ಪ್ರಥಮೇಶ್ ಜಾವ್ಕರ್ ಅವರು ಇಲ್ಲಿ ನಡೆಯುತ್ತಿರುವ 'ವಿಶ್ವಕಪ್ ಫೈನಲ್' ಆರ್ಚರಿಯಲ್ಲಿ ಬೆಳ್ಳಿ ಜಯಿಸಿದರು.

ಭಾನುವಾರ ನಡೆದ ಫೈನಲ್‌ನಲ್ಲಿ ಪ್ರಥಮೇಶ್, ಡೆನ್ಮಾರ್ಕ್‌ನ ಮಥಿಯಾಸ್ ಫುಲ್ಲೆರ್ಟನ್ ಎದುರು ಸೋತರು. ಜಿದ್ದಾಜಿದ್ದಿನ ಹಣಾಹಣಿಯಲ್ಲಿ ಉಭಯ ಸ್ಪರ್ಧಿಗಳು 148–148 ರಿಂದ ಸಮಬಲ ಸಾಧಿಸಿದ್ದರು. ಶೂಟ್ ಆಫ್‌ನಲ್ಲಿ ಮಥಿಯಾಸ್ ನಿಖರ ಗುರಿ ಸಾಧಿಸಿ ಚಿನ್ನ ತಮ್ಮದಾಗಿಸಿಕೊಂಡರು.

ಮಹಾರಾಷ್ಟ್ರದ ಪ್ರಥಮೇಶ್ ಅವರು ಸೆಮಿಫೈನಲ್‌ನಲ್ಲಿ 150–149 ರಿಂದ ವಿಶ್ವದ ಅಗ್ರಮಾನ್ಯ ಆಟಗಾರ ಡೆನ್ಮಾರ್ಕ್‌ನ ಮೈಕ್ ಶ್ಲೋಸೆರ್ ಅವರಿಗೆ ಆಘಾತ ನೀಡಿದ್ದರು.

ಶ್ಲೋಸೆರ್ ಅವರು ಕಂಚಿನ ಪದಕಕ್ಕೆ ತೃಪ್ತಿಪಟ್ಟುಕೊಂಡರು. ಮೂರನೇ ಸ್ಥಾನಕ್ಕಾಗಿ ನಡೆದ ಹಣಾಹಣಿಯಲ್ಲಿ ಅವರು 150–149 ರಿಂದ ಭಾರತದ ಅಭಿಷೇಕ್ ವರ್ಮಾ ಎದುರು ಜಯಿಸಿದರು. ವರ್ಮಾ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಅಮೆರಿಕದ ಸಾಯೆರ್ ಸುಲಿವನ್ ಅವರನ್ನು ಮಣಿಸಿದ್ದರು.

ಮಹಿಳೆಯರ ವಿಭಾಗದಲ್ಲಿ ಭಾರತಕ್ಕೆ ನಿರಾಸೆ ಎದುರಾಯಿತು. ಜ್ಯೋತಿ ಸುರೇಖಾ ವೆನ್ನಂ ಮತ್ತು ಅದಿತಿ ಸ್ವಾಮಿ ಅವರು ಕ್ವಾರ್ಟರ್ ಫೈನಲ್‌ನಲ್ಲಿ ನಿರ್ಗಮಿಸಿದರು. ರಿಕರ್ವ್ ವಿಭಾಗದಲ್ಲಿ ಭಾರತದ ಧೀರಜ್ ಬೊಮ್ಮದೇವರ ಮಾತ್ರ ಕಣದಲ್ಲಿದ್ದಾರೆ.

ಏಕದಿನ ರ‍್ಯಾಂಕಿಂಗ್: ಅಗ್ರಸ್ಥಾನಕ್ಕೇರಿದ ಆಸ್ಟ್ರೇಲಿಯಾ

ದುಬೈ (ಪಿಟಿಐ): ಆಸ್ಟ್ರೇಲಿಯಾ ತಂಡದವರು ಐಸಿಸಿ ಏಕದಿನ ಕ್ರಿಕೆಟ್ ರ‍್ಯಾಂಕಿಂಗ್ ಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೇರಿದ್ದಾರೆ. ಅಲ್ಪ ಅವಧಿಗೆ ಅಗ್ರಸ್ಥಾನದಲ್ಲಿದ್ದ ಪಾಕಿಸ್ತಾನ ತಂಡ ಮತ್ತೆ ಎರಡನೇ ಸ್ಥಾನಕ್ಕೆ ಇಳಿದಿದೆ.

ದಕ್ಷಿಣ ಆಫ್ರಿಕಾ ವಿರುದ್ಧ ಶನಿವಾರ ನಡೆದ 2ನೇ ಏಕದಿ ಪಂದ್ಯವನ್ನು ಗೆದ್ದುಕೊಂಡದ್ದು, ಆಸ್ಟ್ರೇಲಿಯಾ (121 ರೇಟಿಂಗ್ ಪಾಯಿಂಟ್ಸ್) ಅಗ್ರಸ್ಥಾನಕ್ಕೇರಲು ಕಾರಣ. ಪಾಕಿಸ್ತಾನ (120) ಮತ್ತು ಭಾರತ ತಂಡಗಳು (114) ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನಗಳಲ್ಲಿವೆ.

ಬ್ಲೋಮ್‌ಫಾಂಟೇನ್‌ನಲ್ಲಿ ನಡೆದ ಪಂದ್ಯವನ್ನು ಮಿಚೆಲ್ ಮಾರ್ಷ್ ಬಳಗ 123 ರನ್‌ಗಳಿಂದ ಜಯಿಸಿತು.

ಮೊದಲು ಬ್ಯಾಟ್ ಮಾಡಿದ್ದ ಆಸ್ಟ್ರೇಲಿಯಾ, ಡೇವಿಡ್ ವಾರ್ನರ್ (106) ಮತ್ತು ಮಾರ್ನಸ್ ಲಾಬುಶೇನ್ (124) ಅವರ ಶತಕಗಳ ನೆರವಿನಿಂದ 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 392 ರನ್ ಗಳಿಸಿತು.

ಸವಾಲಿನ ಗುರಿ ಬೆನ್ನಟ್ಟಿದ ಆತಿಥೇಯ ತಂಡ 41.5 ಓವರ್‌ಗಳಲ್ಲಿ 269 ರನ್‌ಗಳಿಗೆ ಆಲೌಟಾಯಿತು. ಕ್ವಿಂಟನ್ ಡಿಕಾಕ್ (45), ತೆಂಬಾ ಬವುಮಾ (46) ಹಾಗೂ ಹೆನ್ರಿಕ್ ಕ್ಲಾಸೆನ್ ಹಾಗೂ ಡೇವಿಡ್ ಮಿಲ್ಲರ್ (ತಲಾ 49) ಮಾತ್ರ ಅಲ್ಪ ಹೋರಾಟ ತೋರಿದರು. ಆ್ಯಡಂ ಜಂಪಾ 48 ರನ್‌ಗಳಿಗೆ 4 ವಿಕೆಟ್ ಪಡೆದರು. ಆಸ್ಟ್ರೇಲಿಯಾ ತಂಡ ಐದು ಪಂದ್ಯಗಳ ಸರಣಿಯಲ್ಲಿ 2–0 ಯಿಂದ ಮುನ್ನಡೆ ಸಾಧಿಸಿದೆ.

ಪ್ಯಾರಾ ಶೂಟಿಂಗ್: ವೇಣುಗೋಪಾಲಗೆ ಚಿನ್ನ

ಹುಬ್ಬಳ್ಳಿ: ಬೆಂಗಳೂರಿನ ವೇಣುಗೋಪಾಲ ಜಯಚಂದ್ರ ಅವರು ಹುಬ್ಬಳ್ಳಿ ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿಯು ಕರ್ನಾಟಕ ರಾಜ್ಯ ಅಂಗವಿಕಲರ ಕ್ರೀಡಾ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ 3ನೇ ಶೂಟಿಂಗ್ ಚಾಂಪಿಯನ್‌ಷಿಪ್‌ನ ಏರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು.

ಇದೇ ವಿಭಾಗದ ಸ್ಪರ್ಧೆಯಲ್ಲಿ ಮೈಸೂರಿನ ಎಂ.ಎಸ್. ನಾಗೇಂದ್ರ ಬೆಳ್ಳಿ ಪದಕ, ಬೆಂಗಳೂರಿನ ಎಂ.ಆರ್. ಕಿರಣಕುಮಾರ ಕಂಚು ಜಯಿಸಿದರು.

ಫಲಿತಾಂಶ: ಏರ್ ರೈಫಲ್ ಪೀಪ್ ಸೈಟ್ ಸ್ಟ್ಯಾಂಡಿಂಗ್: ರಾಕೇಶ ನಿಡಗುಂದಿ (ಧಾರವಾಡ)–1, ಶಂಕರಲಿಂಗ ತವಳಿ (ಧಾರವಾಡ)–2. ಏರ್ ರೈಫಲ್ ಪೀಪ್ ಸೈಟ್ ಪ್ರೋನ್: ಜ್ಯೋತಿ ಸಣ್ಣಕ್ಕಿ (ಧಾರವಾಡ)–1, ಸಚಿನ್ ಸಿದ್ದಣ್ಣವರ (ಧಾರವಾಡ)–2. ಏರ್ ಪಿಸ್ತೂಲ್ (ಎನ್‌ಆರ್): ಅಜಯ್ (ಬೆಂಗಳೂರು)–1, ಕೇಶವ ತೆಲುಗು (ಧಾರವಾಡ)–2.

ಓಪನ್ ಸೈಟ್ ರೈಫಲ್ (ಪುರುಷ): ರಾಘವೇಂದ್ರ ಸುಂಕದ್ (ಧಾರವಾಡ)–1, ಎಚ್.ಕೊತ್ವಾಲ್ (ಬಾಗಲಕೋಟೆ)–2, ಮಲ್ಲಿಕಾರ್ಜುನ (ವಿಜಯಪುರ)–3. ಓಪನ್ ಸೈಟ್ ರೈಫಲ್ (ಮಹಿಳೆ): ಪ್ರತಿಭಾ ಮಾದರ (ಬಾಗಲಕೋಟೆ)–1, ಸಂಗಮ್ಮ ಆಲದಗಿಡದ (ಧಾರವಾಡ), ಯಲ್ಲವ್ವ ರಾಯಚೂರ (ಬಾಗಲಕೋಟೆ)–3.

ಟೂರ್ನಿಯಲ್ಲಿ ವಿವಿಧ ಜಿಲ್ಲೆಗಳ 41 ಪ್ಯಾರಾ ಶೂಟರ್‌ಗಳು ಭಾಗವಹಿಸಿದ್ದರು ಎಂದು ಹುಬ್ಬಳ್ಳಿ ಸ್ಪೋರ್ಟ್ಸ್ ಅಕಾಡೆಮಿಯ ಮುಖ್ಯಸ್ಥ ರವಿಚಂದ್ರ ಬಾಲೆಹೊಸೂರು ತಿಳಿಸಿದ್ದಾರೆ.

ವೈಯಕ್ತಿಕವಾಗಿ ಟೀಕಿಸಿಲ್ಲ: ಪ್ರಸಾದ್

ವೆಂಕಟೇಶ್ ಪ್ರಸಾದ್

ನವದೆಹಲಿ (ಪಿಟಿಐ): 'ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಟಿಕೆಟ್ ಮಾರಾಟ ಮತ್ತು ವೇಳಾಪಟ್ಟಿಯನ್ನು ಇನ್ನಷ್ಟು ಉತ್ತಮವಾಗಿ ನಿರ್ವಹಿಸುವ ಅಗತ್ಯವಿತ್ತು ಎಂದಷ್ಟೇ ಹೇಳಿದ್ದೆ. ಈ ವಿಷಯದಲ್ಲಿ ಯಾರನ್ನೂ ವೈಯಕ್ತಿಕವಾಗಿ ನಿಂದಿಸಿಲ್ಲ' ಎಂದು ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಸ್ಪಷ್ಟಪಡಿಸಿದ್ದಾರೆ.

ಮುಂದಿನ ತಿಂಗಳು ಆರಂಭವಾಗುವ ವಿಶ್ವಕಪ್ ಟೂರ್ನಿಯ ವೇಳಾಪಟ್ಟಿಯನ್ನು ಪ್ರಕಟಿಸಿದ ಕೆಲವು ದಿನಗಳ ನಂತರ ಪರಿಷ್ಕರಿಸಲಾಗಿತ್ತು. ಭಾರತ ಮತ್ತು ಪಾಕಿಸ್ತಾನ ನಡುವಣ ಹಣಾಹಣಿ ಸೇರಿದಂತೆ ಒಂಬತ್ತು ಪಂದ್ಯಗಳ ದಿನಾಂಕ ಬದಲಿಸಲಾಗಿತ್ತು. ಅಹಮದಾಬಾದಿನಲ್ಲಿ ನಡೆಯುವ ಭಾರತ ಮತ್ತು ಪಾಕ್ ಪಂದ್ಯವು ಮೊದಲು ಅಕ್ಟೋಬರ್ 15ರಂದು ಆಯೋಜನೆಯಾಗಿತ್ತು. ಆ ಸಂದರ್ಭದಲ್ಲಿ ನವರಾತ್ರಿ ಆರಂಭವಾಗುವ ಕಾರಣದಿಂದ ಅ.14ಕ್ಕೆ ಹಿಂದೂಡಲಾಯಿತು.

ಭಾರತ ತಂಡದ ಮಾಜಿ ಮಧ್ಯಮವೇಗಿ ಪ್ರಸಾದ್, ಎಕ್ಸ್ (ಟ್ವಿಟರ್) ಖಾತೆಯಲ್ಲಿ ಸರಣಿ ಸಂದೇಶಗಳನ್ನು ಹಾಕಿ, ಬಿಸಿಸಿಐ ಕಾರ್ಯವೈಖರಿಗೆ ಆಕ್ಷೇಪ ವ್ಯಕ್ತಪಡಿಸಿದ್ದರು.

'ಒಬ್ಬ ಭ್ರಷ್ಟ ಹಾಗೂ ಅಹಂಕಾರದ ವ್ಯಕ್ತಿಯಿಂದಾಗಿ ಹಲವರು ಅಪಾರ ಪರಿಶ್ರಮ ಹಾಗೂ ಪ್ರಾಮಾಣಿಕವಾಗಿ ಕಟ್ಟಿದ ಸಂಸ್ಥೆಯ ವರ್ಚಸ್ಸು ನಾಶವಾಗುತ್ತದೆ. ಇದರ ಪರಿಣಾಮ ದೊಡ್ಡ ಮಟ್ಟದವರೆಗೂ ಆಗುತ್ತದೆ. ರಾಜಕೀಯ, ಕ್ರೀಡೆ, ಪತ್ರಿಕೋದ್ಯಮ, ಕಾರ್ಪೊರೇಟ್ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿಯೂ ಇದೇ ರೀತಿ ಇರುವುದು ಸತ್ಯ' ಎಂದು ಉಲ್ಲೇಖಿಸಿದ್ದರು.

ಆದರೆ ಅವರ ಸಂದೇಶದಲ್ಲಿ ಯಾರ ಹೆಸರೂ ಇರಲಿಲ್ಲ. ಆದರೂ ಸಾಮಾಜಿಕ ಜಾಲತಾಣದಲ್ಲಿ ಹಲವು ರೀತಿಯ ಸಂದೇಶಗಳು ಹರಿದಾಡಿದ್ದವು.

ಈ ಕುರಿತು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿರುವ ಪ್ರಸಾದ್, 'ವೈಯಕ್ತಿಕವೇನಿಲ್ಲ. ಅವಲೋಕನ ಮಾತ್ರ' ಎಂದರು.

'ಜೀವನದ ವಿವಿಧ ಹಂತಗಳಲ್ಲಿ ಇರುವ ಭ್ರಷ್ಟತೆಯ ಬಗ್ಗೆ ಹೇಳಿದ್ದೆ. ಅದು ವಿಮಾನಯಾನ ಉದ್ಯಮ, ಬ್ಯಾಂಕಿಂಗ್, ಮತ್ತು ಐಪಿಎಲ್ ಫ್ರ್ಯಾಂಚೈಸಿ ಕೂಡ ನಿಷೇಧವಾಗಿದ್ದಿರಬಹುದು. ಇನ್ನುಳಿದ ಟ್ವೀಟ್‌ಗಳಲ್ಲಿ ಬಿಸಿಸಿಐ ಟಿಕೆಟ್ ಮತ್ತು ವೇಳಾಪಟ್ಟಿ ನಿರ್ವಹಣೆ ಕುರಿತು ಟೀಕಿಸಿದ್ದೆ' ಎಂದು ಹೇಳಿದರು.

ಡಿಎಚ್ ಕಪ್: ಐಕ್ವಿಯಾ, ಸ್ವಿಸ್ ರೇ ತಂಡಗಳಿಗೆ ಜಯ

ಬೆಂಗಳೂರು: ಐಕ್ವಿಯಾ, ಸ್ವಿಸ್ ರೇ ತಂಡಗಳು ಇಲ್ಲಿ ನಡೆಯುತ್ತಿರುವ ಟ್ರೂಆಲ್ಟ್ ಬಯೊಎನರ್ಜಿ ಡಿಎಚ್ ಕಪ್–2023 'ಫೈವ್ ಎ ಸೈಡ್' ಕಾರ್ಪೊರೇಟ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆಲುವು ಸಾಧಿಸಿದವು.

ಟೂರ್ನಿಯ ಎರಡನೇ ದಿನವಾದ ಭಾನುವಾರ ನಡೆದ ಪಂದ್ಯದಲ್ಲಿ ಐಕ್ವಿಯಾ ತಂಡವು 3–1 ಗೋಲುಗಳಿಂದ ಬಿಗ್ ಬ್ರೂಸ್ಕಿ ತಂಡವನ್ನು ಮಣಿಸಿದರೆ, ಸ್ವಿಸ್ ರೇ ತಂಡವು 9–0ಯಿಂದ ಜೆನೆಕ್ಸ್ ತಂಡದ ವಿರುದ್ಧ ಸುಲಭ ಜಯ ದಾಖಲಿಸಿತು.

ವಿಸೆನ್ ಇನ್ಫೋಟೆಕ್ ತಂಡವು ಅಡೋಬಿ ತಂಡ ಮತ್ತು ಬಿಗ್ ಬ್ರೂಸ್ಕಿ ತಂಡಗಳ ವಿರುದ್ಧ ಕ್ರಮವಾಗಿ 8–1ರಿಂದ ಮತ್ತು 14–5ರಿಂದ ಜಯ ಗಳಿಸಿತು.

ಜಾನ್ ಡಿಸ್ಟಿಲರೀಸ್ ತಂಡವು 2–0ರಿಂದ ಟಿವಿಎಸ್ ಮೋಟರ್ ತಂಡದ ವಿರುದ್ಧ ಗೆಲುವು ಸಾಧಿಸಿದರೆ, ಸ್ವಿಸ್ ರೇ ತಂಡದ ವಿರುದ್ಧ 2–2ರಿಂದ ಡ್ರಾ ಸಾಧಿಸಿತು.

ಇತರ ಪಂದ್ಯಗಳಲ್ಲಿ ದಿ ಟಿಮ್‌ಕೆನ್ ಕಂಪನಿ 7–1ರಿಂದ ಮಾಯಾ ಎಸ್ಟೇಟ್ಸ್ ವಿರುದ್ಧ; ಬಾಷ್ 11–1ರಿಂದ ಜೆನೆಕ್ಸ್ ವಿರುದ್ಧ; ದಿ ಟಿಮ್‌ಕೆನ್ ಕಂಪನಿ 7–0ಯಿಂದ ಮಾಯಾ ಎಸ್ಟೇಟ್ಸ್ ವಿರುದ್ಧ; ಅಡೋಬಿ 7–0ಯಿಂದ ಬ್ರಿಗೇಡ್ ಗ್ರೂಪ್ ವಿರುದ್ಧ; ಎಂಯು ಸಿಗ್ಮಾ ತಂಡ 4–1ರಿಂದ ಟಿವಿಎಸ್ ಮೋಟರ್ ಕಂ. ವಿರುದ್ಧ ಗೆಲುವು ಸಾಧಿಸಿದವು.

ಬ್ಯಾಡ್ಮಿಂಟನ್: ಕ್ವಾರ್ಟರ್‌ಗೆ ಆಯುಷ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಆಯುಷ್ ಶೆಟ್ಟಿ ಅವರು ಇಲ್ಲಿ ನಡೆಯುತ್ತಿರುವ ಯೋನೆಕ್ಸ್- ಸನ್‌ರೈಸ್ 46ನೇ ಜೂನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ 19 ವರ್ಷದೊಳಗಿನವರ ಪುರುಷರ ಸಿಂಗಲ್ಸ್ ಪಂದ್ಯದಲ್ಲಿ ತೆಲಂಗಾಣದ ನುಮ್ಮೈರ್ ಶೇಕ್ ಅವರನ್ನು ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಭಾನುವಾರ ನಡೆದ ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಆಯುಷ್ 21–14, 21–13ರಿಂದ 15ನೇ ಶ್ರೇಯಾಂಕದ ನುಮ್ಮೈರ್ ವಿರುದ್ಧ ಜಯ ಸಾಧಿಸಿದರು.

ಕರ್ನಾಟಕದ ತುಷಾರ್ ಸುವೀರ್ 21–15, 21–19ರಿಂದ ರಾಜಸ್ತಾನದ ಮನೀಷ್ ಪೋಗಟ್ ವಿರುದ್ಧ ಗೆಲುವು ಸಾಧಿಸಿದರೆ, ಕರ್ನಾಟಕದ ಮತ್ತೊಬ್ಬ ಆಟಗಾರ ನಿಕೋಲಸ್ ನಾಥನ್ ರಾಜ್ 21-16, 21-14ರಿಂದ ಹರಿಯಾಣದ ಗಗನ್ ಅವರನ್ನು ಮಣಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಕರ್ನಾಟಕದ ರುಜುಲಾ ರಾಮು 21-10, 21-17ರಿಂದ ತೆಲಂಗಾಣದ ತನ್ವಿ ರೆಡ್ಡಿ ಅಂಡ್ಲೂರಿ ವಿರುದ್ಧ ಗೆಲುವು ಸಾಧಿಸಿದರು. ಕರ್ನಾಟಕದ ಜೇಡ್ ಅನಿಲ್, ಎ. ನೇಯ್ಸಾ ಕಾರ್ಯಪ್ಪ, ಮುಸ್ಕಾನ್ ಖಾನ್ ಅವರು 16ರ ಘಟ್ಟದಲ್ಲಿ ಹೊರಬಿದ್ದರು.

ಸಂಕ್ಷಿಪ್ತ ಸುದ್ದಿ

ಟೇಬಲ್ ಟೆನಿಸ್: ಅಧ್ಯಕ್ಷರಾಗಿ ರಕ್ಷಾ ರಾಮಯ್ಯ ಆಯ್ಕೆ

ರಕ್ಷಾ ರಾಮಯ್ಯ

ಧಾರವಾಡ: ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ (ಕೆಟಿಟಿಎ) ಅಧ್ಯಕ್ಷರಾಗಿ ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಂ.ಎಸ್. ರಕ್ಷಾ ರಾಮಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು ಇಲ್ಲಿಯವರೆಗೆ ಅಧ್ಯಕ್ಷರಾಗಿದ್ದರು. ನಗರದ ಜಿಮಖಾನಾ ಕ್ಲಬ್‌ನಲ್ಲಿ ಭಾನುವಾರ ಚುನಾವಣೆ ನಡೆಯಿತು. ಮುಂದಿನ ನಾಲ್ಕು ವರ್ಷಗಳ ಅವಧಿಗೆ ಪದಾಧಿಕಾರಿಗಳ ಆಯ್ಕೆ ನಡೆಯಿತು.

ಕಾರ್ಯಾಧ್ಯಕ್ಷರಾಗಿ ರಮೇಶ್ ಶಾಸ್ತ್ರಿ, ಉಪಾಧ್ಯಕ್ಷರಾಗಿ ರೋಹಿತ್ ಆರ್, ಶಿವಕುಮಾರ್ ಎಂ.ಕೆ, ಗೌತಮ್ ಶೆಟ್ಟಿ, ವಾದಿರಾಜ್ ಎಸ್. ಕಟ್ಟಿ ಹಾಗೂ ಆರ್. ಕೆ.ಜಯಚಂದ್ರ ರಾವ್ ಆಯ್ಕೆಯಾಗಿದ್ದಾರೆ. ಕಾರ್ಯದರ್ಶಿಯಾಗಿ ಕೆ.ಆರ್. ಮಂಜುನಾಥ್, ಜಂಟಿ ಕಾರ್ಯದರ್ಶಿಗಳಾಗಿ ರವಿಕುಮಾರ್ ಎಸ್.ನಾಯಕ, ಜಿ.ಎ.ಅಂಬೇಕರ, ತಾಹಿರ್ ಸನದಿ, ಖಜಾಂಚಿಯಾಗಿ ಶ್ಯಾಮ್ ಬೈಲೂರ್ ಆಯ್ಕೆಯಾಗಿದ್ದಾರೆ.

'ಟೇಬಲ್ ಟೆನಿಸ್ ತರಬೇತಿಯಲ್ಲಿ ಸುಧಾರಣೆ, ಕರ್ನಾಟಕದಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದ ಟೇಬಲ್ ಟೆನಿಸ್ ಟೂರ್ನಿ ಆಯೋಜನೆ, ಸಾಮಾನ್ಯ ಜನರಿಗೂ ಈ ಆಟವನ್ನು ತಲುಪುವಂತೆ ಮಾಡುತ್ತೇವೆ. ಪದಾಧಿಕಾರಿಗಳೊಂದಿಗೆ ಚರ್ಚಿಸಿ ಈ ನಿಟ್ಟಿನಲ್ಲಿ ಕ್ರಮವಹಿಸುತ್ತೇನೆ' ಎಂದು ರಕ್ಷಾ ರಾಮಯ್ಯ 'ಪ್ರಜಾವಾಣಿ'ಗೆ ತಿಳಿಸಿದರು.

ಕೊಡಗು ಎಫ್‌ಸಿ ತಂಡಕ್ಕೆ ಗೆಲುವು

ಬೆಂಗಳೂರು: ಕೊಡಗು ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–0ಯಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಕೊಡಗು ತಂಡದ ಅಲೆಕ್ಸ್ (46, 55ನೇ) ಎರಡು ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಬಿಎಫ್‌ಸಿ ತಂಡವು 6–0ಯಿಂದ ಎಫ್‌ಸಿ ಡೆಕ್ಕನ್ ತಂಡವನ್ನು ಸುಲಭವಾಗಿ ಸೋಲಿಸಿತು.

ಲೆಬನಾನ್ ವಿರುದ್ಧ ಭಾರತಕ್ಕೆ ಸೋಲು

ಚಿಯಾಂಗ್ ಮೈ, ಥಾಯ್ಲೆಂಡ್ (ಪಿಟಿಐ): ಕಿಂಗ್ಸ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಭಾರತ ತಂಡವು ಲೆಬನಾನ್ ತಂಡದ ವಿರುದ್ಧ 0–1ರಿಂದ ಸೋತು ನಿರಾಸೆ ಅನುಭವಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಮೊದಲಾರ್ಧದಲ್ಲಿ ಯಾವುದೇ ತಂಡಕ್ಕೆ ಗೋಲು ಗಳಿಸಲು ಸಾಧ್ಯವಾಗಲಿಲ್ಲ. 77ನೇ ನಿಮಿಷದವರೆಗೂ ಉಭಯ ತಂಡಗಳು ಸಮಬಲದ ಪೈಪೋಟಿ ನಡೆಸಿದವು. ಈ ವೇಳೆ ಕಸ್ಸೆಮ್ ಇಲ್ ಝೀನ್ ಅವರು ಬೈಸಿಕಲ್ ಕಿಕ್ ಮೂಲಕ ಚೆಂಡನ್ನು ಗುರಿ ಸೇರಿಸಿ ಲೆಬನಾನ್ ತಂಡಕ್ಕೆ ಜಯದ ಮುನ್ನುಡಿ ಬರೆದರು. ಟೂರ್ನಿಯಲ್ಲಿ ಲೆಬನಾನ್ ತಂಡ ಕಂಚಿನ ಪದಕ ಗಳಿಸಿತು.

ಭಾರತವು ಸೆಮಿಫೈನಲ್ ಪಂದ್ಯದಲ್ಲಿ ಇರಾಕ್ ವಿರುದ್ಧ ಪೆನಾಲ್ಟಿ ಶೂಟೌಟ್‌ನಲ್ಲಿ (4–5) ಸೋಲು ಅನುಭವಿಸಿತ್ತು.

ಇರಾಕ್‌ಗೆ ಪ್ರಶಸ್ತಿ: ಇರಾಕ್ ತಂಡವು ಫೈನಲ್ ಪಂದ್ಯದಲ್ಲಿ ಆತಿಥೇಯ ಥಾಯ್ಲೆಂಡ್ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ (5–4) ಮಣಿಸಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಹೊಸಪೇಟೆಯಲ್ಲಿ ಆಫ್‌ರೋಡ್ ಮೋಟಾರ್ ಸ್ಪೋರ್ಟ್ಸ್

ಬಿಜೇಂದರ್, ಗಜೇಂದರ್ ಜಯಭೇರಿ

ಹೊಸಪೇಟೆ (ವಿಜಯನಗರ): ಫೆಡರೇಶನ್ ಆಫ್ ಮೋಟಾರ್ ಸ್ಪೋರ್ಟ್ಸ್ ಕ್ಲಬ್ ಆಫ್ ಇಂಡಿಯಾದ ಆಶ್ರಯದಲ್ಲಿ ವಿಜಯನಗರದ ಮೋಟಾರ್ ಸ್ಪೋರ್ಟ್ಸ್ ಅಕಾಡೆಮಿ ವತಿಯಿಂದ ಇಲ್ಲಿಗೆ ಸಮೀಪದ ರಾಜಾಪುರ ಬೆಟ್ಟದಲ್ಲಿ ಭಾನುವಾರ ಸಂಜೆ ಕೊನೆಗೊಂಡ 4x4 ಆಫ್ ರೋಡ್ ಚಾಲೆಂಜ್ ಮೋಟಾರ್ ಸ್ಪೋರ್ಟ್ಸ್‌ನ ಪ್ರೊ ಮಾಡಿಫೈಡ್ ಕ್ಲಾಸ್ ವಿಭಾಗದಲ್ಲಿ ಬಿಜೇಂದರ್ ಸಿಂಗ್–ಗಜೇಂದರ್ ಸಿಂಗ್ 644 ಅಂಕಗಳೊಂದಿಗೆ ಪ್ರಶಸ್ತಿ ಗಳಿಸಿದ್ದಾರೆ.

ಸ್ಪರ್ಧೆಯಲ್ಲಿ 64 ವಾಹನಗಳು ಪಾಲ್ಗೊಂಡಿದ್ದವು. ಭಾನುವಾರ ರಾತ್ರಿ ಪ್ರಶಸ್ತಿ ಪ್ರದಾನ ನಡೆದಿದ್ದು, ಪ್ರತಿ ವಿಭಾಗದಲ್ಲಿ ವಿಜೇತರಿಗೆ ₹75 ಸಾವಿರ ಸಹಿತ ಒಟ್ಟು ₹ 5.50 ಲಕ್ಷ ಬಹುಮಾನ ವಿತರಿಸಲಾಯಿತು.

ಫಲಿತಾಂಶ: ಪ್ರೊ ಮಾಡಿಫೈಡ್ ಕ್ಲಾಸ್: ಬಿಜೇಂದರ್ ಸಿಂಗ್–ಗಜೇಂದರ್ ಸಿಂಗ್ (644), ಎಂ.ರಾಮಬಾಬು–ಟಿ.ಕುಮಾರಸ್ವಾಮಿ (622), ಚೇತನ್ ಚೆಂಗಪ್ಪ–ಮಯೂರ್ ಬೋಪಯ್ಯ (580).

ಮಾಡಿಫೈಡ್ ಕ್ಲಾಸ್: ಮೊಹಮ್ಮದ್ ಫಹದ್–ರಾಜೀವ್ ಲಾಲ್ (640), ಸಿರಿಲ್ ಡಿಮೆಲ್ಲೊ–ಸುಭಾಶ್ ಉತೇಕರ್ (614), ಮನೋಜ್ ಬಿರಾದಾರ್–ಸಚಿನ್ ಗಡಶೆಟ್ಟಿ (592).

ಮಾಡಿಫೈಡ್ ಪೆಟ್ರೋಲ್ ಕ್ಲಾಸ್: ಸರ್ಜೆರಾವ್ ಕಾವಡೆ–ವೈಭವ್ ಶೆಲುಕರ್ (565), ಉಮೇಶ್ ರಾಣೆ–ಅರಿಯಲಾಡ್ (510), ಮಹೇಶ್ ಬಿರಮನೆ–ಕಾಳಿದಾಸ್ ದೋಣಗೆರೆ (454).

ಸ್ಟಾಕ್ ಪೆಟ್ರೋಲ್: ಕೃಷ್ಣಕಾಂತ್ ಎಸ್. ಸೈಂಧವ್–ಅಶ್ವಿನ್ ಶಿಂದೆ (750), ಪ್ರದೀಪ್–ಸಂದೀಪ್ (715), ಪ್ಲಬನ್ ಪಟ್ನಾಯಕ್–ಶೆಲ್ಟನ್ ಗೋಮ್ಸ್ (703).

ಡೀಸೆಲ್ ಕ್ಲಾಸ್: ಪೂಣಚ್ಚ ಪಿ.ಬಿ–ಗೌರವ್ ಅಯ್ಯಪ್ಪ (725), ವಿನಯ್ ಕುಮಾರ್ ಎಚ್.ಸಿ.–ವಿಕ್ರಮ್ ಗೌಡ (706), ವೈಭವ್ ರೆಡ್ಡಿ–ಅನುರಾಗ್ ಅಂಗೋಲ್ ಹಾಗೂ ಅಪ್ಪನ್ನ ಬಿ.ಕೆ.–ಶಮಂತ್ (689) (ಟೈ)

ಥಾರ್ ಕ್ಲಾಸ್: ನವೀನ್ ಪುಲಿಗಿಲ್ಲ–ಗಿರಿ ಬಾಬು (759), ವಿನಯ್ ಎಚ್.–ಸಚಿನ್ ಆರ್. (678), ಆದರ್ಶ್–ಚಂದ್ರಮೌಳಿ (672).

ಲೇಡಿಸ್ ಸ್ಟಾಕ್: ಪ್ರೇರಣಾ ಭಲ್ಲಾ–ರವಿ ಭಲ್ಲಾ (720).

ಲೇಡಿಸ್ ಮಾಡಿಫೈಡ್: ಅನ್ವಿತಾ ಅನಿಕೇತ್–ಅನಿಲೆಟ್ (160)

ಹೊಸಪೇಟೆ ಸಮೀಪದ ರಾಜಾಪುರ ಬೆಟ್ಟದಲ್ಲಿ ಭಾನುವಾರ ಪ್ರೊ ಮಾಡಿಫೈಡ್ ಜೀಪೊಂದು ಕಂದಕದಿಂದ ಮೇಲೆದ್ದು ಬಂದ ಪರಿ —ಪ್ರಜಾವಾಣಿ ಚಿತ್ರ

ಬ್ಯಾಸ್ಕೆಟ್‌ಬಾಲ್: ಜರ್ಮನಿಗೆ ಪ್ರಶಸ್ತಿ

ಮನಿಲಾ (ಎಎಫ್‌ಪಿ): ಫೈನಲ್‌ನಲ್ಲಿ ಸರ್ಬಿಯಾ ತಂಡವನ್ನು 83–77 ಪಾಯಿಂಟ್ಸ್‌ಗಳಿಂದ ಮಣಿಸಿದ ಜರ್ಮನಿ ತಂಡ, ಇದೇ ಮೊದಲ ಬಾರಿ ವಿಶ್ವಕಪ್ ಬ್ಯಾಸ್ಕೆಟ್‌ಬಾಲ್ ಕಿರೀಟ ಮುಡಿಗೇರಿಸಿಕೊಂಡಿತು.

ಭಾನುವಾರ ನಡೆದ ಪಂದ್ಯದಲ್ಲಿ ಡೆನಿಸ್ ಶ್ರೋಡೆರ್ (28 ಪಾಯಿಂಟ್ಸ್) ಮತ್ತು ಫ್ರಾನ್ಸ್ ವ್ಯಾಗ್ನೆರ್ (19) ಅವರು ಜರ್ಮನಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಜರ್ಮನಿ ತಂಡ ಸೆಮಿಫೈನಲ್‌ನಲ್ಲಿ ಅಮೆರಿಕಕ್ಕೆ ಆಘಾತ ನೀಡಿತ್ತು.

ಫೈನಲ್ ಪಂದ್ಯದ ವಿರಾಮದ ವೇಳೆಗೆ ಉಭಯ ತಂಡಗಳು 47–47 ರಿಂದ ಸಮಬಲ ಸಾಧಿಸಿದ್ದವು. ಮೂರನೇ ಕ್ವಾರ್ಟರ್‌ನಲ್ಲಿ 22–10ರ ಮೇಲುಗೈ ಪಡೆದ ಜರ್ಮನಿ, ಪಂದ್ಯವನ್ನು ತನ್ನತ್ತ ಸೆಳೆದುಕೊಂಡಿತು.

ಕೆನಡಾಕ್ಕೆ ಕಂಚು: ಮೂರನೇ ಸ್ಥಾನಕ್ಕಾಗಿ ಪಡೆದ ಪಂದ್ಯದಲ್ಲಿ 127–118 ರಿಂದ ಅಮೆರಿಕ ತಂಡವನ್ನು ಮಣಿಸಿದ ಕೆನಡಾ ಕಂಚಿನ ಪದಕ ಗೆದ್ದುಕೊಂಡಿತು.